ರಂಜನೆ ಬೋಧನೆ ಪ್ರಬೋಧನೆ

ಸೌ

ಲಂಕೇಶ್


ಜುಲೈ 28, 2010 ರೂ. 12/-

ದೇಶ, ಕಾಲಕ್ಕೆ ಸ್ಪಂದಿಸದ 'ದೇಶಕಾಲ'



ರಕೀಲೆ
ಭಾ
ಲಿಗೆ

ಸುಂದರಿಯೊಳಗೊಬ್ಬ ಸೈತಾನ



ಜೋಗಯ್ಯ ಜೋಷ್

ಯಡ್ಡಿ-ರೆಡ್ಡಿ ಡಿಶುಂ! ಡಿಶುಂ!!



ಕೊಪ್ಪಳ: ಸ್ಯಾಡಿಸ್ಟ ಮಲ್ಲಿಯ ಕಾಮಕಾಂಡ

ಇಂದೂಧರ

ಪತ್ನಿ ಕೊಂದು ತಾನೂ ಸತ್ತ



ಕವಲು: ಸ್ತ್ರೀ ದ್ವೇಷಿ ಭೈರಪ್ಪ

ಸದನದ "ಪಾವಿತ್ರ್ಯ"ವೂ, ಮಾಂಸಾಹಾರವೂ ಮತ್ತು "ಪವಿತ್ರ" ಸಂವಿಧಾನವೂ!

ಅಕ್ರಮ ಗಣಿಗಾರಿಕೆಯ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಪಟ್ಟು ಹಿಡಿದಿರುವ ವಿರೋಧ ಪಕ್ಷಗಳು ಎರಡು ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ನಡೆಸುತ್ತಿವೆ. ಮಿಕ್ಕ ಸಮಯದಲ್ಲಿ ಗಂಭೀರ ಚರ್ಚೆ ನಡೆಯುವಾಗಲೂ ಕಾಣಿಸಿಕೊಳ್ಳದ ಶಾಸಕರು ಸಹ ಎರಡು ದಿನಗಳಿಂದ ಪಟ್ಟಾಗಿ ಸದನದಲ್ಲೇ ಝಂಡಾ ಊರಿ ಅಲ್ಲೇ ಊಟ, ತಿಂಡಿ, ನಿದ್ದೆ, ಆಟ ಎಲ್ಲವನ್ನೂ ಮಾಡಿಕೊಳ್ಳುತ್ತಿದ್ದಾರೆ. ಸದನದ ಸಭಾಪತಿಗಳೇ ಎಲ್ಲರಿಗೂ ಪುಷ್ಕಳವಾದ ಊಟದ ವ್ಯವಸ್ಥೆಯನ್ನೂ ಸದನದೊಳಗೇ ಮಾಡಿಸಿದ್ದಾರೆ. ಸಹಜವಾಗಿಯೇ ಶಾಕಾಹಾರಿಗಳಿಗೆ ಶಾಕಾಹಾರೀ ಭೋಜನ, ಮಾಂಸಾಹಾರಿಗಳಿಗೆ ಮಾಂಸಾಹಾರಿ ಭೋಜನ..

ಆದರೆ ಮಾಂಸಾಹಾರಿ ಶಾಸಕರು ಸದನದಲ್ಲಿ ಮಾಂಸಾಹಾರವನ್ನು ತಿಂದಿದ್ದಕ್ಕೆ ಮರುದಿನ ಶ್ರೀಶ್ರೀ ಯಡಿಯೂರಪ್ಪನವರು ಫುಲ್ ಗರಂ ಆಗಿ "ವಿಧಾನಸೌಧವೆಂಬುದು ದೇವಸ್ಥಾನವಿದ್ದಂತೆ. ಅಂಥಾ ದೇವಸ್ಥಾನದೊಳಗೆ ಮಾಂಸಾಹಾರವನ್ನು ತಿಂದು ವಿರೋಧ ಪಕ್ಷಗಳ ಸದಸ್ಯರು ಸದನದ ಪಾವಿತ್ರ್ಯವನ್ನು ಹಾಳು ಮಾಡಿದ್ದಾರೆ" ಎಂದು ಕೂಗಾಡಿದ್ದಾರೆ. ಬ್ರಾಹ್ಮಣಶಾಹಿ ಬಿಜೆಪಿ ಮುಖ್ಯಮಂತ್ರಿಯ ಈ "ಅವಮಾನಕಾರಿ ಹೇಳಿಕೆಯ ವಿರುದ್ಧ ಮಾಂಸಾಹಾರ ತಿಂದ ಶಾಸಕರೂ ಸಹ ಏನೂ ಪ್ರತಿಕ್ರಿಯೆ ವ್ಯಕ್ತಪಡಿಸದೆ ಏನೋ ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡವರಂತೆ ಮೌನ ವಹಿಸಿದ್ದಾರೆ.

ವಿಧಾನಸೌಧದ ಕಲ್ಲು ಗೋಡೆಯ ಮೇಲೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಕೆತ್ತಿದ್ದಾರೆ. ಇಲ್ಲಿ ದೇವರು ಎಂದರೆ ಶಾಕಾಹಾರಿ ದೇವರು ಎಂದೇನೂ ಆಗಿರಬೇಕಿರಲಿಲ್ಲ. ಅದೇ ರೀತಿ ದೇವರಿರುವ ಜಾಗ ದೇವಸ್ಥಾನವೇ ಆಗಿರಬೇಕಿಲ್ಲ, ಅದು ಮಸೀದಿ, ಚರ್ಚ್, ಬೌದ್ಧ ವಿಹಾರ, ಏನು ಬೇಕಾದರೂ ಆಗಿರಬಹುದಲ್ಲ, ಆದರೆ ಬಿಜೆಪಿ "ದೇವರ ಕೆಲಸವನ್ನು", "ಹಿಂದೂ ದೇವರ ಕೆಲಸ" ಎಂದೇ ಓದಿಕೊಂಡು ಸರ್ಕಾರ ನಡೆಸುತ್ತಿದೆ. ದೇವರಿರುವ ಜಾಗ ಅವರಿಗೆ ದೇವಸ್ಥಾನವಾಗಿ ಮಾತ್ರ ಕಾಣುತ್ತದೆ. ಆದ್ದರಿಂದ ಅವರಿಗೆ ಸದನದಲ್ಲಿ ಮಾಂಸಾಹಾರ ತಿಂದದ್ದು ದೇವಸ್ಥಾನವನ್ನೇ ಅಪವಿತ್ರಗೊಳಿಸಿದ ಕ್ರಿಯೆಯಾಗಿ ಕಾಣುತ್ತದೆ.

ಯಡಿಯೂರಪ್ಪ ಸದನವನ್ನು ದೇವಸ್ಥಾನವೆಂದು ಕರೆದಾಗ ಅಲ್ಲಿ ಅವರು ಕಲ್ಪಿಸಿಕೊಳ್ಳುತ್ತಿರುವುದು ಮಾಂಸಾಹಾರಿ ಶೂದ್ರ-ದಲಿತ ಜನಗಳಿಗೆ ಪ್ರವೇಶವಿಲ್ಲದ ಬ್ರಾಹ್ಮಣಶಾಹಿಯ ಸಂಕೇತವಾದ ದೇವಸ್ಥಾನವನ್ನು, ಅದಕ್ಕೆ ಸದನದಲ್ಲಿ ಮಾಂಸಾಹಾರ ತಿಂದದ್ದರಿಂದ ಪಾವಿತ್ರ್ಯ ಹಾನಿಯಾಯಿತೆಂದು ಅವರು ಭಾವಿಸುತ್ತಾರೆ. ಏಕೆಂದರೆ ಅವರ ಕಲ್ಪನೆಯ ದೇವರೂ ಶಾಕಾಹಾರಿ. ಭಕ್ತರೂ ಶಾಕಾಹಾರಿ. ಬಹುಸಂಸ್ಕೃತಿ ಮತ್ತು ಬಹುಧರ್ಮೀಯ ರಾಜ್ಯವೊಂದರ ಮುಖ್ಯಮಂತ್ರಿಯಾದ ಮೇಲೆ ಹಾಗೆ ಬಹಿರಂಗವಾಗಿ ಹೇಳುವುದಿರಲಿ, ಹಾಗೆ ಕಲ್ಪನೆ ಮಾಡಿಕೊಳ್ಳುವುದಕ್ಕೂ ಅವರಿಗೆ ಹಕ್ಕಿಲ್ಲ, ವಿಧಾನಸೌಧ ಈ ನಾಡಿನ ಎಲ್ಲಾ ಜನರಿಗೂ ಸೇರಿದ್ದು. ಇಲ್ಲಿ ಬ್ರಾಹ್ಮಣೀಯ ಪಾವಿತ್ರ್ಯವನ್ನು ಆಚರಿಸುವುದು ಮತ್ತು ಪ್ರತಿಪಾದಿಸುವುದು ಅಪರಾಧ. ಆದರೆ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನದಿಂದ ಸದನವನ್ನು ಒಂದು ಹಿಂದೂ-ಬ್ರಾಹ್ಮಣ ದೇವಸ್ಥಾನವೆಂಬಂತೆ ಕರೆದು, ಮಾಂಸಾಹಾರವನ್ನು ಅಪವಿತ್ರವೆಂಬಂತೆ ಘೋಷಿಸಿರುವುದು ಸಂವಿಧಾನದ ಜಾತ್ಯತೀತ ಆಶಯಗಳಿಗೆ ಮಾಡಿರುವ ಘೋರ ಅಪಮಾನ.

ಸದನವು ಪವಿತ್ರ, ಇಲ್ಲಿ ಮಾಂಸಾಹಾರ ತಿಂದರೆ ಅಪವಿತ್ರವಾಗುತ್ತದೆ ಎಂದ ಯಡಿಯೂರಪ್ಪನವರ ಹೇಳಿಕೆಯ ಹಿಂದಿನ ಬ್ರಾಹ್ಮಣೀಯ ತಿಳಿವಳಿಕೆ ಆಕಸ್ಮಾತ್ತಾಗಿ ಬಂದದ್ದೇನೂ ಅಲ್ಲ, ಅದೇ ರೀತಿ ತಮಗೆ ಮತ್ತು ದಲಿತ-ಶೂದ್ರ, ಬ್ರಾಹ್ಮಣೇತರ ಸಂಸ್ಕೃತಿಗಳಿಗೆ ಮಾಡಿದ ಅಪಮಾನದ ವಿರುದ್ಧ ಪ್ರತಿಪಕ್ಷಗಳು ತೋರಬೇಕಾದಷ್ಟು ಸೈದ್ಧಾಂತಿಕ ಪ್ರತಿರೋಧವನ್ನು ತೋರದಿರುವುದೂ ಕಾಕತಾಳೀಯವೇನಲ್ಲ. ಏಕೆಂದರೆ ನಮ್ಮ ಸಂವಿಧಾನದ ಬಗ್ಗೆಯೇ ಒಂದು ರೀತಿಯ ಬ್ರಾಹ್ಮಣೀಯ ಮೌಲ್ಯಗಳುಳ್ಳ "ಪವಿತ್ರ" ಕಲ್ಪನೆಯನ್ನು ಬೆಳೆಸಲಾಗಿದೆ ಹಾಗೂ ಅದಕ್ಕೆ ತದ್ವಿರುದ್ಧವಾಗಿ ಅಬ್ರಾಹ್ಮಣವಾದ್ದರ ಬಗ್ಗೆ ಕೀಳರಿಮೆಯನ್ನೂ ಬೆಳೆಸಲಾಗಿದೆ.

ನಮ್ಮ ಸಂವಿಧಾನದ ಬಗ್ಗೆ ಮಾತನಾಡುವಾಗ ಹಲವರು ನಮ್ಮದು "ಪವಿತ್ರ" ಸಂವಿಧಾನವೆಂದೂ, ಕೆಲವರ ನಿರ್ದಿಷ್ಟ ನಡವಳಿಕೆಗಳು ಸಂವಿಧಾನದ ಪಾವಿತ್ರ್ಯತೆಯನ್ನು ಹಾಳು ಮಾಡುತ್ತವೆಂದೆಲ್ಲಾ ವಿಷಾದ ವ್ಯಕ್ತಪಡಿಸುತ್ತಾರೆ. ಅವರು ಆಪಾದಿಸುವ ಹಲವು ನಡೆಗಳು "ತಪ್ಪೇ" ಆದರೂ ಅವುಗಳು ಪವಿತ್ರ ಮತ್ತು ಅಪವಿತ್ರವೆಂಬ ಪರಿಭಾಷೆಯಲ್ಲಿ ಏಕೆ ಚರ್ಚಿತವಾಗುತ್ತವೆ? ಜಾತ್ಯತೀತ ಸಂವಿಧಾನವೊಂದು ಜಾರಿಗೆ ಬಂದ 60 ವರ್ಷಗಳ ನಂತರವೂ ಈ ಸಮಾಜದಲ್ಲಿ ಬ್ರಾಹ್ಮಣೀಯ ಮೇಲರಿಮೆಗಳು, ಶೂದ್ರ-ದಲಿತ-ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರ ಬಗ್ಗೆ ಕೀಳರಿಮೆಗಳು ಮುಂದುವರೆದುಕೊಂಡು ಬರಲು ನಮ್ಮ ಸಂವಿಧಾನ ರಚನಾ ಪ್ರಕ್ರಿಯೆಯಲ್ಲಿಯೂ ಏನಾದರೂ ಕಾರಣಗಳಿದ್ದವೇ?

ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುತ್ತಾರೆ ಎಂಬುದು ಖಚಿತವಾದಾಗಿನಿಂದಲೂ ಈ ಪ್ರಶ್ನೆಗಳನ್ನು ಕೇಳಿಕೊಂಡು ಬರಲಾಗುತ್ತಿದೆ. ಬ್ರಿಟಿಷರು ಭಾರತ ಬಿಟ್ಟು ಹೋದರೆ ಅದು ಹಿಂದೂ ಬಾಹುಳ್ಯದ ಭಾರತವಾಗಿರುತ್ತದಾದ್ದರಿಂದ ಅಲ್ಲಿ ಮುಸ್ಲಿಮರಿಗೆ ಯಾವುದೇ ರಕ್ಷಣೆ ಇರುವುದಿಲ್ಲ ಎಂಬ ತೀವ್ರ ಅನುಮಾನವನ್ನು ಮುಸ್ಲಿಮರು ವ್ಯಕ್ತಪಡಿಸಿದ್ದರು. ಅದೇರೀತಿ ಸ್ವತಂತ್ರ ಭಾರತದಲ್ಲಿ ದಲಿತರು ಮತ್ತೊಮ್ಮೆ ಬ್ರಾಹ್ಮಣೀಯ ಹಿಂದೂ ಮೇಲ್ಜಾತಿಗಳ ದೌರ್ಜನ್ಯಕ್ಕೆ ತುತ್ತಾಗಬಹುದೆಂಬ ಭೀತಿ ದಲಿತರಿಗಿತ್ತು.

ಸ್ವಾತಂತ್ರ್ಯ ಚಳವಳಿ ಅದರಲ್ಲೂ ಕಾಂಗ್ರೆಸ್‌ನ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ನೀತಿಗಳು, ಆಚರಣೆಯಲ್ಲಿ ಗಾಂಧಿಯನ್ನೂ ಒಳಗೊಂಡಂತೆ ಅದರ ನಾಯಕರು ತೋರುತ್ತಿದ್ದ ಹಿಂದೂ-ಬ್ರಾಹ್ಮಣ ಸಂಸ್ಕೃತಿಗಳು, ಸಹಜವಾಗಿಯೇ ದಲಿತ-ಮುಸ್ಲಿಮ್-ಶೂದ್ರರಲ್ಲಿ ಸ್ವತಂತ್ರ ಭಾರತದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಹುಟ್ಟಿಸಿದ್ದವು. ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಇದ್ದರೂ ಉಳಿದ 370ಕ್ಕೂ ಹೆಚ್ಚು ಸದಸ್ಯರನ್ನು ಆಯ್ಕೆ ಮಾಡಿದ್ದು ಸುಶಿಕ್ಷಿತ ವಿದ್ಯಾವಂತರು ಮತ್ತು ಆಸ್ತಿವಂತರು. ಅಂದರೆ ಈ ದೇಶದ ಮೇಲ್ವರ್ಗ ಮತ್ತು ಮೇಲ್ಜಾತಿ ಜನಗಳೇ. ಅದರಲ್ಲೂ 1947ರಲ್ಲಿ ದೇಶ ವಿಭಜನೆಯಾಗಿ ಪಾಕಿಸ್ತಾನ ರಚನೆಯಾದಾಗ ಸಂವಿಧಾನ ರಚನಾ ಸಭೆಯಲ್ಲಿ ಖಾಲಿ ಬಿದ್ದ 93 ಸ್ಥಾನಗಳಿಗೆ ರಾಜಸಂಸ್ಥಾನಗಳ ಅರಸರು ತಮ್ಮ ಪ್ರತಿನಿಧಿಗಳನ್ನು ನೇಮಿಸಿದರು. ಹೀಗಾಗಿ ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಪ್ರತಿನಿಧಿಸುತ್ತಿದ್ದ ಅಬ್ರಾಹ್ಮಣ, ಹಿಂದೂಯೇತರ ಧ್ವನಿಯ ಶಕ್ತಿ ಇನ್ನಷ್ಟು ಕಡಿಮೆಯಾಯಿತು. ಆದ್ದರಿಂದಲೇ ಅಂಬೇಡ್ಕರ್ ಅವರು ತಮಗೆ ಇದ್ದ ಸೀಮಿತ ಅವಕಾಶವನ್ನು ದುರ್ಬಲರ ಪರವಾಗಿ ಬಳಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಿದರೂ ಅದಕ್ಕೆ ಸಾಕಷ್ಟು ಮಿತಿಯಿದ್ದದ್ದು ಐತಿಹಾಸಿಕ ಸತ್ಯ. ಹೀಗಾಗಿ ಪ್ರಪಂಚದಲ್ಲೇ "ಅತ್ಯುತ್ತಮ ಸಂವಿಧಾನ" ನಮ್ಮ ದೇಶದಲ್ಲಿದ್ದರೂ 60 ವರ್ಷಗಳ ನಂತರ ಬ್ರಾಹ್ಮಣವಾದಿ ಹಿಂದೂತ್ವವು ಸಂವಿಧಾನಬದ್ಧವಾಗಿ ಅಧಿಕಾರ ಹಿಡಿಯಲು ಸಾಧ್ಯವಾಗಿದೆ. ಜಾಗತೀಕರಣದ ಮಾರುಕಟ್ಟೆ ಶಕ್ತಿಗಳು ಸಂವಿಧಾನಬದ್ಧವಾಗಿಯೆ ಸಂವಿಧಾನದ ಆಶಯಗಳನ್ನು ಹಾಳು ಮಾಡಲು ಸಾಧ್ಯವಾಗಿದೆ.





ಚಾರ್ವಾಕ

▸ ಶಿವಸುಂದರ್

ಪ್ರೀತಂ ಸಿಂಗ್ ಎಂಬ ಪಂಜಾಬಿ ವಿದ್ವಾಂಸರು ನಮ್ಮ ಸಂವಿಧಾನ ಮುನ್ನುಡಿಯ ಪ್ರಥಮ ಸಾಲಿನಲ್ಲೇ ಸಂವಿಧಾನ ರಚನಾ ಸಭ ಬ್ರಾಹ್ಮಣಶಾಹಿಯೊಂದಿಗೆ ಮಾಡಿಕೊಂಡ ರಾಜಿಯತ್ತ ಗಮನ ಸೆಳೆಯುತ್ತಾ ಸಂವಿಧಾನದ ಮೊದಲ ವಾಕ್ಯ ಹೀಗೆ ಪ್ರಾರಂಭವಾಗುತ್ತದೆ:

"Article 1. Name and territory of the Union (1) India, that is Bharat, shall be a Union of States"

"ಇಂಡಿಯಾ ಎಂದರೆ ಭಾರತ ಎಂಬ ಈ ಐಕ್ಯದೇಶವು ಹಲವ ರಾಜ್ಯಗಳ ಐಕ್ಯದೇಶವಾಗಿರುತ್ತದೆ"

ಈ ಮೊದಲ ಪರಿಚ್ಛೇದದ ಬಗ್ಗೆ ಸಂವಿಧಾನ ರಚನಾ ಸಭೆಯ ಸಾಕಷ್ಟು ಚರ್ಚೆಗಳು ನಡೆಯುತ್ತವೆ. ಏಕೆಂದರೆ ಭಾರತ್ ಎಂಬುದ ಹಿಂದೂ ಮೇಲ್ಜಾತಿಗಳು ಭಾರತದ ಪ್ರಾಚೀನತೆಯ ಬಗ್ಗೆ ಕಟ್ಟಿಕೊಂಡ ಬಂದಿರುವ "ಭರತ ವರ್ಷ" ಎಂಬ ಕಲ್ಪನೆಯ ಕೂಸು. ಅದಕ್ಕಾಗಿಯೆ 1949ರಲ್ಲಿ ಒಬ್ಬ ಹಿಂದೂ ಸನ್ಯಾಸಿನಿ ಈ ದೇಶವನ್ನು ಇಂಡಿಯ ಎಂದು ಕರೆಯಬಾರದೆಂದೂ ಇದನ್ನು ಭಾರತವೆಂದೇ ಕರೆಯಬೇಕೆಂದು ಮತ್ತು ಹಿಂದಿಯನ್ನು ಇಲ್ಲಿನ ಏಕೈಕ ರಾಷ್ಟ್ರ ಭಾಷೆ ಮಾಡಬೇಕೆಂದು ಒತ್ತಾಯಿಸುತ್ತಾ ಉಪವಾಸ ಕೂರುತ್ತಾಳೆ. ಆ ಕಾಲದಲ್ಲಿ ಭಾರತವನ್ನು ಬ್ರಿಟಿಷರು ಇಂಡಿಯಾ ಎಂದೇ ಕರೆಯುತ್ತಿದರೂ ಸಾಮಾನ್ಯ ಜನ ಈ ದೇಶವನ್ನು ಹಿಂದೂಸ್ಥಾನವೆಂದೇ ಕರೆಯುತ್ತಿದ್ದರು. ಅದೇರೀತಿ ಉತ್ತ ಭಾರತದಲ್ಲಿ ಹಿಂದೂಸ್ಥಾನೀ ಎಂದು ಕರೆಯಲ್ಪಡುವ ಭಾಷೆಯನ್ನೆ ಹಿಂದೂಗಳು ಮತ್ತು ಮುಸ್ಲಿಮರು ಬಳಸುತ್ತಿದ್ದರು. ಹಿಂದೂ ಮೂಲಭೂತವಾದಿಗಳು ಮತ್ತು ಬ್ರಾಹ್ಮಣಶಾಹಿ ಒಲವುಳ್ಳವರು ಮಾತ ಸನಾತನ ಧರ್ಮ ಪರಂಪರೆಯ ಮುಂದುವರಿಕೆಯಾಗಿ "ಭಾರತ" ಎಂದ ಕರೆಯಬೇಕೆಂದು ಪಟ್ಟು ಹಿಡಿದಿದ್ದರು. ಅಂಥಾ ಸಾಕಷ್ಟು ಮಂದಿ ಕಾಂಗ್ರೆಸ್ಸಿನಿಂದಲೇ ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗಿದ್ದರು ಅಂತಿಮವಾಗಿ ಈ ಜನ ಇಂಡಿಯಾ ಹೆಸರಿನ ಜೊತೆಗೆ ಭಾರತ ಎಂಬ ಹೆಸರಿಗೆ ಒಪ್ಪಿಕೊಂಡರು. ಹೀಗಾಗಿ ಈ ಬ್ರಾಹ್ಮಣಶಾಹಿಗಳ ವಿರೋಧ ವಿದ್ದದ್ದು ಮುಸ್ಲಿಮರ ನೆನಪನ್ನು ತರುವ "ಹಿಂದೂಸ್ಥಾನಿ"ಯ ವಿರುದ್ಧವೆ ಹೊರತು ಬ್ರಿಟಿಷರ ನೆನಪನ್ನು ತರುವ "ಇಂಡಿಯಾ"ದ ಬಗೆಗಲ್ಲ ಹೀಗೆ ಸ್ವತಂತ್ರ ಭಾರತದ ಹೆಸರಿನಲ್ಲೇ ಆರ್ಯ ಅರ್ಥಾತ್ ಬ್ರಾಹ್ಮ ಸಂಸ್ಕೃತಿಯ ದ್ಯೋತಕ ಉಳಿದುಕೊಂಡಿತು.

ಸಂವಿಧಾನದ 25 (2) (ಬ) ಪರಿಚ್ಛೇದವು ಎಲ್ಲರಿಗೂ ತಮ್ಮ ತಮ ಧಾರ್ಮಿಕ ಶ್ರದ್ಧೆಯನ್ನು ಆಚರಿಸಲು, ಪ್ರತಿಪಾದಿಸಲು ಮತ್ತು ಪ್ರಚಾರ ಮಾಡಲು ಅವಕಾಶ ಮಾಡಿಕೊಡುವುದರ ಜೊತೆಜೊತೆಗೆ ಹಿಂದೂ ಧಾರ್ಮಿಕ ಆಚರಣೆಯ ಸುಧಾರಣೆ ತರುವ ಜವಾಬ್ದಾರಿಯನ್ನೂ ಪ್ರಭುತ್ವದ ಮೇಲೆ ಹೊರಸುತ್ತದೆ ಹಾಗೆಯೇ ಹಿಂದೂ ಧರ್ಮದ ಅಡಿಯಲ್ಲಿ ಬೌದ್ಧರನ್ನೂ, ಜೈನರನ್ನೂ ಮತ್ತು ಸಿಖ್ಖರನ್ನೂ ಸೇರಿಸುತ್ತದೆ. ಇದರ ಬಗ್ಗೆ ಪ್ರತಾಪ್ ಮೆಹ್ತಾ, ಅನ್ವರ್ ಅಲಿ ಹಾಗೂ ಇನ್ನಿತರ ವಿದ್ವಾಂಸರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ ಹಿಂದೂ-ಬ್ರಾಹ್ಮಣ ಧರ್ಮದ ವಿರುದ್ಧ ಬಂಡಾಯವೆದ್ದ ಧರ್ಮಗಳನ್ನು ಹಿಂದೂ ಧರ್ಮಕ್ಕೆ ಸೇರಿಸುವ ಮೂಲಕ ಸಂವಿಧಾನವು ಹಿಂದೂತ್ವವಾದಿಗಳ ಅಜೆಂಡಾಗೆ ಬಲ ತಂದುಕೊಟ್ಟಂತಾಯಿತು. ಅಲ್ಲದೆ ಒಂದು ಜಾತ್ಯತೀತ ಸರ್ಕಾರ ಕೇವಲ ಹಿಂದೂ ಧರ್ಮದ ಸುಧಾರಣೆಯ ಬಗ್ಗೆ ಮಾತನಾಡುವುದರ ಮೂಲಕ ಪರೋಕ್ಷವಾಗಿ ಭಾವೀ ಭಾರತದ ಪ್ರಧಾನ ಹಕ್ಕುದಾರರು ಹಿಂದೂಗಳೆ ಎಂದು ಪ್ರತಿಪಾದಿಸಿದಂತಾಯಿತು. ಇದೂ ಸಹ ಮುಂದೆ ಯಡಿಯೂರಪ್ಪನವರಂಥ ರಾಜಕಾರಣಿಗಳಿಗೆ ಸದನ ಎಂಬುದೂ ಸಹ ಪ್ರಧಾನವಾಗಿ ಹಿಂದೂ ದೇವಸ್ಥಾನವೆ ಹೊರತು ಇದರ ಮೇಲೆ ಇತರ ಧರ್ಮೀಯರಿಗೆ ಎರಡನೇ ಸ್ಥಾನವೇ ಎಂಬ ಪರಿಕಲ್ಪನೆ ರೂಢಿಸಿಕೊಳ್ಳಲು ಅನುಕೂಲವಾಯಿತು.

ಹಾಗೆಯೇ 48ನೇ ಪರಿಚ್ಛೇಧದಲ್ಲಿ ಗೋಹತ್ಯೆ ನಿಷೇಧದ ಪ್ರಸ್ತಾವನೆ ಇದರ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ಸಾಕಷ್ಟು ಚರ್ಚೆಗಳಾಗಿವೆ ಗೋವು-ಹಿಂದಿ-ಹಿಂದೂ ಇವುಗಳೇ ಭಾರತದ ಸೂಚಕ ಮತ್ತು ಲಾಂಛನಗಳೆಂಬ ಬಗ್ಗೆ ಯಾವುದೇ ಹಿಂಜರಿಕೆಯಿಲ್ಲದೆ ಸಂವಿಧಾನ ಸಭೆಯಲ್ಲಿ ಚರ್ಚೆಗಳಾಗಿವೆ ಆಮೇಲೆ ಉಳುವ ಯೋಗ್ಯ ರಾಸುಗಳ ಮತ್ತು ಹಾಲು ಕೊಡುವ ಹಸುಗಳ ಹತ್ಯೆಯನ್ನು ನಿಷೇಧಿಸಬೇಕೆಂಬ ಪ್ರಸ್ತಾಪನೆ ಸೇರ್ಪಡೆಯಾಯಿತು.

ಇದಲ್ಲದೆ ಸಂವಿಧಾನದ 343ನೇ ಕಲಮಿನಲ್ಲಿ ದೇವನಾಗರಿ ಲಿಪಿಯಲ್ಲಿರುವ ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಪರಿಗಣಿಸಬೇಕೆಂಬ ಮತ್ತು 351ನೆ ಕಲಮಿನ ಪ್ರಕಾರ ಹಿಂದಿಯನ್ನು ಬೆಳೆಸಲು ಪ್ರಧಾನವಾಗಿ ಸಂಸ್ಕೃತವನ್ನೆ ಬಳಸಬೇಕೆಂಬ ಸಲಹೆ ರೂಪದ ಆದೇಶ ಇರುವ ಕಲಮುಗಳೂ ಸಹ ಬ್ರಾಹ್ಮಣವಾದಿ ಚಿಂತನೆಗೆ ಮತ್ತು ಬ್ರಾಹ್ಮಣಶಾಹಿಗೆ ಸಂವಿಧಾನಾತ್ಮಕ ಮಾನ್ಯತೆಯನ್ನೇ ತಂದುಕೊಟ್ಟಿತು. ವಾಸ್ತವವಾಗಿ ಹಿಂದಿಗಿಂತ ಹಿಂದೂಸ್ಥಾನಿ ಮತ್ತು ದೇವನಾಗರಿ ಲಿಪಿಗಿಂತ ಕೈಥಿ ಲಿಪಿ ಆಗ ಹೆಚ್ಚು ಬಳಕೆಯಲ್ಲಿತ್ತು ಆದರೆ ಬ್ರಾಹ್ಮಣವಾದಿ ಹಿಂದೂ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಮತ್ತು ಭಾವೀ ಭಾರತದಲ್ಲಿ ಮತ್ತೆ ಬ್ರಾಹ್ಮಣವಾದಿ ಹಿಂದೂಗಳ ಪಾರಮ್ಯವನ್ನು ಉಳಿಸಿಕೊಳ್ಳುವ ಭಾಗವಾಗಿಯೇ ಇವು ಉಳಿದುಕೊಂಡು ಬಂದಿದೆ.

ಇವೆಲ್ಲಾ ಕೆಲವು ಉದಾಹರಣೆಗಳಷ್ಟೆ. ಅಂಬೇಡ್ಕರ್‌ರವರ ಮೂಲ ಆಶಯಗಳು ಶಾಸನ ಬಲವಿಲ್ಲದ ನಿರ್ದೇಶನಾ ತತ್ವಗಳಲ್ಲಿ ಸೇರ್ಪಡೆಯಾಗಿವೆ. ಶಾಸನ ಬಲವಿರುವ ಉಳಿದ ಸಂವಿಧಾನ ದೇಶದ ಸಾಮಾಜಿಕ ರಚನೆಯನ್ನು ಕಿಂಚಿತ್ತೂ ಬದಲಾವಣೆ ಮಾಡದೆ ಮುಂದುವರೆಸುತ್ತಿದೆ.

ಹೀಗಾಗಿಯೇ ಸದನವೆಂಬುದು ದೇವಸ್ಥಾನ, ಮಾಂಸಾಹಾರ ಅಪವಿತ್ರ ಎಂಬ ಬ್ರಾಹ್ಮಣವಾದಿ ಮಾತುಗಳು ಸಂವಿಧಾನಾತ್ಮಕವಾಗಿ ಜವಾಬ್ದಾರಿ ಸ್ಥಾನದಲ್ಲಿರುವ ಯಡಿಯೂರಪ್ಪನವರ ಬಾಯಿಂದ ಬಂದಿರುವುದು ಆಕಸ್ಮಿಕವಲ್ಲ ಅದು ಯಡಿಯೂರಪ್ಪನವರು ಜನಿವಾರ ಕಳಚಬೇಕಿರುವುದನ್ನು ಮಾತ್ರವಲ್ಲ ಸಂವಿಧಾನಕ್ಕೆ ಯಾರೂ ಕಾಣದಂತೆ ತೊಡಿಸಲಾಗಿರುವ ಜನಿವಾರವನ್ನು ಕಳಚಬೇಕಿರುವ ಅಗತ್ಯವನ್ನೂ ಸೂಚಿಸುತ್ತದೆ.

ನೋ ಕಾಮೆಂಟ್ಸ್

"ಮುಖ್ಯಮಂತ್ರಿ ಯಡಿಯೂರಪ್ಪ ಸ್ವತಃ ಈ ಸಚಿವರ ಮುಷ್ಠಿಯಲ್ಲಿ ಸಿಲುಕಿದ್ದಾರೆ. ಒಂದು ವರ್ಷದ ಹಿಂದೆ ದೆಹಲಿಯಲ್ಲಿ ನಡೆದ ನಾಟಕ ಎಲ್ಲರಿಗೂ ಗೊತ್ತಿದೆ. ನೀವೇ ಇವರನ್ನು ಮಂತ್ರಿಗಳಾಗಿ ನೇಮಕ ಮಾಡಿದ್ದೀರಿ. ಸೂಕ್ತ ಕ್ರಮ ಕೈಗೊಳ್ಳಿ ಎಂದಿದ್ದೇನೆ."

- ರಾಜ್ಯಪಾಲ ಭಾರದ್ವಾಜ್

"ಜಿಲ್ಲಾ ಪಂಚಾಯತ್ ಅಧ್ಯಕ್ಷನೂ ಕೂಲಿಯಾಳು. ಸರ್ಕಾರಿ ನೌಕರನೂ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿ. ಸತ್ತವನೂ ಕೆಲಸಕ್ಕೆ ಹಾಜರ್. ಇದು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಜಾರಿಯಾಗುತ್ತಿರುವ ರೀತಿ."

- ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಕಳೆದ ಎರಡು ವರ್ಷಗಳಲ್ಲಿ 1.05 ಕೋಟಿ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಅಕ್ರಮವಾಗಿ ವಿದೇಶಗಳಿಗೆ ರಫ್ತು ಮಾಡಲಾಗಿದೆ."

- ಯಡಿಯೂರಪ್ಪ

ಹಾಗಾದರೆ ಎಮ್ಮೆಯನ್ನೂ ಪವಿತ್ರ ಎಂದು ಘೋಷಿಸಬಲ್ಲಿರಾ?

"ಸ್ವಾರ್ಥ ರಾಜಕಾರಣಕ್ಕಾಗಿ ಮಾನವ ಸಮಾಜವನ್ನು ಒಡೆಯಬೇಡಿ. ಪ್ರಾಣಿಗಳಿಗೂ ಜಾತಿಪಟ್ಟ ಕಟ್ಟಬೇಡಿ. ಗೋವು ಕೇವಲ ಬ್ರಾಹ್ಮಣರಿಗೆ ಸೀಮಿತವಾದುದಲ್ಲ."

- ದಯಾನಂದ ಸ್ವಾಮಿ

ಸರ್ಕಾರದ ಕೆಲಸ ಬ್ರಾಹ್ಮಣರ ಕೆಲಸ!

"ವಿಧಾನಸಭೆ ದೇವಸ್ಥಾನ ಇದ್ದಂತೆ. ಪ್ರತಿಪಕ್ಷ ಸದಸ್ಯರು ಇಂತಹ ಪವಿತ್ರ ಸ್ಥಳದಲ್ಲಿ ಮಾಂಸಾಹಾರ ಸೇವಿಸಿ ಸದನದ ಪಾವಿತ್ರ್ಯ ಹಾಳು ಮಾಡಿದ್ದಾರೆ."


- ಯಡಿಯೂರಪ್ಪ

ಕವಲು: ಸ್ತ್ರೀ ದ್ವೇಷಿ ಭೈರಪ್ಪ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com



ಎಸ್.ಎಲ್. ...ಪ್ಪನವರ ಹೊಸ ...ಲು' ಕಾದಂಬರಿಯನ್ನು ... ಮುಗಿಸಿದ ನಂತರ ...ರಿಂದ ಚೇತರಿಸಿಕೊಳ್ಳಲು ...ನು ಇಡೀ ದಿನ ...ಾಯಿತು. ಕಾರಣ: ಆ ...ಂಬರಿಯಲ್ಲಿ ...ವಾಗಿರುವ ಭೈರಪ್ಪನವರ ...ಬುದ್ಧಿ. ಇದೂ ...ದೆಂಬಂತೆ ಆ ...ಕದಲ್ಲಿರುವ ಮುದ್ರಣ ...ೀಷಗಳು, ಎಲ್ಲೋ ...ರಂಭವಾಗಿ ಎಲ್ಲೋ ...ತ್ಯಗೊಳ್ಳುವ ಸಾಲುಗಳು, ...ರ್ಥವನ್ನೇ ...ಮುಕೊಂಡಿರುವ ...ಗಳು....

...ಟರ್‌ನೆಟ್‌ನಲ್ಲಿ ಭೈರಪ್ಪನ ... ಕಾದಂಬರಿ ಬಿಸಿ ದೋಸೆಗಳಂತೆ ಖರ್ಚಾಗುತ್ತಿದೆ ...ನು ಓದಿದ ನೆನಪು. ಅದೆಷ್ಟು ನಿಜವೋ ಗೊತ್ತಿಲ್ಲ, ...ರೆ ದೋಸೆಯೊಂದರಲ್ಲಿ ಇರುವಷ್ಟು ...ತುಗಳಂತೂ ಈ ಕಾದಂಬರಿಯ ಪುಟಪುಟದಲ್ಲೂ ...ತ್ತವೆ.

... ಈ ಕಾದಂಬರಿಯನ್ನು ಪ್ರವೇಶಿಸುವ ಮುನ್ನ ...ವೇಶ' ಪದ ಮುಖ್ಯ. ಯಾಕೆಂದರೆ ಈ ಕೃತಿಯಲ್ಲಿ ...ದ್ರ ಸ್ಥಾನ ಹೊಂದಿರುವುದು ಶಯನ ಕೊಠಡಿ ...ಖ್ತ ಅದರಲ್ಲಿ ನಡೆಯುವ ಹಾದರದ ಪ್ರಸಂಗಗಳು) ...ನು ಪುಟದಲ್ಲಿ ಇದೇ ಕಾದಂಬರಿಯಲ್ಲಿ ಬರುವ ...ಡು ಸಂಭಾಷಣೆಗಳನ್ನು ಪ್ರಕಟಿಸಲಾಗಿದೆ. ಅವುಗಳಲ್ಲಿ ...ಮುಖವಾದದ್ದು "ಓದಿದ ಗಂಡಸರೆಲ್ಲ ...ಗಸರಾಗ್ತಾರೆ. ಓದಿದ ಎಂಗಸರೆಲ್ಲ ಗಂಡಸರಾಗ್ತಾರೆ. ...ಡಸರು ಗಂಡಸರಾಗಿ ಎಂಗಸರು ಎಂಗಸರಾಗಿ ...ಬೇಕಾದರೆ ಯಾರೂ ಓದಕೂಡದು." ಈ ಸಾಲು ...ಳೆ ವಿರುದ್ಧದ ಕಾದಂಬರಿಯ ಟೋನ್ (tone) ...್ನ ಸೆಟ್ ಮಾಡುತ್ತದೆ.

... ಅದೇ ಪುಟದಲ್ಲಿ ಇನ್ನೊಂದು ವಾಕ್ಯವು ಹೀಗಿದೆ: ...ರತೀಯ ಸಮಾಜದಲ್ಲಿ ಕವಲುದಾರಿ ಹಿಡಿಯುತ್ತಿರುವ ...ಲ್ಯಗಳನ್ನು ಹೃದಯ ಕಲಕುವಂತೆ ಶೋಧಿಸುತ್ತಾ ...ಕಾಲೀನ ಜೀವನಕ್ಕೆ ಕನ್ನಡಿಯಾಗಿರುವ ಕಾದಂಬರಿ ...ು."

... ಇದು 'ಕವಲು' ಕಾದಂಬರಿಯ ಪ್ರಕಾಶಕರಾದ ಸಾಹಿತ್ಯ ...ಾರ ಕೊಟ್ಟಿರುವ ವಿವರಣೆಯೋ, ಈ ಕಾದಂಬರಿಗೆ ...ರನ್ನು ಸೂಚಿಸಿರುವ ಶತಾವಧಾನಿ ಗಣೇಶ್ ಅವರು ...ತಿರುವ ಅಭಿನಂದನೆಯೋ ಅಥವಾ ಭೈರಪ್ಪ ತನಗೆ ...ೀ ಕೊಟ್ಟುಕೊಂಡಿರುವ ಸರ್ಟಿಫಿಕೇಟೋ, ಗೊತ್ತಿಲ್ಲ.


... 'ಕವಲು' ಕಾದಂಬರಿಯ ಕಥಾವಸ್ತುವಿಗೆ ಹೋಗುವ ...ನ್ನ ಪುರುಷ ಮತ್ತು ಸ್ತ್ರೀಯರ ಬಗ್ಗೆ ಇದರಲ್ಲಿ ಭೈರಪ್ಪ ...ಪಡಿಸಿರುವ ನಿಲುವುಗಳ ಬಗ್ಗೆ ಹೇಳುವುದು ಅಗತ್ಯ. ...ರ ಪ್ರಕಾರ ಪುರುಷರೆಲ್ಲರೂ ಸಜ್ಜನರು. ಅಂತಹ ಸಜ್ಜನರು ... ಹೆಂಡತಿ ಅಲ್ಲದವಳೊಂದಿಗೆ ಕೂಡಿದರೆ ಅದು ...ೀರ ಬಾಧೆಗಾಗಿ" ಹುಡುಕಿಕೊಂಡ ಪರಿಹಾರವಷ್ಟೇ; ...ಷನೊಬ್ಬ ಸೂಳೆಯರ ಚಟಕ್ಕೆ ಬಿದ್ದು ಜೈಲು ಪಾಲಾದರೆ ...ಕ್ಕೂ ಕಾರಣ ಆತನಲ್ಲಿ ಪುರುಷತ್ವವನ್ನು ವರ್ಧಿಸುವಲ್ಲಿ ...ಲಳಾದ ಹೆಂಡತಿಯೇ ಹೊರತು ಆತನಲ್ಲ; ತನ್ನ ವೃತ್ತಿಯಲ್ಲಿ ...ಲ್ಲಲಿಸಬೇಕೆಂಬ ಆಕಾಂಕ್ಷೆ ಪುರುಷರಿಗೆ ಶೋಭೆ ...ಮಂತಹದ್ದೇ ಹೊರತು ಮಹಿಳೆಯರು ಅಂತಹ ವೈಯಕ್ತಿಕ ...ಗಳನ್ನು ಹೊಂದಿರಕೂಡದು.

... ಹಾಗೆಯೇ ಭೈರಪ್ಪನ ದೃಷ್ಟಿಯಲ್ಲಿ ಸುಶಿಕ್ಷಿತ ಮಹಿಳೆಯ ... ಅಪಕಾಶವಾದಿಗಳು; ಮಹಿಳಾಪರ ಕಾನೂನುಗಳನ್ನು ... ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಸಜ್ಜನ ...ುಷರ ಮುಂಡಾ ಮೋಚುವವರು; ವೈಯಕ್ತಿಕ ...ಕ್ಕಾಗಿ ಯಾರ ಶಯನ ಕೊಠಡಿಯಲ್ಲಾದರೂ ತಮ್ಮ ...ಚಾಚುವವರು; ಸಮಾನಹಕ್ಕುವಾದಿಗಳಾಗಿದ್ದರೂ ಆಸ್ತಿ ...ಸ್ತಿ ಅಂತಸ್ತಿಗಾಗಿ ಯಾರ 'ಕೀಪ್'ಗಳಾಗಲೂ ಸಿದ್ಧವಾಗಿರು...ು; ತಮ್ಮ ಮಗಳು ಬಾಯ್‌ಫ್ರೆಂಡ್‌ಗಳೊಂದಿಗೆ ಲೈಂಗಿಕ ...ಂಧವನ್ನು ಇಟ್ಟುಕೊಳ್ಳುವಂತೆ ಪ್ರಚೋದಿಸುವ ಕಂತ್ರಿಗಳು.

... ಇಂತಹ ಪೂರ್ವಾಗ್ರಹಗಳೊಂದಿಗೆ ರೂಪಿತಗೊಂಡಿ... 'ಕವಲು' ಕಾದಂಬರಿಯ ಪಾತ್ರಗಳು ಕಾರ್ಡ್‌ಬೋರ್ಡ್ ...ಗಳಂತೆ ವರ್ತಿಸುತ್ತವೆ, ಮಾತನಾಡುತ್ತವೆ, ಸ್ಪಂದಿಸುತ್ತವೆ, ಪ್ರತಿಕ್ರಿಯಿಸುತ್ತವೆ. ಕೊನೆಗೆ ಭೈರಪ್ಪನ ಮಾರ್ಗದರ್ಶನದಲ್ಲಿ ಪುರುಷರಿಗೆ ಜಯವಾಗಿ ಮಹಿಳೆಯರೆಲ್ಲ ಸೋತ ಸೌತೆಕಾಯಿಗಳಂತಾಗುತ್ತಾರೆ.

ಇನ್ನು 'ಕವಲು' ಕಾದಂಬರಿಯ ಕಥಾವಸ್ತುವಿಗೆ ಬರುವುದಾದರೆ ಮೂರು ಧಾರೆಗಳಲ್ಲಿ ಕತೆ-ಅಲ್ಲ ಭೈರಪ್ಪನ ಮಹಿಳಾ ವಿರೋಧಿ ಸಿದ್ಧಾಂತ-ತೆರೆದುಕೊಳ್ಳುತ್ತಾ ಹೋಗುತ್ತದೆ. ಅವುಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ....

ಮೊದಲನೆಯವನು ಜಯಕುಮಾರ್ ಎಂಬ ಉದ್ಯಮಿ. ಸುಶಿಕ್ಷಿತ (ಆದರೆ ಸಂಪ್ರದಾಯಸ್ಥೆ) ಮಡದಿಯನ್ನು ಅಪಘಾತದಲ್ಲಿ ಕಳೆದುಕೊಂಡಿರುವ, ಅದೇ ಅಪಘಾತದಲ್ಲಿ ತನ್ನ ಏಕೈಕ ಪುತ್ರಿಯ ಮೆದುಳಿಗೆ ಗಾಯವಾಗಿ ಆಕೆ ಬುದ್ಧಿಮಾಂದ್ಯಳಾಗಿರುವ ವಿಧುರ ಜಯಕುಮಾರ. ಈ ಜಯಕುಮಾರ ತನ್ನ ದೇಹಬಾಧೆಯನ್ನು ತಡೆದುಕೊಳ್ಳಲಾಗದೆ ತನ್ನ ಹೆಂಡತಿಯ ಪಿಎ ಆಗಿದ್ದ ಮಹಿಳಾವಾದಿ ಆಗಿರುವುದರಿಂದ "ಮುಕ್ತ ಲೈಂಗಿಕತೆ"ಯಲ್ಲಿ ನಂಬಿಕೆ ಹೊಂದಿರುವ ಮಂಗಳೆಯೊಂದಿಗೆ ಅಫೇರ್ ಶುರು ಮಾಡುತ್ತಾನೆ. ಆಕೆ ಗರ್ಭವತಿಯಾಗಿ ಆತನ ಮೇಲೆ ಒತ್ತಡ ತರುವುದರಿಂದ ವಿಧಿ ಇಲ್ಲದೆ ಆಕೆಯನ್ನು ಮದುವೆ ಆಗುತ್ತಾನೆ. ಆದರೆ ಅವಳಾದರೋ ಕೆಟ್ಟ ಹೆಂಗಸು. ಎಷ್ಟು ಕೆಟ್ಟ ಹೆಂಗಸೆಂದರೆ ಜಯಕುಮಾರ ತನ್ನ ಬುದ್ಧಿಮಾಂದ್ಯ ಮಗಳ ಬಗ್ಗೆ ತೋರುವ ಅಕ್ಕರೆಯನ್ನೂ ಲೈಂಗಿಕ ದೃಷ್ಟಿಯಲ್ಲೇ ನೋಡುವವಳು. ಮಂಗಳೆಗೆ ಗಂಡು ಮಗುವಾಗುತ್ತದೆ. ಆದರೆ ಅವಳ ಕಪಟತನದಿಂದಾಗಿ ಅವಳಲ್ಲಿ ಜಯಕುಮಾರ ಆಸಕ್ತಿ ಕಳೆದುಕೊಳ್ಳುತ್ತಾನೆ. ತಾನು ನಪುಂಸಕನಲ್ಲ ಎಂದು ತನಗೇ ಸಾಬೀತುಪಡಿಸಿಕೊಳ್ಳಲು ವೇಶ್ಯೆಯರ ಮೊರೆ ಹೋಗುತ್ತಾನೆ. ಅದೇ ಚಟವಾಗಿ ಬೆಳೆದು ಪೊಲೀಸರ ರೈಡ್ ಒಂದರಲ್ಲಿ ಸಿಕ್ಕಿಹಾಕಿಕೊಂಡು ಜೈಲುಪಾಲಾಗುತ್ತಾನೆ. ಆತನ ಬದುಕೇ ಛಿದ್ರಗೊಳ್ಳುತ್ತದೆ. ಹಿಂದೊಮ್ಮೆ ತಾನು ಆದರ್ಶ ಪತಿ ಆಗಿದ್ದು, ಆದರ್ಶ ಮಾಲೀಕನಾಗಿದ್ದು ಅದೆಲ್ಲ ಈಗ ಕಳೆದು ಹೋಗಿದ್ದಕ್ಕೆ ತನ್ನ ಮಹಿಳಾವಾದಿ ಹೆಂಡತಿಯೇ ಕಾರಣವೆಂದು ತೀರ್ಮಾನಿಸಿ ಆಕೆಗೆ ವಿಚ್ಛೇದನ ನೀಡುತ್ತಾನೆ. ಆ ಪ್ರಕ್ರಿಯೆಯಲ್ಲಿ ಪಾಪರ್ ಹಂತಕ್ಕೆ ತಲುಪುತ್ತಾನೆ.



ಎರಡನೆಯದು ಜಯಕುಮಾರನ ಸೋದರಳಿಯ ನಚಿಕೇತನ ಕತೆ. ಈತ ಅಮೆರಿಕಾ ವಾಸಿಯಾಗಿದ್ದು ಅಲ್ಲಿ ಲಿಂಡ್ಸಿ ಎಂಬಾಕೆಯೊಂದಿಗೆ 'ಲಿವಿಂಗ್ ಟುಗೆದರ್' ಸಂಬಂಧದಲ್ಲಿರುತ್ತಾನೆ. ಒಂದು ದಿನ ನಚಿಕೇತನ ಬಗ್ಗೆ ತನ್ನಲ್ಲಿ ಪ್ರೀತಿ ಉಳಿದಿಲ್ಲವೆಂದು ಆಕೆ ಹೊರಟುಹೋಗುತ್ತಾಳೆ. ಭಗ್ನಪ್ರೇಮಿಯಾದ ನಚಿಕೇತ ತನಗಿಂತಲೂ ವಯಸ್ಸಿನಲ್ಲಿ ಹಿರಿಯಳಾದ, ಆಗಲೇ ಇಬ್ಬರು ಗಂಡುಮಕ್ಕಳ ತಾಯಿಯಾದ "ಸೇವಾ ಮನೋಭಾವ" ಮತ್ತು "ಸಂಪೂರ್ಣವಾಗಿ ತನ್ನನ್ನು ಅರ್ಪಿಸಿಕೊಳ್ಳುವ" ಪ್ರವೃತ್ತಿಯ ಟ್ರೇಸಿ ಎಂಬಾಕೆಯ ಮೋಹಕ್ಕೆ ಬೀಳುತ್ತಾನೆ. ಕೊನೆಗೆ ಅಮೆರಿಕದ ಮಹಿಳಾ ಪರ ಕಾನೂನುಗಳಿಂದಾಗಿ ನಚಿಕೇತ ಸಂಪಾದಿಸಿರುವ ಹಣ ಮತ್ತು ಆಸ್ತಿಯನ್ನೆಲ್ಲ ಟ್ರೇಸಿಗೆ ಅರ್ಪಿಸಿ ಭಾರತಕ್ಕೆ ಪಾಪರ್ ಆಗಿ ಹಿಂದಿರುಗುತ್ತಾನೆ.

ಮೂರನೆ ಕಥಾ ಧಾರೆಯ ಧೋರಣೆ ಕೂಡ ಪುರುಷರ ಪರವಾಗಿದ್ದರೂ ಅದರ ಕೇಂದ್ರಬಿಂದು ಇಳಾ ಎಂಬ ಪ್ರಾಧ್ಯಾಪಕಿ. ಇಳಾ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೇವಲ ಹದಿನೈದು ಸಾವಿರ ರೂಪಾಯಿಗಳ ಸಂಬಳವನ್ನು ಪಡೆಯುವ ಅಧ್ಯಾಪಕಿ ಆಗಿದ್ದರೆ, ಆಕೆಯ ಗಂಡ ವಿನಯ್ ಚಂದ್ರ ಅಂತರರಾಷ್ಟ್ರೀಯ ಕಂಪನಿಯೊಂದರಲ್ಲಿ ತಿಂಗಳಿಗೆ ಲಕ್ಷಾಂತರ ರೂಪಾಯಿ ಸಂಬಳ ಪಡೆಯುವ 'ಯಶಸ್ವಿ' ಪುರುಷ. ವಿನಯ್ ಚಂದ್ರನಿಗೆ ದೆಹಲಿಗೆ ವರ್ಗಾವಣೆ ಆಗುತ್ತೆ. ಆದರೆ ತನ್ನ ವೃತ್ತಿಗೆ ತಿಲಾಂಜಲಿ ಕೊಟ್ಟು ಆತನೊಂದಿಗೆ ಐಷಾರಾಮಿ ಬದುಕನ್ನು ನಡೆಸಲು ಇಳಾ ನಿರಾಕರಿಸುತ್ತಾಳೆ. ತಮ್ಮಿಬ್ಬರ ಮಗಳೊಂದಿಗೆ ಬೆಂಗಳೂರಿನಲ್ಲೇ ಬದುಕಲು ನಿರ್ಧರಿಸುತ್ತಾಳೆ.

ಇಳಾಳ ಬದುಕು ಮತ್ತು ಸಿದ್ಧಾಂತಗಳನ್ನು ಭೈರಪ್ಪ ವಿಕೃತವಾಗಿ ಚಿತ್ರಿಸಿದ್ದಾರೆ. ಅಧ್ಯಾಪಕಿಯಾಗಿ ತನ್ನ ವಿದ್ಯಾರ್ಥಿಗಳಿಗೆ ಲೈಂಗಿಕ ಸಮಾನತೆಯನ್ನು, ಮುಕ್ತ ಬದುಕನ್ನು ಬೋಧಿಸುವ ಇಳಾ ಪ್ಯಾರಿಸ್‌ನ ಪ್ರತಿಷ್ಠಿತ ಥಿಯೇಟರ್ ಒಂದರಲ್ಲಿ ಸಭ್ಯ ಮತ್ತು ಸುಶಿಕ್ಷಿತನಾದ ಕರ್ನಾಟಕದ ಓರ್ವ ರಾಜಕಾರಣಿಯನ್ನು ಭೇಟಿ ಆಗುವ ಸಂದರ್ಭವನ್ನು ಭೈರಪ್ಪ ಸೃಷ್ಟಿಸುತ್ತಾರೆ. ಆ ರಾಜಕಾರಣಿಯ ಮೋಹಕ್ಕೆ ಮತ್ತು ಮಂಚಕ್ಕೆ ಇಳಾ ಬೀಳುವಂತೆ ಮಾಡುತ್ತಾರೆ. ಆಮೇಲೆ ಇಳಾ ತನ್ನ ಗಂಡನಿಗೂ ತೋರದಿದ್ದ ಶರಣಾಗತಿಯನ್ನು ಈ ಕಪಟ ರಾಜಕಾರಣಿಗೆ ತೋರುವಂತೆ ಮಾಡುತ್ತಾರೆ. ಮಾತ್ರವಲ್ಲ, ಆ ರಾಜಕಾರಣಿಯ ಸುಂದರ ತೋಟಕ್ಕೆ ಮಾರುಹೋಗಿ ತನ್ನ ಎಲ್ಲ ಮಹಿಳಾವಾದ ವನ್ನು ತೊರೆದ ಸೂಳೆಯಂತೆ ಚಿತ್ರಿಸಿದ್ದಾರೆ. ಕೊನೆಗೆ ಇಳಾ ಮತ್ತು ರಾಜಕಾರಣಿಯ ಕಾಮಕ್ರೀಡೆಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವ ಮೂಲಕ ಆಕೆಯ ಗಂಡ ಅವಳಿಂದ ವಿಚ್ಛೇದನೆ ಪಡೆಯುತ್ತಾನೆ. ಅದೇ ಅವಕಾಶವನ್ನು ಬಳಸಿಕೊಂಡು ರಾಜಕಾರಣಿ ಕೂಡ ಇಳಾಳನ್ನು ತೊರೆಯುತ್ತಾನೆ. ಅಂದರೆ ಅಂತಿಮವಾಗಿ ಇಳಾ ಬೀದಿ ಪಾಲಾಗುತ್ತಾಳೆ.

ಇದೆಲ್ಲಕ್ಕಿಂತ ಆಘಾತಕಾರಿಯಾದದ್ದು 'ಕವಲು' ಕಾದಂಬರಿಯ ಕ್ಲೈಮ್ಯಾಕ್ಸ್. ಭಗ್ನಪ್ರೇಮಿಯಾಗಿರುವ, ಅಮೆರಿಕಾದ ಮಹಿಳೆಯರು ಮತ್ತು ಕಾನೂನುಗಳಿಂದಾಗಿ ಪಾಪರ್ ಆಗಿದ್ದ ನಚಿಕೇತ ಭಾರತಕ್ಕೆ ಹಿಂದಿರುಗಿ ಕೈತುಂಬ ಸಂಬಳ ಸಂಪಾದಿಸುವಂತಾಗಿ ತನ್ನ ಸೋದರ ಮಾವ ಜಯಕುಮಾರನ ಮಗಳಾದ ಬುದ್ಧಿಮಾಂದ್ಯ ವತ್ಸಲೆಯನ್ನು ಮದುವೆಯಾಗುತ್ತಾನೆ. ಅಂದರೆ ಮಂಗಳೆಯ ಕ್ರೌರ್ಯ ಮತ್ತು ಇಳಾಳ ಇಬ್ಬಂದಿತನಕ್ಕಿಂತ ವತ್ಸಲೆಯಂತಹ ಬುದ್ಧಿಮಾಂದ್ಯ ಮಹಿಳೆಯೊಂದಿಗೆ ವೈವಾಹಿಕ ಜೀವನ ಸುಖಕರವಾದದ್ದು ಎಂಬ ನಿಲುವನ್ನು ಭೈರಪ್ಪ ವ್ಯಕ್ತಪಡಿಸುತ್ತಾರೆ.

ಇನ್ನು ಮಹಿಳೆಯರನ್ನು ಭೈರಪ್ಪ ಹೇಗೆ ಕಾಣುತ್ತಾರೆ ಎಂಬುದಕ್ಕೆ, ಕಾದಂಬರಿಯಲ್ಲಿರುವ ಈ ಸಾಲುಗಳನ್ನು ಉದಾಹರಣೆಯಾಗಿ ಕೊಡಬಹುದು: (ಮಂಗಳೆಯ ಬಗ್ಗೆ ಜಯಕುಮಾರ ಯೋಚಿಸುವುದು)

"ಕಾಯ ಮತ್ತು ಮನಸ್ಸಿನ ಮಹಾಪಾತಾಳದೊಳಗೆ ಅಡಗಿ ಕೂತಿದ್ದ ಕಾಮವು ಆಗಾಗ ತಿಮಿಂಗಿಲದ ವೇಗದಲ್ಲಿ ಹೊಮ್ಮತೊಡಗಿದಾಗ ಇವಳು ತಕ್ಕ ಸಾಧನವೆಂಬ ಪರಿಹಾರ ಕಾಣತೊಡಗಿತು...."

"ನನ್ನಲ್ಲಿ ಕಾಮಬಾಧೆಯುಂಟಾಗ ತೊಡಗಿದಾಗ ಕಲ್ಪನೆಯು ಇವಳನ್ನು ತಕ್ಕ ನಂಬಿಕೆಯ ಪರಿಹಾರವೆಂದು ಸೂಚಿಸುತ್ತಿತ್ತು."

"ಇದು ಶರೀರ ಪೀಡೆಗೆ, ಮಾಡಿಕೊಂಡ ಅನಿವಾರ್ಯ ಚಿಕಿತ್ಸೆ ಎಂಬ ಪರಿಹಾರ."

ಅಂದರೆ ತಮ್ಮ ಕಾಮತೃಷೆಗೆ ಮಹಿಳೆಯರನ್ನು 'ಸಾಧನ', 'ಪರಿಹಾರ' ಎಂದು ಪುರುಷರು ಭಾವಿಸುವುದು ಭೈರಪ್ಪನ ದೃಷ್ಟಿಯಲ್ಲಿ ಅತಿ ಸಹಜ ಮತ್ತು ಸೂಕ್ತ.

ಆಧುನಿಕ ಮಹಿಳೆಯರ ಬಗ್ಗೆ ಭೈರಪ್ಪನಲ್ಲಿ ಎಷ್ಟು ತಿರಸ್ಕಾರ ಭಾವನೆ ಇದೆ ಎಂಬುದಕ್ಕೆ ಈ ಕೆಳಗಿನ ಸಾಲುಗಳೇ ಸಾಕ್ಷಿ:

ಮಂಗಳೆಯ ಬಗ್ಗೆ: ಬರಿ ಹಣೆ, ಬರಿ ಕಿವಿ, ಎಡಗೈಗೆ ಗಡಿಯಾರ, ಬಳೆ ಇಲ್ಲ... ಮುಸಲ್ಮಾನರವಳು ಎನ್ನಬಹುದು. ವೈಧವ್ಯ ಅಥವಾ ಸೂತಕದ ಕಳೆ.

ಮಾಲಾ ಕೆರೂರ್ ಎಂಬ ವಕೀಲೆ ಬಗ್ಗೆ: ನನ್ನ ತಲೆಗೂದಲಿಗಿಂತ ತುಂಡಾಗಿ ಕ್ರಾಪ್‌ಕಟ್ ಮಾಡಿಸಿಕೊಂಡಿದ್ದ... ಬರಿ ಹಣೆ, ಕಿವಿಗೆ ಓಲೆಯೂ ಇಲ್ಲ, ಮೂಗಿಗೆ ಬೊಟ್ಟಂತೂ ಇಲ್ಲವೇ ಇಲ್ಲ. ವಿಧವೆಯೋ ಅಥವಾ ಸೂತಕವೊ ಎಂಬಂತಹ ಕಳೆ.

ಚಿತ್ರಾ ಹೊಸೂರ್ ಎಂಬ ಮತ್ತೋರ್ವ ವಕೀಲೆ ಬಗ್ಗೆ: ತುಂಡು ಕೂದಲಿನ ಕ್ರಾಪ್ ಕಟ್ ಮಾಡಿಸಿಕೊಂಡು ಕರಿ ಪ್ಯಾಂಟು ಬಿಳಿ ಷರಟು ಕರಿಕೋಟು ಧರಿಸಿದ್ದ ಈಕೆ ನೋಡಿದ ತಕ್ಷಣ ಲಾಯರ್ ಎಂಬುದನ್ನು ತೋರಿಸಿಕೊಳ್ಳುವಂತಿದ್ದಳು. ಬೋಳು ಹಣೆ ಮಾತ್ರವಲ್ಲ, ತನ್ನ ವಾದದಲ್ಲಿ ಗೆಲ್ಲುವಂತೆ, ಮಾತನ್ನು ಮಂಡಿಸುವ ರೀತಿಯು ವೃತ್ತಿಪರತೆಯಲ್ಲಿ ಹೆಣ್ತನವನ್ನು ನೀಗಿಸಿಕೊಂಡಿರುವ ರಿಕ್ತೆಯಂತೆ ಕಾಣಿಸುತ್ತಿದ್ದಳು. ಕಿವಿಗೆ ಓಲೆಯಾಗಲಿ, ಮೂಗಿಗೆ ನತ್ತಾಗಲಿ, ಕೊರಳಿಗೆ ಒಂದೇ ಒಂದೆಳೆ ಸರವಾಗಲಿ ಇಲ್ಲ....

ಒಮ್ಮೆ ಜಯಕುಮಾರನ ಹೆಂಡತಿ ವೈಜಯಂತಿ ಮಂಗಳೆಗೆ ಹೀಗೆ ಉಪದೇಶ ಕೊಡುತ್ತಾಳೆ: "ನೀವು ಹಣೆಗೆ ಕುಂಕುಮ ಯಾಕೆ ಇಡಲ್ಲ? ಕೊರಳಿಗೆ ಒಂದು ಎಳೆಯಾದರೂ ಸರ, ಕೈಗೆ ಎರಡು ಬಳೆಗಳು ಬೇಡ ಅನ್ನಿಸಿದರೆ ಬೇಡ. ಆದರೆ ಹಣೆಗೆ ಒಂದು ಬೊಟ್ಟು ಕುಂಕುಮವೂ ಇಲ್ಲದಿದ್ದರೆ ಭಾರತೀಯ ಹೆಂಗಸಿನ ಮುಖದಲ್ಲಿ ಅಪಕಳೆ ಹೊಡೆಯುತ್ತೆ. ಯಾರೋ ಸತ್ತಿದಾರೆ, ಸೂತಕ ಅಂತಲೋ ವೈಧವ್ಯ ಅಂತಲೋ ಭಾಸವಾಗುತ್ತೆ...."

ಹಾಗೆಯೇ ಇನ್ನೊಮ್ಮೆ ಜಯಕುಮಾರ ತನ್ನ ಎರಡನೆ ಪತ್ನಿ ಮಂಗಳೆಗೆ ಹೀಗೆ ಹೇಳುತ್ತಾನೆ: "ಮದುವೆಯಾದರೂ ವಿಧವೆಯ ಹಾಗೆ ಬರೀ ಹಣೆಯಲ್ಲಿರ್ತೀಯ. ನಿನ್ನ ಧಣಿ, ಉದ್ಯೋಗದಾತೆ, ಕಂಪನಿಯ ಸ್ಥಾಪಕಿ, ನಿರ್ದೇಶಕಿಯಾಗಿದ್ದವಳು (ಅಂದರೆ ಆತನ ಮೊದಲನೆ ಹೆಂಡತಿ ವೈಜಯಂತಿ) ಹೇಗಿದ್ದಳು? ಮುಖಕ್ಕೆ ಹೊಂದುವಂಥ ಕುಂಕುಮ, ಬಾಚಿ ಹೆಣೆದ ಜಡೆ, ಮುಡಿಯಲ್ಲಿ ಕಂಗೊಳಿಸುವ ಮಲ್ಲಿಗೆ ಹೂವು, ಕೊರಳನ್ನು ಬೆಳಗುವ ಮಾಂಗಲ್ಯದ ಸರ, ನೋಡಿದರೆ ಇವಳು ತನ್ನ ಗಂಡನ ಆಯುಷ್ಯದ ವರ್ಧಕಳು, ಆ ವರ್ಧನೆಗೆ ದೇವರನ್ನು ಪೂಜಿಸುವವಳು ಎನ್ನುವ ಅಭಯ ಹುಟ್ಟಿಸುವ ಪ್ರಸಾಧನ, ಪ್ರಸನ್ನತೆಗಳು. ಇಂಥ ಕ್ಷೇಮಭಾವದಲ್ಲಿ ತಾನೇ ಪುರುಷನ ಪುರುಷತ್ವ ವರ್ಧಿಸಿ ವಿಜೃಂಭಿಸೂದು. ಸೂತಕದಲ್ಲಿರುವ ಹೆಂಡತಿಯ ಹತ್ತಿರ ಯಾವ ಉತ್ತೇಜನವಾಗುತ್ತೆ?"

ಇದು ಲೈಂಗಿಕ ಸಮಸ್ಯೆಗಳಿರುವ ಪುರುಷರಿಗೆ ಭೈರಪ್ಪ ಕೊಡುತ್ತಿರುವ ಸಲಹೆಯೋ ಅಥವಾ ವೈಯಾಗ್ರಾಗೆ ಅವರು ಸೂಚಿಸುತ್ತಿರುವ ಪರ್ಯಾಯವೋ, ಅವರೇ ಬಲ್ಲರು!

ಕಾದಂಬರಿಯಲ್ಲಿ 'ದಿಜ್ಞ್ಮೂಡನನ್ನಾಗಿಸಿತು', 'ಬಹುಸಂಖ್ಯಾಕರು' ತರಹದ ತಪ್ಪುಗಳೂ, "ಹೆಂಡತಿಯ ಕೈಲಿ ಸುಳ್ಳು ಹೇಳುವ ಗಂಡನನ್ನು ಗೌರವಿಸೂದು ಹೇಗೆ" ಮತ್ತು "ನನ್ನ ಲಿವಿಂಗ್ ಟುಗೆದರ್ ಜೊತೆ ಬರ್ತಿದೀನಿ" ತರಹದ ಅರ್ಥವಿಲ್ಲದ ಸಾಲುಗಳೂ ಹೇರಳವಾಗಿ ಸಿಗುತ್ತವೆ. ಅದೂ ನಾಲ್ಕನೆ ಆವೃತ್ತಿಯಲ್ಲಿ.

ಭೈರಪ್ಪನ ಬಗ್ಗೆ ಅಪ್ಪ ಬಹಳ ಹಿಂದೆಯೇ "ಅಧ್ವಾನವಾಗಿ ಬರೆಯುವ", "ಸಾಹಿತಿಗೆ ಬೇಕಾದ ಪ್ರೀತಿ ಮತ್ತು ಸಹಾನುಭೂತಿ ಇಲ್ಲದ", "ಬರಡು ಮನಸ್ಸಿನ ತದೆರಹಿತ ಅಶ್ಲೀಲತೆಯ", "ನೆಟ್ಟಗೆ ವಾಕ್ಯರಚನೆಯೂ ಬಾರದ" ಬರಹಗಾರ ಎಂದಿದ್ದರು. ಅದನ್ನೆಲ್ಲ ಭೈರಪ್ಪರ 'ಕವಲು' ಮತ್ತೊಮ್ಮೆ ಸಾಬೀತುಪಡಿಸುತ್ತದೆ...

ಇದನ್ನೆಲ್ಲ ಇಲ್ಲಿ ದಾಖಲಿಸುವ ಮೂಲಕ 'ಕವಲು' ಎಂಬ ಕೆಟ್ಟ ಕಾದಂಬರಿಯನ್ನು ಓದುವ ಶಿಕ್ಷೆಯಿಂದ ನಿಮ್ಮನ್ನು ಪಾರು ಮಾಡಿದ್ದೇನೆಂದೂ, ನಿಮ್ಮ 250 ರೂ.ಗಳನ್ನು ಉಳಿಸಿದ್ದೇನೆಂದೂ ಭಾವಿಸುತ್ತೇನೆ!

> ಕ್ರೀಡೆಯೊಂದಿಗೆ - ಅದರಲ್ಲೂ ಫುಟ್ಬಾಲ್‌ನಂತಹ ಜನಸಾಮಾನ್ಯರ ಕ್ರೀಡೆಯೊಂದಿಗೆ ಯಾವಾಗಲೂ ರಾಷ್ಟ್ರೀಯತೆಯ ಮನೋಭಾವವೊಂದು ತಳಕು ಹಾಕಿಕೊಂಡಿರುತ್ತದೆ. ಅವಗಣನೆಗೆ ತುತ್ತಾದ, ಅಂಚಿನಲ್ಲಿರುವ ಸಮುದಾಯಗಳಿಗೆ ತಮ್ಮನ್ನು ಗುರುತಿಸಿಕೊಳ್ಳಲು ಸಾಂಸ್ಕೃತಿಕ ಅನನ್ಯತೆಗಳು ಅವಶ್ಯವಾಗಿ ಬೇಕೇಬೇಕು.



ಆತ್ಮವಿಶ್ವಾಸ ಮೂಡಿಸಿದ ವಿಶ್ವಕಪ್

• ಟಿ. ಅವಿನಾಶ್

ಪ್ರವಾಸಿಗರಿಗೆ ಉಳಿದುಕೊಳ್ಳಲು ಒಳ್ಳೆಯ ಹೊಟೇಲ್‌ಗಳಿಲ್ಲದ, ಕಳ್ಳರು-ದರೋಡೆಕೋರರು ಆಟಗಾರರು/ಪ್ರವಾಸಿಗರನ್ನು ದೋಚಲು ಕಾಯುತ್ತಿರುವ, ಲಕ್ಷಾಂತರ ಕ್ರೀಡಾಪ್ರೇಮಿಗಳನ್ನು ಸಾಗಿಸಲು ವಿಮಾನಗಳ ಕೊರತೆ ಇರುವ 'ಕಗ್ಗತ್ತಲೆಯ ಖಂಡ' ಆಫ್ರಿಕಾದಲ್ಲಿ ಜಾಗತಿಕ ಟೂರ್ನಿಯನ್ನು ಆಯೋಜಿಸಲು ಸಾಧ್ಯವೇ ಇಲ್ಲ ಎಂಬ ಠರಾವುಗಳ ನಡುವೆಯೇ ಪ್ರಾರಂಭವಾದ ವಿಶ್ವಕಪ್ ಫುಟ್‌ಬಾಲ್ 'ಅನಿರೀಕ್ಷಿತವಾಗಿ' ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಇಂತಹ ಆಪಾದನೆ-ಅನುಮಾನಗಳ ಹಿಂದೆ ಶೇ.25 ರಷ್ಟು ವಾಸ್ತವವಿದ್ದರೆ, ಶೇ.75 ರಷ್ಟು ಪುರಾತನ ಕಾಲದ ವಸಾಹತುಶಾಹಿ ಮನಃಸ್ಥಿತಿಯ ಪಳೆಯುಳಿಕೆಗಳೇ ಇವೆ. ಕಪ್ಪು ಜನಾಂಗವನ್ನು ಕುರಿತಾದ ಈ ಸಿದ್ಧಮಾದರಿ ರೂಪಕಗಳು-ಪ್ರಶ್ನೆಗಳು ಇವತ್ತಿನದಂತೂ ಅಲ್ಲ, ಇದಕ್ಕೆ ಸುದೀರ್ಘ ದಮನಕಾರಿ ಇತಿಹಾಸವೇ ಇರುವುದಂತೂ ಸತ್ಯ. ಇದೀಗ ದಕ್ಷಿಣ ಆಫ್ರಿಕಾ ಈ ಎಲ್ಲ 'ನಿರೀಕ್ಷೆ'ಗಳನ್ನು ಸುಳ್ಳು ಮಾಡಿ ಟೂರ್ನಿಯನ್ನು ಸಾಂಗವಾಗಿ ನಡೆಸಿಕೊಟ್ಟಿದೆ.

ಕ್ರೀಡೆಯೊಂದಿಗೆ - ಅದರಲ್ಲೂ ಫುಟ್ಬಾಲ್‌ನಂತಹ ಜನಸಾಮಾನ್ಯರ ಕ್ರೀಡೆಯೊಂದಿಗೆ ಯಾವಾಗಲೂ ರಾಷ್ಟ್ರೀಯತೆಯ ಮನೋಭಾವವೊಂದು ತಳಕು ಹಾಕಿಕೊಂಡಿರುತ್ತದೆ. ಅವಗಣನೆಗೆ ತುತ್ತಾದ, ಅಂಚಿನಲ್ಲಿರುವ ಸಮುದಾಯಗಳಿಗೆ ತಮ್ಮನ್ನು ಗುರುತಿಸಿಕೊಳ್ಳಲು ಸಾಂಸ್ಕೃತಿಕ ಅನನ್ಯತೆಗಳು (identity) ಅವಶ್ಯವಾಗಿ ಬೇಕೇಬೇಕು. ತಲೆತಲಾಂತರದಿಂದ ವಸಾಹತುಶಾಹಿ ದೌರ್ಜನ್ಯಕ್ಕೆ ಒಳಗಾದ ಆಫ್ರಿಕಾ ವರ್ತಮಾನದಲ್ಲಿ ತೀವ್ರತರ ಆಂತರಿಕ ಬಿಕ್ಕಟ್ಟನ್ನು ಎದಿರುಸುತ್ತಿದೆ. ಬಹುಪಾಲು ಸರ್ವಾಧಿಕಾರಿಗಳನ್ನೊಳಗೊಂಡ ಆಫ್ರಿಕಾ ಈ ವಸಾಹತೋತ್ತರ ಕಾಲಘಟ್ಟದಲ್ಲೂ ವಿಚ್ಛಿದ್ರವೇ ಆಗಿರುವುದು ಆ ಖಂಡದ ದುರಂತ. ಬಡತನ, ಹಸಿವುಗಳಿಂದ ನರಳುತ್ತಿರುವ ಕಂಗೆಟ್ಟಿರುವ ಆಫ್ರಿಕಾ ಜನತೆಗೆ ಈ ಟೂರ್ನಿ ಒಂದು ತಿಂಗಳ ಕಾಲವಾದರೂ ದೊಡ್ಡ ಮಟ್ಟದ ರಿಲೀಫ್ ಕೊಟ್ಟಿರುವುದು ಸುಳ್ಳಲ್ಲ. ಹಾಗೆಯೇ ತಾವು ಕೂಡಾ ಜಾಗತಿಕ ಮಟ್ಟದಲ್ಲಿ ಇತರರಿಗೆ ಸರಿಸಮಾನರಾಗಿ ನಿಲ್ಲಲು ಶಕ್ತರೆಂದು ಈ ಟೂರ್ನಿಯ ಯಶಸ್ವೀ ಆಯೋಜನೆ ಸಾರಿ ಸಾರಿ ಹೇಳಿತು. ಇಂತಹ insecurityಗಳಿಂದ ನರಳುತ್ತಿರುವ ಸಮುದಾಯಗಳಿಗೆ ಆತ್ಮವಿಶ್ವಾಸ ಮೂಡಿಸಲು, ಕೀಳರಿಮೆಯಿಂದ ಹೊರಬರಲು ಈ ರೀತಿಯ ಅಪೂರ್ವ ಘಳಿಗೆಗಳು ಅತ್ಯಗತ್ಯ. ಕ್ಯೂಬಾದಂತಹ ಪುಟ್ಟದೇಶ ಒಲಿಂಪಿಕ್ಸ್‌ನ ಬಾಕ್ಸಿಂಗ್ ರಿಂಗ್‌ನಲ್ಲಿ ದೈತ್ಯ ಅಮೆರಿಕಾದ ಬಾಕ್ಸರುಗಳಿಗೆ ನೀಡುವ ಒಂದೊಂದು ಕಿಕ್‌ನ ಹಿಂದೆಯೂ ಆತ್ಮವಿಶ್ವಾಸದ ಹಾಗೂ ಪ್ರತೀಕಾರದ ಛಾಯೆಗಳಿರುತ್ತವೆ ಅಥವಾ ದಶಕಗಳ ಕಾಲ ಜನಾಂಗೀಯ ಕಲಹದಿಂದ ನರಳಿದ ಶ್ರೀಲಂಕಾ 1996 ರಲ್ಲಿ ವಿಶ್ವಕಪ್ ಕ್ರಿಕೆಟ್ ಗೆದ್ದಾಗ ಸಿಕ್ಕ ರಿಲೀಫ್ ಇದೇ ಬಗೆಯದು. ಆದ್ದರಿಂದಲೇ ದಕ್ಷಿಣ ಆಫ್ರಿಕಾ ಒಟ್ಟಾರೆಯಾಗಿ ಪಂದ್ಯಾವಳಿಗಳನ್ನು ಯಶಸ್ವಿಯಾಗಿ ಆಯೋಜನೆ ಮಾಡಿರುವುದು ಸಾಂಸ್ಕೃತಿಕವಾಗಿ ಬಹುಮುಖ್ಯ.

ಪ್ರತಿಯೊಬ್ಬ ಆಟಗಾರ-ತಂಡಗಳೂ ತನ್ನ/ತಮ್ಮ ಅತ್ಯುತ್ತಮ ಕಲಾಕೌಶಲ್ಯವನ್ನು ತೋರಿಸಲು ಹಾತೊರೆಯುವ ಈ ಪಂದ್ಯಾವಳಿಯನ್ನು ನಿಧಾನವಾಗಿ ಅವಲೋಕಿಸಿದರೆ ಹಲವಾರು ಅನಿರೀಕ್ಷಿತಗಳೇ ಎದುರಾಗುತ್ತವೆ. ಮೊದಲೇ ಸೂಪರ್ ಸ್ಟಾರ್ ಆಗಿದ್ದ ಪಾಪ್ ಗಾಯಕಿ ಶಕೀರಾ ತನ್ನ ವಾಕಾ ವಾಕಾ ಹಾಡಿನಿಂದ ರಾತ್ರೋರಾತ್ರಿ ಜಾಗತಿಕ ಮೆಗಾಸ್ಟಾರ್ ಆಗಿ ಪರಿವರ್ತನೆಗೊಂಡಳು. ಈ ಶಕೀರಾ ಬ್ರಾಂಡನ್ನು ತಮ್ಮ ಲಾಭಕೋರತನಕ್ಕೆ ಉಪಯೋಗಿಸಿಕೊಳ್ಳಲು ಬಹುರಾಷ್ಟ್ರೀಯ ಕಂಪನಿಗಳು ಮುಗಿಬಿದ್ದಿವೆ. ಇವಳ ಮಾದಕ ನೃತ್ಯದಿಂದ ಪ್ರಾರಂಭಗೊಂಡ ಪಂದ್ಯಾವಳಿ ಪ್ರಿ ಟೂರ್ನಮೆಂಟ್ ಫೇವರಿಟ್ ಆಗಿದ್ದ ಸ್ಪೇನ್‌ನ ಅರ್ಹ ವಿಜಯದೊಂದಿಗೆ ಕೊನೆಗೊಂಡಿತು. ಸೆಮಿಫೈನಲ್‌ನಲ್ಲಿ ಜರ್ಮನಿಯ ವಿರುದ್ಧದ ಪಂದ್ಯವನ್ನು ಹೊರತುಪಡಿಸಿದರೆ ಸ್ಪೇನ್ ಅದ್ಭುತ ಎನ್ನುವ ಆಟವನ್ನೇನೂ ಪ್ರದರ್ಶಿಸಲಿಲ್ಲ. ಆದರೆ ಇವರ ಉನ್ನತ ತಾಂತ್ರಿಕ ಕೌಶಲ್ಯತೆ, ಪ್ರಬಲ ರಕ್ಷಣೆಯ ಕೋಟೆ, ಡೇವಿಡ್ ವಿಲ್ಲಾನ ಗೋಲುಗಳು, ಹೊಂದಾಣಿಕೆಯ ಸಾಂಘಿಕ ಆಟ ತಂಡವನ್ನು ಪ್ರಯಾಸಕರ ವಿಜಯದತ್ತ ಕೊಂಡೊಯ್ದಿತು. ಹಾಗೆ ನೋಡಿದರೆ ರೋಚಕ ಆಟವನ್ನಾಡಿ ಜಗತ್ತಿನ ಮನಸೂರೆಗೊಂಡ ತಂಡ ಯುವ ಆಟಗಾರರೇ ತುಂಬಿರುವ ಜರ್ಮನಿ. ತಲೆ ತಲಾಂತರದಿಂದ ಬೌದ್ಧಿಕ ಆಟಕ್ಕೆ ಹೆಸರಾದ ಜರ್ಮನಿ ಈ ಬಾರಿ ಧಾಂ-ಧೂಂ ಆಕ್ರಮಣವನ್ನು ಪ್ರದರ್ಶಿಸಿತು. ಜರ್ಮನಿ ತಂಡದ ವಿಶೇಷವೆಂದರೆ ಶೇ.೫೦ಕ್ಕೂ ಹೆಚ್ಚು ಆಟಗಾರರು ಬೇರೆ ರಾಷ್ಟ್ರ-ಜನಾಂಗದ ಮೂಲದವರು. ಹಿಟ್ಲರನ ನಾಜಿ ಸಿದ್ಧಾಂತ ಈ ರೀತಿಯಲಾದರೂ ಸೋಲನ್ನಪ್ಪಿದ್ದು ಒಂದು ಸಮಾಧಾನಕರ ಅಂಶ. ಹೆಚ್ಚು ಗೋಲುಗಳೇ ಬರದ ಟೂರ್ನಿಯಲ್ಲಿ ಗೋಲುಗಳ ಮಳೆಯನ್ನೇ ಹರಿಸಿದ ಜರ್ಮನಿ, ಸೊಕ್ಕಿದ್ದ ಇಂಗ್ಲೆಂಡ್ ಹಾಗೂ ಅತಿಯಾದ ಆತ್ಮವಿಶ್ವಾಸದಿಂದ ಉಬ್ಬಿದ್ದ ಅರ್ಜೆಂಟೈನಾವನ್ನು ಸದೆ ಬಡಿದ ರೀತಿ ಒಂದು ಚಾಂಪಿಯನ್ ತಂಡಕ್ಕೆ ತಕ್ಕುದಾಗಿತ್ತು. ಆದರೆ ಇವರ ಚೇತೋಹಾರಿ ಆಟವನ್ನು ಅರಿತುಕೊಂಡ ಸ್ಪೇನ್ ತಾಂತ್ರಿಕವಾಗಿ ಜರ್ಮನಿಯನ್ನು ಕಟ್ಟಿಹಾಕಿತು. ಎಷ್ಟರಮಟ್ಟಿಗೆ ಇವರು ಜರ್ಮನಿಯನ್ನು ಪಳಗಿಸಿದರೆಂದರೆ, ದಾಳಿಯನ್ನು ಸಂಘಟಿಸಲು ಜರ್ಮನಿಯ ಮುನ್ನಡೆ ಆಟಗಾರರಿಗೆ ಚೆಂಡೆ ದೊರಕುತ್ತಿರಲಿಲ್ಲ. ಅನುಭವ, ತಾಂತ್ರಿಕ ಕೌಶಲ್ಯದ ಎದುರು ಅನನುಭವಿ ಜರ್ಮನಿ ತಲೆಬಾಗಿದ್ದು ತೀರಾ ದುಃಖದ ವಿಚಾರವೇ ಸರಿ.




ಸ್ವಲ್ಪಮಟ್ಟಿಗೆ ಜರ್ಮನಿಯಂತೆಯೇ ಆಕ್ರಮಣಕಾರಿ ಆಟವಾಡಿ ನಿರೀಕ್ಷೆಗಳ ಮಹಾಪೂರ ಹುಟ್ಟುಹಾಕಿ ನಂತರ ಧೊಪ್ಪನೇ ನೆಲಕ್ಕೆ ಬಿದ್ದ ಇನ್ನೊಂದು ತಂಡವೆಂದರೆ ಅರ್ಜೆಂಟೈನಾ. ಪ್ರಯಾಸ ಪಟ್ಟು ಅರ್ಹತಾ ಸುತ್ತಿನಿಂದ ಮೇಲೆ ಬಂದ ಇದರ ವರ್ಣರಂಜಿತ ವ್ಯಕ್ತಿತ್ವದ ಕೋಚ್ ಮರಡೋನಾ ತನ್ನ ತಂಡ ಕಪ್ಪು ಗೆದ್ದೇ ಗೆಲ್ಲುತ್ತದೆ ಎಂದು ಪ್ರತಿದಿನ ಕೂಗಾಡುತ್ತಿದ್ದ. ಈತ ತಂಡದ ಆಟಗಾರರನ್ನು ಅಪ್ಪಿಕೊಳ್ಳುವುದು, ಹೆಚ್ಚುಕಡಿಮೆ ತಾನೇ ಮೈದಾನಕ್ಕಿಳಿದಂತೆ ನಟಿಸುವುದು, ತೀವ್ರ ಭಾವೋದ್ವೇಗದಲ್ಲಿ ಪ್ರತಿಕ್ರಿಯಿಸುವುದು ಮುಂತಾದ ನಡವಳಿಕೆಗಳಿಂದ ವಿಶ್ವದ ಗಮನ ಸೆಳೆಯುವಲ್ಲಿ ನಿರತನಾಗಿದ್ದ. ಆದರೆ ಆಟ ಬಲ್ಲವರು ಈತ ಕೋಚ್ ವೇಷದಲ್ಲಿರುವ ಬಫೂನ್ ಎಂದು ಸರಿಯಾಗಿಯೇ ಗುರುತಿಸಿದ್ದರು. ಮರಡೋನಾ ಸರ್ವಶ್ರೇಷ್ಠ ಆಟಗಾರ ಎಂಬುದರಲ್ಲಿ ಎರಡು ಮಾತಿಲ್ಲ, ಆದರೆ ಶ್ರೇಷ್ಠ ಆಟಗಾರ ಶ್ರೇಷ್ಠ ಕೋಚ್ ಆಗಬೇಕಿಲ್ಲ ಎಂಬುದು ಎಲ್ಲ ಕ್ರೀಡೆಗಳಿಗೂ ಅನ್ವಯಿಸುತ್ತದೆ. ಪಾಕಿಸ್ತಾನಕ್ಕೆ ಜಾವೇದ್ ಮಿಯಂದಾದ್ ಅಥವಾ ಭಾರತಕ್ಕೆ ಕಪಿಲ್ ದೇವ್ ಯಾವತ್ತೂ ಒಳ್ಳೆಯ ಕೋಚ್‌ಗಳಾಗಿರಲಿಲ್ಲ. ಮರಡೋನಾ ಹಾಗೂ ಕಪಿಲ್ ದೇವ್ ಆಟಗಾರರಿಗೆ ಸಂಪೂರ್ಣ ಸ್ವಾತಂತ್ರ ನೀಡಿದ್ದರೆ, ಮಿಯಂದಾದ್ ತನ್ನ ಸ್ವಭಾವಕ್ಕೆ ತಕ್ಕಂತೆ ಸರ್ವಾಧಿಕಾರಿ ಧೋರಣೆಯವನು. ಒಮ್ಮೆ ಭಾರತದ ವಿರುದ್ಧದ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ಸೋಲಿನತ್ತ ಸಾಗುತ್ತಿದ್ದಾಗ ಕ್ರೀಸ್‌ನಲ್ಲಿದ್ದ ಶೋಯೆಬ್ ಮಲ್ಲಿಕ್‌ಗೆ ಚೆಂಡನ್ನು ಆ ಕಡೆ ಹೊಡಿ, ಈ ಕಡೆ ಹೊಡಿ ಎಂದು ಉದ್ದುದ್ದ ಕೈ ತೋರಿಸಿ ನಿರ್ದೇಶನ ನೀಡುತ್ತಿದ್ದ. ಇದು ಎಂತಹ ಮೂರ್ಖತನವೆಂದರೆ ಟಿವಿ ನಿರೂಪಕ ಶೇಖರ್ ಸುಮನ್ ಮಿಯಂದಾದನನ್ನು ಟ್ರಾಫಿಕ್ ಇನ್ಸ್‌ಪೆಕ್ಟರ್‌ಗೆ ಹೋಲಿಸಿದ್ದ!! ಅರ್ಜಂಟೈನಾದ ಕತೆಯೂ ಇದೇರೀತಿ ಮುಕ್ತಾಯವಾಯಿತು. ಒಂದು ಕಡೆ ಜರ್ಮನಿಯ ರಕ್ಷಣಾ ಪಡೆ ಟೋವೆಜ್-ಮೆಸ್ಸಿಯನ್ನು ಕಟ್ಟಿ ಹಾಕಿದರೆ ಮತ್ತೊಂದು ಕಡೆ ಅರ್ಜಂಟೈನಾದ ರಕ್ಷಣೆಯ ಲೋಪಗಳನ್ನು ಫೈದಾ ಉಠಾಯಿಸಿದ ಜರ್ಮನ್ ಮುನ್ನಡೆ ಗೋಲುಗಳ ಸುರಿಮಳೆಗೈದಿತು. ಮರಡೋನಾನಲ್ಲಿ ಇದಕ್ಕೆ ಯಾವುದೇ ಉತ್ತರವಿರಲಿಲ್ಲ.

ಇನ್ನುಳಿದಂತೆ ಬ್ರಾಜಿಲ್ ತನ್ನ ಪಾರಂಪರಿಕ ಆಕ್ರಮಣಕಾರಿ ಆಟಕ್ಕೆ ತಿಲಾಂಜಲಿ ಇಟ್ಟು ಸಂಪೂರ್ಣ ವೈಫಲ್ಯ ಅನುಭವಿಸಿತು. ಗೆದ್ದ ನಾಲ್ಕು ಪಂದ್ಯಗಳಲ್ಲೂ ಪ್ರೇಕ್ಷಕರ ಮನಸೆಳೆಯುವಂತೆ ಆಟವಾಡಲು ವಿಫಲವಾಯಿತು. ಇನ್ನೇನು ಕಪ್ ಗೆದ್ದೆ ಬಿಡುತ್ತಾರೆ ಎನ್ನುವ ಹವಾ ಸೃಷ್ಟಿಸಿದ್ದ ಇಂಗ್ಲೆಂಡ್‌ಗೆ ಆಗಿದ್ದೂ ಇದೇ ಗತಿ. ದಕ್ಷಿಣ ಅಮೆರಿಕಾ ಉಪಖಂಡ ಈ ಬಾರಿ ತೀರಾ ಹಿನ್ನಡೆ ಅನುಭವಿಸಿದರೆ, ಯೂರೋಪ್ ಖಂಡ ಮೊದಲ ಮೂರು ಸ್ಥಾನಗಳನ್ನು ಅರ್ಹವಾಗಿಯೇ ಗಳಿಸಿಕೊಂಡಿತು. ಆಫ್ರಿಕಾ ಖಂಡ ಲೆಕ್ಕಕ್ಕೆ ಇರಲಿಲ್ಲ. ಏಷ್ಯಾ ಖಂಡ ತನ್ನ ಸಾಮರ್ಥ್ಯಕ್ಕೂ ಮೀರಿ ಆಟ ಪ್ರದರ್ಶಿಸಿತು. ಉರುಗ್ವೆ ಮಾತ್ರ ಕಳೆದ 60 ವರ್ಷಗಳಲ್ಲಿ ಈ ಬಾರಿ ಅಮೋಘ ಪ್ರದರ್ಶನ ತೋರಿತು. ಯಾವುದೇ ಒಬ್ಬ ವ್ಯಕ್ತಿ ಈ ಟೂರ್ನಿಯಲ್ಲಿ ನಿರ್ಣಾಯಕವಾಗಿ ಮಿಂಚದಿದ್ದರೂ ಉರುಗ್ವೆಯ ಫೋರ್ಲಾನ್ ಹಾಗೂ ಜರ್ಮನಿಯ ಥಾಮಸ್ ಮುಲ್ಲರ್ ತಮ್ಮ ಅತ್ಯುತ್ತಮ ಆಟದಿಂದಾಗಿ ಪ್ರಶಸ್ತಿ ಗೆದ್ದರು. ಜುಬಲಾನಿ ಚೆಂಡು ಗಾಳಿಯಲ್ಲಿ ಸಾಗುವಾಗ ಮೈಮೇಲೆ ಭೂತ ಬಂದಂತೆ ವರ್ತಿಸಿದ್ದರಿಂದ ಹಲವಾರು ಗೋಲು ಕೀಪರ್‌ಗಳು ಬಫೂನ್‌ಗಳಂತಾದರು. ಲೀಗ್ ಹಂತದ ಪಂದ್ಯಗಳು ತೀರಾ ನಿರಾಸೆ ಹುಟ್ಟಿಸಿದರೆ ನಾಕೌಟ್ ಹಂತದ ಪಂದ್ಯಗಳು ಒಂದು ಮಟ್ಟದ ರೋಚಕತೆಯನ್ನು ಸೃಷ್ಟಿಸಿದವು. ಆದರೆ ಫುಟ್‌ಬಾಲ್ ಕ್ರೀಡೆಯನ್ನು ಮತ್ತೊಂದು ಲೋಕಕ್ಕೆ ಕೊಂಡೊಯ್ಯುವಂತಹ ಯಾವುದೇ ಒಂದು ಪಂದ್ಯ ಇಡೀ ಟೂರ್ನಿಯಲ್ಲಿ ಇರಲಿಲ್ಲ. ಅಂತೂ ತಿಂಗಳ ಕಾಲ ಭಾರತದಂತಹ ದೇಶದಲ್ಲಿ ಕ್ರಿಕೆಟ್ ಕ್ರೀಡಾಪುಟಗಳಿಂದ ನಿರ್ಣಾಯಕವಾಗಿ ನಿರ್ಗಮಿಸಿ ದಾಖಲೆಯನ್ನೇ ಸೃಷ್ಟಿಸಿತೆನ್ನಬಹುದು. ಫುಟ್ಬಾಲ್‌ನ ಜಾಗತಿಕವ್ಯಾಪ್ತಿಯ ಎದುರು ಕ್ರಿಕೆಟ್ ಈ ಹೊತ್ತಲ್ಲಂತೂ ಕುಬ್ಜವೆನಿಸಿತು.

ಮುದ್ರಣ ಮಾಧ್ಯಮದಲ್ಲಿ ಅದ್ಭುತವಾಗಿ ಟೂರ್ನಿಯನ್ನು ಕವರ್ ಮಾಡಿದ್ದು ದಿ ಹಿಂದೂ ದಿನಪತ್ರಿಕೆ ಹಾಗೂ ಸ್ವಲ್ಪಮಟ್ಟಿಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆ. ಭಾರತದಲ್ಲಿ ಫುಟ್ಬಾಲ್ ಕುರಿತು ಅಧಿಕಾರಯುತವಾಗಿ ವಿಶ್ಲೇಷಿಸುವ ಮತ್ತು ಪಂದ್ಯದ ವಿಶಿಷ್ಟ ಆಯಾಮಗಳನ್ನು ಸೂಚಿಸಲು ಸಾಮರ್ಥ್ಯವಿರುವ ಪತ್ರಕರ್ತರು ಸ್ವಲ್ಪ ವಿರಳವೇ. ಅನೇಕರ ವಿಶ್ಲೇಷಣೆ ವಿವರಣೆಯ ಮಟ್ಟದಲ್ಲೇ ನಿಂತುಬಿಡುತ್ತದೆ. ಈ ಕೊರತೆಯನ್ನು ತುಂಬಲೋ ಎನ್ನುವಂತೆ ದಿ ಟೈಮ್ಸ್ ಆಫ್ ಇಂಡಿಯಾ ಸಂಬಂಧವೇ ಇಲ್ಲದ ಸೌರವ್ ಗಂಗೂಲಿ ಹಾಗೂ ಮಂದಿರಾ ಬೇಡಿಗಳಂತಹ 'ಸೆಲೆಬ್ರಿಟಿ'ಗಳ ಮೊರೆ ಹೋಗಿತ್ತು. ಇದನ್ನು celebration of mediocrity ಎನ್ನಬಹುದೇ ಹೊರತು ವಿಶ್ಲೇಷಣೆ ಎನ್ನಲಂತೂ ಸಾಧ್ಯವಿಲ್ಲ. ಆದರೆ ದಿ ಹಿಂದೂ ಪತ್ರಿಕೆ ಇಂಗ್ಲೆಂಡ್‌ನ ಗಾರ್ಡಿಯನ್ ಹಾಗೂ ಅಮೆರಿಕೆಯ ನ್ಯೂಯಾರ್ಕ್ ಟೈಮ್ಸ್‌ನ ವ್ಯಾಖ್ಯಾನಕಾರರ ಮೂಲಕ ಚೇತೋಹಾರಿ ಲೇಖನ ಮುದ್ರಿಸಿತು. ಈ ಮೂಲಕ ಹಿಂದೂ ಹಾಗೂ ಕ್ರೀಡೆಗಳ ನಡುವಣ ಆತ್ಮೀಯವಾದ ಸಂಬಂಧ ಹಾಗೇ ಮುಂದುವರೆಯಿತು. ●

ಸಂತೋಷ್ ಲಾಡ್ ಪ್ರಕರಣ ಇದು ಯಾರ ಸಂಚು?



ಕಲಘಟಗಿ ಶಾಸಕ ಸಂತೋಷ್ ಲಾಡ್‌ಗೆ ಸಂಕಟ ಂದು ಸುತ್ತಿಕೊಂಡಿದೆ. ಇದು ಶಾಸಕತ್ವದ ಪರಿಧಿಯಲ್ಲಿ ರುವಂತಹುದಲ್ಲ. ಬದಲಾಗಿ ವ್ಯವಹಾರವೊಂದಕ್ಕೆ ಂಧಿಸಿದ್ದು. ಇದ್ದುದರಲ್ಲೇ ಒಂದಷ್ಟು ಜನಮನ್ನಣೆ ಂದಿರುವ ಲಾಡ್ ಸಿವಿಲ್ ಪ್ರಕರಣವೊಂದು ಕ್ರಿಮಿನಲ್ ೂಪ ಪಡೆದ ಕುತಂತ್ರಕ್ಕೆ ಬಲಿಯಾಗಿರುವುದು ಲ್ನೋಟಕ್ಕೇ ಸಾಬೀತಾಗುವ ಅಂಶ.

ಇಡೀ ಧಾರವಾಡ ಜಿಲ್ಲೆಯಲ್ಲಿ ಲಾಡ್ ಏಕೈಕ ಕಾಂಗ್ರೆಸ್ ಸಕ. ಬಿಜೆಪಿಯ ಕೋಮುವಾದಿ ರಾಜಕಾರಣಕ್ಕೆ ಸೆಡ್ಡು ಡೆಯಬೇಕಿದ್ದ ಕಾಂಗ್ರೆಸ್ ಒಳಬೇಗುದಿಯಲ್ಲಿ ಬೆಂದು ೀದ ಪರಿಣಾಮ ಜಿಲ್ಲೆಯಲ್ಲಿ ಅಸ್ತಿತ್ವವನ್ನೇ ುಕೊಂಡಿತ್ತು. ಅಂಥಾ ಸಂದರ್ಭದಲ್ಲಿ ಅದೇ ಕಾಂಗ್ರೆಸ್ ಿಂದ ಕಲಘಟಗಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸಂತೋಷ್ ಡ್ ಗೆದ್ದಿದ್ದು ವೈಯಕ್ತಿಕ ವರ್ಚಸ್ಸಿನಿಂದಲೇ ಎಂಬುದನ್ನು ಇಂದಿಗೂ ಅನುಮೋದಿಸುತ್ತಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಲಾಡ್ ತನ್ನ ಸಕತ್ವದ ಪರಿಧಿಯಲ್ಲಿ ಯಾವುದೇ ಅಪರಾತಪರಾ ಡಿಕೊಂಡಿಲ್ಲ. ಕೊಳವೆ ಬಾವಿ, ಮಿ ಉಳಲು ಸಹಾಯ ತೆಲ್ಲ ಜನರಿಗೆ ಒಂದಷ್ಟು ರಾಗಿರುವ ಲಾಡ್ ಕೀಯವಾಗಿ ಬೆಳೆಯುವ ಣಗಳಿದ್ದವೆ. ಜೊತೆಗೆ ವೈಯಕ್ತಿಕ ಹಾರ-ಉದ್ಯಮದ ಲಕವೂ ಆರ್ಥಿಕವಾಗಿ ವಾಗಿದ್ದಾರೆ. ಇವೆರಡನ್ನೂ ದೇ ಕಲ್ಲಿಂದ ಕೆಡಹುವ ುದ್ದೇಶದಿಂದಲೇ ಲಾಡ್ ುದ್ಧ ಇಂತಹುದೊಂದು ಸಂಚು ದಿದೆಯಾ ಎಂಬ ಮಾನಿಯೂ ದಟ್ಟವಾಗಿದೆ.

ಇತ್ತೀಚೆಗಿನ ಲಾಡ್ ಬಂಧನದ ಹಿಂಚು-ಮುಂಚಿನ ಡಾವಳಿಗಳನ್ನು ಗಮನಿಸಿ ಕೆದಕುತ್ತಾ ಹೋದರೆ ಲ್ಲೂಂಡ ಗುಮಾನಿಗಳಿಗೆ ಮತ್ತಷ್ಟು ಬಲಬರುವಂಥ ಡಾವಳಿಗಳೇ ಎದುರಾಗುತ್ತವೆ. ಅದರ ಬಗ್ಗೆ ಳುವುದಕ್ಕಿಂತ ಮೊದಲು ಒಟ್ಟಾರೆ ಘಟನೆಯ ಬಗ್ಗೆ ವರಿಸುವುದೊಳಿತು.

ಸಂತೋಷ್ ಲಾಡ್ ಮಾಲೀಕತ್ವದ ಬಾಲಾಜಿ ಕಂಪೆನಿ ವರ್ಷಗಳ ಹಿಂದೆ ಎಮ್ಮಾರ್ ಹೆಸರಿನ ಅಂತಾರಾಷ್ಟ್ರೀಯ ಪೆನಿಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಅದರನ್ವಯ ಗಳೂರಿನಲ್ಲಿ ನಿಗದಿತ ಪ್ರಮಾಣದ ಆಸ್ತಿ ಖರೀದಿಸಿ ನ್ನ ಅಭಿವೃದ್ಧಿಪಡಿಸಿ ಕೊಡಬೇಕಾದ ಹೊಣೆಯನ್ನು ಲಾಜಿ ಕಂಪೆನಿ ಹೊತ್ತಿತ್ತು. ಇದಕ್ಕಾಗಿ ಬಾಲಾಜಿ ಕಂಪೆನಿ ೂ ಚಿಲ್ಲರೆ ಕೋಟಿಗಳನ್ನು ಎಮ್ಮಾರ್ ಗ್ರೂಪ್‌ನಿಂದ ಪಡೆದದ್ದಲ್ಲದೆ, ನಿಗದಿತ ವೇಳೆಯಲ್ಲಿ ಈ ಪ್ರಕ್ರಿಯೆ ನಡೆಯದಿದ್ದರೆ ಹಣ ವಾಪಾಸು ಮಾಡಬೇಕೆಂಬ ಕರಾರಿಗೆ ಕೂಡಾ ಸಹಿ ಹಾಕಲಾಗಿತ್ತು. ಆದರೆ ಕೆಲ ಕಾರಣಗಳಿಂದಾಗಿ ಅನುದ್ದೇಶ ಪೂರ್ವಕವಾಗಿ ಈ ಪ್ರಕ್ರಿಯೆಯಲ್ಲಿ ಕೆಲ ತೊಡಕುಗಳುಂಟಾಗಿ ಜಮೀನು ಅಭಿವೃದ್ಧಿ ಪ್ರಕ್ರಿಯೆಗೆ ಅಡಚಣೆಯಾಯಿತು. ಎಮ್ಮಾರ್ ಕಂಪೆನಿ ಇದನ್ನೇ ಮುಂದಿಟ್ಟುಕೊಂಡು ಹಣವಾಪಾಸು ಮಾಡುವಂತೆ ಕೇಳಿತಾದರೂ ಅದಾಗಲೇ ಲಾಡ್ ಅರ್ಧಕ್ಕಿಂತ ಹೆಚ್ಚು ಹಣ ಸುರಿದಿದ್ದರಿಂದ ಪೂರ್ತಿ ವಾಪಾಸು ಕೊಡಲೊಪ್ಪಲಿಲ್ಲ. ಈ ಸಂಬಂಧ ಎಮ್ಮಾರ್ ಹಾಗೂ ಬಾಲಾಜಿ ಕಂಪೆನಿಗಳ ನಡುವೆ ಕಾನೂನು ಸಮರ ಚಾಲ್ತಿಗೆ ಬಂದಿತ್ತು.

ಇಂತಹುದುದೊಂದು ಸಿವಿಲ್ ಪ್ರಕರಣವೇ ಇದ್ದಕ್ಕಿದ್ದಂತೆ ಕ್ರಿಮಿನಲ್ ಸ್ವರೂಪ ಪಡೆದು ಸಂತೋಷ್ ಲಾಡ್‌ಗೆ ಅಟಕಾಯಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಲಾಡ್ ವಿರುದ್ಧ ನಿಗಾ ಸುತ್ತೋಲೆ (L.O.C) ಜಾರಿಯಾಗಿ ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧನ-ಬಿಡುಗಡೆ ಪ್ರಹಸನಗಳೂ ನಡೆದು ಹೋಗಿವೆ.



ಈಗ ಸಂಪೂರ್ಣವಾಗಿ ಈ ಪ್ರಕರಣದ ದಾಖಲಾತಿಗಳನ್ನು ತಡಕಾಡಿದರೆ ಕಾನೂನಾತ್ಮಕವಾಗಿ ಲಾಡ್ ಎಡವಿದ ಕುರುಹುಗಳು ಎಲ್ಲೂ ಕಾಣಸಿಗುವುದಿಲ್ಲ. ಬದಲಾಗಿ ಅಗೋಚರ ಸಂಚೊಂದರ ವಾಸನೆ ಬಡಿಯಲಾರಂಭಿಸುತ್ತದೆ!

2007ರಲ್ಲಿ ಬಾಲಾಜಿ ಬಿಲ್ಡರ್ಸ್ ಮತ್ತು ಎಮ್ಮಾರ್ ಗ್ರೂಪ್ ನಡುವೆ ಈ ಒಪ್ಪಂದ ಏರ್ಪಟ್ಟಿದ್ದು, ಇದರನ್ವಯ 20-20 ಎಕರೆಯಷ್ಟು ಜಮೀನನ್ನು ಹಂತಹಂತವಾಗಿ ಎಮ್ಮಾರ್ ಗ್ರೂಪ್‌ನವರಿಗೆ ನೋಂದಾಯಿಸಿ ಕೊಡಬೇಕಾಗಿತ್ತು. ಈ ಸಂಬಂಧ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ 34.12 ಗುಂಟೆಯ ಖರೀದಿ ವ್ಯವಹಾರ ನಡೆದಿತ್ತು. ಈ ಜಮೀನಿನ ಕುರಿತು ಎಮ್ಮಾರ್‌ನ ರೋಹಿತ್ ಎಂಬಾತನಿಗೆ ಇ-ಮೇಲ್ ಮೂಲಕ ಮಾಹಿತಿ ನೀಡಿ ನೋಂದಾಯಿಸಿಕೊಳ್ಳುವಂತೆ ಲಾಡ್ ಕಡೆಯಿಂದ ವಿನಂತಿಸಿಕೊಳ್ಳಲಾಗಿತ್ತು. ನಂತರ ಎಮ್ಮಾರ್‌ನ ವಕೀಲ ಪವನೇಶ್ ಎಂಬಾತ ದಾಖಲೆ ಪರಿಶೀಲಿಸಿದ್ದಾರೆಂಬ ಮರು ಮಾಹಿತಿಯೂ ಬಾಲಾಜಿ ಬಿಲ್ಡರ್ಸ್‌ಗೆ ತಲುಪಿತ್ತು.

ನಂತರ ನಡೆದ ಇ-ಮೇಲ್ ವ್ಯವಹಾರದಲ್ಲೂ ರೋಹಿತ್ ಮಿಶ್ರಾರೊಂದಿಗೆ ಜಮೀನಿನ ಕುರಿತಾಗಿ ಮಾಹಿತಿ ಹಂಚಿಕೊಳ್ಳಲಾಗಿತ್ತು. ಬಾಲಾಜಿ ಬಿಲ್ಡರ್ಸ್ ಕಡೆಯಿಂದ ಈ ಜಮೀನನ್ನು ಎಮ್ಮಾರ್‌ನವರು ನೋಂದಾಯಿಸಿಕೊಳ್ಳಲು ತಗುಲುವ ವೆಚ್ಚಗಳ ಕುರಿತಾಗಿಯೂ ಮಾಹಿತಿ ರವಾನೆಯಾಗಿತ್ತು. ಆದರದ್ಯಾಕೋ ಎಮ್ಮಾರ್ ಮಂದಿ ಮೇಲ್ಕಂಡ ಜಮೀನುಕೊಳ್ಳಲು ಆಸಕ್ತಿ ತೋರಿಸಲಿಲ್ಲ. ಆದರೆ ಬಾಲಾಜಿ ಬಿಲ್ಡರ್ಸ್‌ನವರು ಅದಾಗಲೇ ಜಮೀನು ಕೊಳ್ಳುವ ಬಗ್ಗೆ ಅಂತಿಮ ಮಾತುಕತೆಯ ಹಂತ ತಲುಪಿದ್ದುದರಿಂದ ಜಮೀನು ಮಾಲೀಕರ ಒತ್ತಡ ಹೆಚ್ಚಾಗತೊಡಗಿತು. ಬೇರೆ ದಾರಿಯಿಲ್ಲದೆ ಎಮ್ಮಾರ್ ಕಂಪೆನಿಗೆ ವರ್ಗಾಯಿಸುವ ಉದ್ದೇಶದಿಂದಲೇ ಈ ಜಮೀನನ್ನು ಬಾಲಾಜಿ ಕಂಪೆನಿ ತನ್ನ ಹೆಸರಿಗೆ ನೋಂದಾಯಿಸಿಕೊಂಡಿತಲ್ಲದೆ ಇದರ ಬಗ್ಗೆ ಎಮ್ಮಾರ್ ಗ್ರೂಪ್‌ಗೂ ಮಾಹಿತಿ ನೀಡಿತ್ತು. ಜೊತೆಗೆ ಅವರ ವಕೀಲರೊಂದಿಗೂ ಮೇಲ್ ಸಂಪರ್ಕ ಹೊಂದಿತ್ತು.

ಈ ಚಿಕ್ಕ ಭೂಮಿಯನ್ನು ಬಾಲಾಜಿ ಬಿಲ್ಡರ್ಸ್ ತನ್ನ ಹೆಸರಿಗೆ ನೋಂದಾಯಿಸಿಕೊಂಡಿದ್ದೇ ಇಷ್ಟೆಲ್ಲಾ ಅಧ್ವಾನಗಳಿಗೆ ಮೂಲವಾಗಿ ಹೋಗಿದೆ. ಇದ್ದಕ್ಕಿದ್ದಂತೆ ಎಮ್ಮಾರ್ ಗ್ರೂಪ್ ಬಾಲಾಜಿ ಬಿಲ್ಡರ್ಸ್ ವಿರುದ್ಧ ಎಫ್.ಐ.ಆರ್. ದಾಖಲಿಸಿದೆ. ಸರಿ, ಬಾಲಾಜಿ ಕಂಪೆನಿ ಕಡೆಯವರು ಯಾವುದೇ ಸಂಪರ್ಕಕ್ಕೆ ಸಿಗದೆ, ಮಾಹಿತಿಯನ್ನು ನೀಡದೆ ಜಮೀನು ನೋಂದಾಯಿಸಿಕೊಂಡಿದ್ದರೆ, ಆ ಸಂಬಂಧ ಎಫ್.ಐ.ಆರ್. ದಾಖಲಿಸಿದ್ದರೆ ಒಪ್ಪಬಹುದಿತ್ತು. ಆದರೆ ಕಾಲಕಾಲಕ್ಕೆ ಸೂಕ್ತ ಮಾಹಿತಿ ನೀಡುತ್ತಿದ್ದರೂ, ತಾನೇ ತಾನಾಗಿ ಖರೀದಿಯಿಂದ ಹಿಂದೆ ಸರಿದ ಎಮ್ಮಾರ್ ಗ್ರೂಪ್ ಇದ್ದಕ್ಕಿದ್ದಂತೆ ಕಾನೂನು ಸಮರ ಸಾರುತ್ತದೆಂದರೆ ಇದರ ಹಿಂದೆ ಸಂಚು ಅಡಗಿದೆ ಎಂಬ ವಿಚಾರ ಸ್ಪಷ್ಟವಾಗುತ್ತದೆ.

ಇಧಾದನಂತರ ನಡೆದ ಕಾನೂನು ಸಂಬಂಧಿ ನಡಾವಳಿಗಳಂತೂ ಗುಮಾನಿಗಳನ್ನು ಇಮ್ಮಡಿಗೊಳಿಸುವಂತಿವೆ. ಈ ಪ್ರಕರಣದ ಸಂಬಂಧ ಪರಸ್ಪರರಲ್ಲಿ ಸಂಧಾನ ಏರ್ಪಡಿಸುವ ಅವಕಾಶಗಳಿದ್ದರೂ ಅದನ್ನು ಕಡೆಗಣಿಸಲಾಯಿತು. ಒಪ್ಪಂದದ ಪ್ರಕಾರ ಪರಸ್ಪರ ಕಂಪೆನಿಗಳ ನಡುವೆ ಏನೇ ತಗಾದೆಗಳಿದ್ದರೂ ಬೆಂಗಳೂರಿನ ನ್ಯಾಯಾಲಯ ವ್ಯಾಪ್ತಿಯಲ್ಲೇ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿತ್ತು. ಆದರೆ ಸೂತ್ರ-ಸಂಬಂಧವಿಲ್ಲದಂತೆ ದೆಹಲಿಯಲ್ಲಿ ಕಾನೂನು ನಡಾವಳಿಗಳು ಜರುಗಿವೆ!

ಇನ್ನೂ ಮುಖ್ಯ ಅಂಶವೆಂದರೆ, ಸಿವಿಲ್ ಪ್ರಕರಣದಡಿಯಲ್ಲಿ ಬರುವ ಈ ತಗಾದೆಯ ಸಂಬಂಧ ಎಮ್ಮಾರ್ ಗ್ರೂಪ್ ಲಾಡ್ ಮೇಲೆ ಕ್ರಿಮಿನಲ್ ನಡಾವಳಿಗಳನ್ನು ಪ್ರಯೋಗಿಸಿಬಿಟ್ಟದೆ. ಇದೆಲ್ಲ ಏನೇ ಇದ್ದರೂ ಬಾಲಾಜಿ ಬಿಲ್ಡರ್ಸ್ ವಿರುದ್ಧವೇ ಪ್ರಕರಣ ದಾಖಲಿಸಬಹುದಿತ್ತಲ್ಲಾ? ಸಂತೋಷ್ ಲಾಡ್ ಮೇಲೆ ಅಸ್ತ್ರ ಪ್ರಯೋಗಿಸಿದ್ದರ ಉದ್ದೇಶಗಳೇನು? ಇವು ಪ್ರಮುಖ ಪ್ರಶ್ನೆಗಳು

ಲಾಡ್ ಸಂಕಟಕ್ಕೆ ಸಿಲುಕುವಂತೆ ಮಾಡಿದ ನಿಗಾ ಸುತ್ತೋಲೆಯ ವಿಚಾರಕ್ಕೆ ಬಂದರೆ ಇಲ್ಲೂ ಕೂಡಾ ವಿನಾಕಾರಣ ಮುಜುಗರಕ್ಕೆ ಸಿಲುಕಿಸುವ ಹುನ್ನಾರಗಳೇ ಎದುರಾಗುತ್ತವೆ. ಯಾಕೆಂದರೆ ಈ ನಿಗಾ ಸುತ್ತೋಲೆಯ ನೀತಿ ನಿಯಮಾವಳಿಗಳೇ ಅಂತಹುದಿವೆ. ಇದರಲ್ಲಿ ದೇಶದೊಳಗೆ ಬರಲು ನಿರ್ಬಂಧಿತ ವ್ಯಕ್ತಿಗಳು, ದೇಶ ಬಿಡಬಾರದೆಂಬ ನಿರ್ಬಂಧ ಹೊತ್ತವರು, ಅಪರಾಧಿತ ವಿದೇಶಿ ವ್ಯಕ್ತಿಗಳು, ಉಗ್ರರು, ವೀಸಾ ನಿಬಂಧನೆ ಉಲ್ಲಂಘಿಸಿದ ವಿದೇಶೀಯರು, ಕ್ರಿಮಿನಲ್, ಸಿವಿಲ್ ಪ್ರಕರಣಗಳಲ್ಲಿ ತಲೆಮರೆಸಿಕೊಂಡವರು-ಮುಂತಾದ ಮಂದಿ ಬರುತ್ತಾರೆ.

ಸಂತೋಷ್ ಲಾಡ್ ಮೇಲ್ಕಂಡ ಯಾವ ನಿಯಮಾವಳಿಯಡಿಯಲ್ಲೂ ಬಂಧಿಸಬಹುದಾದ ವ್ಯಕ್ತಿಯಲ್ಲ. ಯಾಕೆಂದರೆ ಈತ ಹಾಲಿ ಶಾಸಕ; ಸಾರ್ವಜನಿಕ ವ್ಯಕ್ತಿ. ಎಮ್ಮಾರ್ ಗ್ರೂಪ್ ಕಡೆಯಿಂದ ಬಂದ ಪ್ರತೀ ತಗಾದೆಗಳಿಗೂ ಕಾನೂನಿನ ಚೌಕಟ್ಟಲ್ಲೇ ಉತ್ತರಿಸುತ್ತಾ ಬಂದಿದ್ದಲ್ಲದೆ, ಯಾವ ವಿಧಾನದಲ್ಲೂ ತಲೆ ಮರೆಸಿಕೊಂಡಿರಲಿಲ್ಲ.

ಇದೆಲ್ಲದರಿಂದಾಗಿ ಇದೊಂದು ವ್ಯವಸ್ಥಿತ ಸಂಚು ಎಂಬ ವಿಚಾರ ಬಲಗೊಳ್ಳುವಂತಿದೆ. ಆದರೆ ಅದು ಯಾರದ್ದು ಎಂಬ ಪ್ರಶ್ನೆಗೆ ಸದ್ಯಕ್ಕಂತೂ ಉತ್ತರ ಸಿಗುವ ಲಕ್ಷಣಗಳಿಲ್ಲ.

ಈ ಪ್ರಕರಣದ ಕುರಿತಾದ ಪ್ರಶ್ನೆಗಳಿಗೆ ತನಿಖೆ ಹಾಗೂ ಕಾನೂನು ಸಂಬಂಧಿ ನಡಾವಳಿಗಳೇ ಉತ್ತರ ಹೇಳಬೇಕಿದೆ.

• ವರದಿಗಾರ


ಕಳ್ಳ ಶಶಿಧರ ಪ್ರಸಾದ್ ಸೇಫ್!

ದೇಜಗೌ ಜಾತಿ ಲಾಬಿ

ಇನ್ನೇನು ಕಳ್ಳ ಶಶಿಧರ ಪ್ರಸಾದ್ ಜೈಲು ಪಾಲಾಗಿಯೇ ಬಿಟ್ಟ ಎಂದು ಕಳೆದ ತಿಂಗಳು ಅಂದುಕೊಂಡವರೆಲ್ಲ ಬೆಚ್ಚಿಬೀಳುವಂತೆ ಶಶಿಧರ ಪ್ರಸಾದ್ ಹಾಯಾಗಿದ್ದಾನೆ.

2006-07 ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿ.ಸಿ. ಆಗಿದ್ದಾಗ ಈತ ಮಾಡಿದ ಅಕ್ರಮ ನೇಮಕಾತಿಗಳನ್ನು ನಿವೃತ್ತ ನ್ಯಾಯಮೂರ್ತಿ ರಂಗವಿಠಲಾಚಾರ್ ನೇತೃತ್ವದ ಸಮಿತಿ ದಾಖಲೆ ಸಮೇತ ಸಾಬೀತು ಮಾಡಿತ್ತು. ಈ ವರದಿ ಒಪ್ಪಿದ ಸರ್ಕಾರವು ಕಳೆದ ತಿಂಗಳಷ್ಟೇ (9.6.2010) ರಾಜ್ಯಪಾಲರ ಮೂಲಕ ಮೈಸೂರು ವಿ.ವಿ.ಗೆ ಆದೇಶ ರವಾನಿಸಿ, ಶಶಿಧರ ಪ್ರಸಾದ್ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಿತ್ತು.

ಪ್ರಾಧ್ಯಾಪಕ, ಪ್ರವಾಚಕ ಮತ್ತು ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ರಾಜ್ಯ ಸರ್ಕಾರದ ಮೀಸಲಾತಿ ನೀತಿಯನ್ನು, ನೇಮಕಾತಿ ನಿಯಮಗಳನ್ನು ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಬೋಧನಾ ಅನುಭವದ ಮಾನದಂಡಗಳನ್ನು ಶಶಿಧರ ಪ್ರಸಾದ್ ಉಲ್ಲಂಘಿಸಿದ್ದು ಸಾಬೀತಾಗಿದ್ದರಿಂದ ಈತ ಜೈಲುಪಾಲಾಗುವುದು ಖಚಿತವಾಗಿತ್ತು. ಶಶಿಧರ ಪ್ರಸಾದನ ಈ ಅಕ್ರಮಗಳ ಕುರಿತು ಜೂನ್ 30ರ 'ಲಂಕೇಶ್'ನಲ್ಲಿ ವಿವರವಾಗಿ ಬರೆಯಲಾಗಿತ್ತು.




ಅತ್ತ ಮೈಸೂರು ವಿ.ವಿ. ಸಿಂಡಿಕೇಟ್ ಶಶಿಧರ ಪ್ರಸಾದ್ ಮೇಲೆ ಕ್ರಮ ಜರುಗಿಸಲು ತಯಾರಿ ನಡೆಸುತ್ತಿದ್ದಂತೆ, ಇತ್ತ ಅದೇ ರಾಜ್ಯಪಾಲರ ಕಚೇರಿಯಿಂದ ಹೊರಬಿದ್ದ ಆದೇಶವೊಂದು ಮೊದಲಿನ ಆದೇಶವನ್ನು ತಡೆಹಿಡಿದುಬಿಟ್ಟಿತು. ಇದರ ಹಿಂದೆ 'ಕರ್ನಾಟಕ ರತ್ನ' ಕುಖ್ಯಾತಿಯ, 'ಒಂದು ದಿನ'ದ ಅಮರಣ ಉಪವಾಸದ ಶೂರ, ಶಶಿಧರ ಪ್ರಸಾದ್ ತಂದೆ ದೇ. ಜವರೇಗೌಡರ ನೆರಳೇ ಕಾಣುತ್ತಿದೆ. ತನ್ನ ಜಾತಿ ಪ್ರಭಾವದಿಂದ ಹಿರಿಯ ಒಕ್ಕಲಿಗ ರಾಜಕಾರಣಿಗಳ ನಾಯಕರ ಮೂಲಕ ರಾಜ್ಯಪಾಲರ ಮೇಲೆ ಒತ್ತಡ ತಂದ ದೇಜಗೌ ಸದ್ಯ ಮಗನನ್ನು ಪಾರು ಮಾಡುವಲ್ಲಿ ಯಶಸ್ವಿಯಾಗಿಬಿಟ್ಟಿದ್ದಾರೆ.

ಆದರೆ ಇದು ಬಹಳ ದಿನ ನಡೆಯದು. ಏಕೆಂದರೆ ಶಶಿಧರ ಪ್ರಸಾದನ ಅಕ್ರಮಗಳಾಗಲೇ ಸಾಬೀತಾಗಿಹೋಗಿವೆ. ಹೆಚ್ಚೆಂದರೆ ಆತನ ಶಿಕ್ಷೆ ಮುಂದಕ್ಕೆ ಹೋಗಬಹುದಷ್ಟೇ.

ಪ್ರಸಾದ್ ಅಕ್ರಮದ ಸ್ಯಾಂಪಲ್ಲುಗಳು

ಶಶಿಧರ ಪ್ರಸಾದ್‌ನ ಗೋಲ್‌ಮಾಲ್ ನೇಮಕಾತಿಯ ಎರಡು ಸ್ಯಾಂಪಲ್‌ಗಳಲ್ಲಿವೆ: ಫಿಜಿಕ್ಸ್ ಪಿ.ಜಿ. ವಿಭಾಗ ಉಪನ್ಯಾಸಕ ಸಂದರ್ಶನಕ್ಕೆ ಹಾಜರಾಗಿದ್ದ ಡಾ. ಎಚ್. ಸೋಮಶೇಖರಪ್ಪರಿಗೆ ಸಂಶೋಧನೆ ಕೊಡುಗೆಗೆ 09 ಅಂಕ ಬಂದಿದ್ದವು. ಆಯ್ಕೆ ಪ್ರಕ್ರಿಯೆ ನಂತರ 09 ಅಂಕಗಳನ್ನು 04 ಅಂಕಗಳಿಗೆ ಇಳಿಸಿ, ಅವರ ಆಯ್ಕೆಯನ್ನು ಅನರ್ಹಗೊಳಿಸಿ, ಬೇಕಾದವರೊಬ್ಬರಿಗೆ ಹುದ್ದೆ ನೀಡಲಾಗಿತ್ತು!




ಇಂಗ್ಲಿಷ್ ವಿಭಾಗ (ಯುಜಿ) ಉಪನ್ಯಾಸಕ ಹುದ್ದೆಗೆ ಸಂದರ್ಶನದ ಒಟ್ಟು ಅಂಕ ನೀಡುವಾಗ ಉದಾಸೀನತೆಯಿಂದ ಡಾ. ವಿಜಯಕುಮಾರ್ ಬೋರಟ್ಟಿ ಎಂಬುವವರಿಗೆ 25 ಅಂಕ ನೀಡಲಾಗಿತ್ತು. ಇದೇ ಸಂದರ್ಶನಕ್ಕೆ ಹಾಜರಾಗಿದ್ದ ಡಾ. ಅನಿಲ್ ಜೋಸೆಫ್ ಪಿಂಟೋರಿಗೆ 30 ಅಂಕ ಬಂದಿದ್ದು ಸಹಜವಾಗಿ ಇವರು ಆಯ್ಕೆ ಆಗಬೇಕಿತ್ತು. ಆದರೆ ಪಿಂಟೋರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿಟ್ಟು, 25 ಅಂಕ ಪಡೆದ ಬೋರಟ್ಟಿಯವರಿಗೆ ನೀಡಲಾಗಿತ್ತು.

ಇವೆರಡು ಉದಾಹರಣೆ ಮಾತ್ರ. ಹೀಗೆ ನೂರಾರು ಹುದ್ದೆಗಳ ನೇಮಕಾತಿಯಲ್ಲಿ ಗೋಲ್‌ಮಾಲ್ ಮಾಡಿರುವ ಶಶಿಧರ ಪ್ರಸಾದ್‌ಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕಾದುದು ರಾಜ್ಯಪಾಲರ ಕರ್ತವ್ಯ. ಅದು ಸಾಧ್ಯವಾದಷ್ಟು ಬೇಗನೆ ಕಾರ್ಯರೂಪಕ್ಕೆ ಬರಲಿ...


• ವರದಿಗಾರ

ಉತ್ತರ ಕನ್ನಡ: ಔಟಾಗದಿರಲು ಅಸ್ನೋಟಿಕರ್ ಅರಚಾಟ!



'ನನ್ ಕೈ ಕಟ್ಟಹಾಕಾರೆ.... ಕ್ಷೇತ್ರದ ಕೆಲ್ಸಾ ಮಾಡೂಕೇ ಕೊಡೂದಿಲ್ಲಾ.. ಡಿಸಿ-ಎಸ್ಪಿ ಒಂದ್ ಮಾತ್ ಕೇಳೊದಿಲ್ಲಾ... ಬಂದ್ರ ಮಂತ್ರಿ ಪಾಲೇಮಾರ್ ಇವ್ನಲೋ... ಅಂವ ಸುಮ್ನೆ ಟೈಮ್ ವೇಸ್ಟ್ ಮಾಡ್ತೀವಾ... ಬೇಲಿಕೇರಿ ಬಂದ್ರ ಭಾನ್ಗಡಿ ಮುಖ್ಯಮಂತ್ರಿ ಯಡ್ಯೂರಪ್ಪಗೂ..... ಬಂದ್ರ ಮಂತ್ರಿಗೂ ಎಷ್ಟ್ ಸಲ ಹೇಳ್ಳೂ ಕೇಳೊದೇ ಇಲ್ಲ... ಕ್ಯಾರೇ ಮಾಡೂದಿಲ್ಲಾ... ನಾನ್ ಎಂಥ ಮಾಡ್ಲಿ.... ಎಂಥ ಮಾಡುಕೂ ಆಗೂದಿಲ್ಲಾ ನನ್ನತ್ರಾ.... ಉಸ್ತುವಾರಿ ಮಂತ್ರಿ ಕಾಗೇರಿ ಎನ್ ಹೇಳಿದ್ರೂ ಕೇರ್ ಮಾಡೂದಿಲ್ಲಾ...."

ಹೀಗೆ ಹೇತ್ಲಾಂಡಿತನ ಸ್ವಯಂ ಸಾಬೀತುಪಡಿಸಿಕೊಳ್ಳುತ್ತ ಬಾಯ್ಬಾಯಿ ಬಡಿದುಕೊಂಡೋರು ಯಾರು ಗೊತ್ತೇ? ವಿರೋಧ ಪಕ್ಷದ ಪುಢಾರಿಗಳಂತೂ ಅಲ್ಲ! ಸಾಕ್ಷಾತ್ ಸಿಎಂ ಸಾಹೇಬರು ಮತ್ತವರ ಮಂತ್ರಿ-ಅಧಿಕಾರಿಗಳ ಮೇಲೆ ನೇರಾನೇರ ಆರೋಪ ಮಾಡುತ್ತ ತಿರುಗಿ ಬಿದ್ದಿರುವಾತ ಕಾರವಾರದ ಬಿಜೆಪಿ ಶಾಸಕ ಕಂ ಮೀನು ಮಂತ್ರಿ ಆನಂದ್ ಅಸ್ನೋ ಟಿಕರ್!


ಕೃಷ್ಣಪಾಲೇಮಾರ್

ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸರ್ಕಾರಿ ಪ್ರಣೀತ ಬೇಲೆಕೇರಿ ಬಂದರಿನ ಭಾನ್ಗಡಿಗೆ ಬೇಸತ್ತು ರಾಜೀನಾಮೆ ಬಿಸಾಕುವುದಕ್ಕೆ ಕೇವಲ ಒಂದೆರಡು ದಿನ ಮೊದಲಷ್ಟೇ ಮೊದ್ಮಣಿ ಆನಂದ್ ಅಸ್ನೋಟಿಕರ್ ಪತ್ರಿಕಾಗೋಷ್ಠಿ ಕರೆದು ಮುಖ್ಯಮಂತ್ರಿಗೇ ಮಹಾಮಂಗ ಳಾರತಿ ಎತ್ತಿದ್ದರು!! ಅಸ್ನೋಟಿಕರ್ ಆಲಾಪಕ್ಕೆ ಬೇಲೆಕೇರಿ ಬಂದರಿನ ಅದಿರು ಅವ್ಯವಹಾರವೇ ನೆಪವಾಗಿತ್ತು. ಆದರೆ ಅಸ್ನೋಟಿಕರ್ ಅದೆಷ್ಟೇ ಅರಚಾಡಿದರೂ ಬೇಲೆಕೇರಿ ಬಂದರಿನ ಅಸಲಿ ವ್ಯವಹಾರ ಅನಾವರಣ ಮಾಡಲಿಕ್ಕೆ ಆಗಲೇ ಇಲ್ಲ. ಯಾವಾಗ ಲೋಕಾಯುಕ್ತರೇ ಬಾಯಿಬಿಟ್ಟರೋ ಆವಾಗ, ಬೇಲೆಕೇರಿ ಬಂದರಿನ ದೋನಂಬರ್ ದಂಧೆ-ದುರಾಚಾರವೆಲ್ಲ ಲೋಕಪ್ರಸಿದ್ಧವಾಗಿ ಅಲ್ಲೋಲಕಲ್ಲೋಲವೇ ಆಯಿತ್ತು.


ಅದಿರಲಿ; ಅದಿರು ಹಫ್ತಾ ಫಿಕ್ಸ್ ಮಾಡಿಕೊಂಡು ಸುಮ್ಮನಿದ್ದ ಈ ಅಬ್ಬೇಪಾರಿ ಅಸ್ನೋಟಿಕರ್ ಇದ್ದಕ್ಕಿದ್ದಂತೆ ಸಿಎಂ ಮತ್ತವರ ಮಂತ್ರಿ ಅಧಿಕಾರಿಗಳ ವಿರುದ್ಧವೇ ಗುಟುರು ಹಾಕಿದ್ದಾದರೂ ಏಕಿರಬಹುದು. ತಾನು ಭಾಗಿಯಾಗಿರುವ ಸರ್ಕಾರವೇ ಸೋಗಲಾಡಿಯೆಂದು ಬೊಬ್ಬಿರಿಯುವ ದರ್ದು ಮಂತ್ರಿ ಅಸ್ನೋಟಿಕರ್‌ಗೆ ಏನಿತ್ತು? ಅಕ್ರಮ ಅದಿರು ದಂಧೆ ಭರಾಟೆಗೆ ತತ್ತರಿಸಿದ ಕ್ಷೇತ್ರ ವಾಸಿಗಳ ಕ್ಷೇಮಕ್ಕಾಗಂತೂ ಈ ಕೂಗಾಟ ಖಂಡಿತ ಅಲ್ಲ. ಇದು ಶುದ್ಧ "ಪಾಲಿಟಿಕ್ಸ್". ಬೇಲೆಕೇರಿಯಲ್ಲಿ ಕಳ್ಳ ಅದಿರು ಬಿಸಿನೆಸ್ ಬಿರುಸಾಗಿ ನಡೆದರೆ ಜಿದ್ದಾಜಿದ್ದಿನ ಎದುರಾಳಿ ಸತೀಶ್ ಸೈಲ್ ಎಂಬ ಕಾಂಗ್ರೆಸ್ಸಿಗ ಬ್ರಹ್ಮರಾಕ್ಷಸನಾಗಿ ತನ್ನ ನುಂಗಿ ಹಾಕುತ್ತಾನೆಂಬ ಭಯ ಅಸ್ನೋಟಿಕರ್ ಆರ್ಭಟದ ಹಿಂದಡಗಿದೆ! ಕ್ಷೇತ್ರದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ತನ್ನದೇ ಸರ್ಕಾರದ ಮೇಲೆ ಮುರಕೊಂಡು ಬೀಳುವ ಕರ್ಮ ಅಸ್ನೋಟಿಕರ್‌ನದಾಗಿದೆ, ಪಾಪ!!

ಗಣಿ ಗೂಂಡಾ ರೆಡ್ಡಿಗಳು ಯಡ್ಡಿ ವಿರುದ್ಧ ಬಂಡೆದ್ದಾಗ ಬಿ-ಕಂಪನಿಯ ಕಾಲಾಳಾಗಿ ಮಿಂಚಿದ್ದ ಅಸ್ನೋಟಿಕರ್ ಈಗ್ಯಾಕೋ ಬಣ್ಣ ಕಳಕೊಂಡು ಮಾಸುತ್ತಿದ್ದಾನೆ! ಗೋವಾಕ್ಕೆ ಬಂದಿದ್ದ ಬಂಡುಕೋರ ಶಾಸಕರ ಒಂದು ತಂಡಕ್ಕೆ ಉಸ್ತುವಾರಿಯಾಗಿ ಸಿಎಂ ನಿದ್ದೆಗೆಡಿಸಿದ್ದ ಅಸ್ನೋಟಿರ್ ಇವತ್ತು ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದಾನೆ. ರೆಡ್ಡಿಗಳಿಂದ ದೀಕ್ಷೆ ಪಡೆದು ಆಪರೇಷನ್ ಕಮಲದ ಮೂಲಕ ಬಿಜೆಪಿ ಸೇರಿದ್ದ ಈ "ಸಿಜರೀನ್ ಸಚಿವ"ನ ಕೈ ಬಿ- ಕಂಪನಿ ಬಾಸ್‌ಗಳೂ ಬಿಟ್ಟಿದ್ದಾರೆ. ಇತ್ತ ಉತ್ತರ ಕನ್ನಡದಲ್ಲಿ ಉಸ್ತುವಾರಿ ಮಂತ್ರಿ-ಪಕ್ಕಾ ಚೆಡ್ಡಿ ಮಾಣಿ ಕಾಗೇರಿ ಸಮಯ ಸಿಕ್ಕಾಗೆಲ್ಲ ಅಸ್ನೋಟಿಕರ್‌ನ ಹೆಡೆಮುರಿ ಕಟ್ಟಿ ಹಣಿಯುತ್ತಿದ್ದಾರೆ. ಕೇಶವ ಕೃಪದಲ್ಲಿ ಪವರ್‌ಫುಲ್ ಆಗಿರುವ ಕಾಗೇರಿ ಮಾಣಿ ಹೇಳಿದ್ದೆಲ್ಲ ಕೇಳುವ ಸಿಎಂ ಯಡ್ಡಿಗೆ ಅಸ್ನೋಟಿಕರ್‌ನ ಕಂಡರೆ ಆಗುತ್ತಿಲ್ಲ.

ಅಸ್ನೋಟಿಕರ್‌ನ ಕೇಡುಗಾಲ ಶುರುವಾಗಿದ್ದೇ ಯಡ್ಡಿ ಸರ್ಕಾರದ ಸೂತ್ರಧಾರರಾದ ರೆಡ್ಡೀಸ್ ಆತನ ಒದ್ದು ಓಡಿಸಿದ ನಂತರ. ರೆಡ್ಡಿಗಳು ಈತನ ಗಾಡ್‌ಫಾದರ್ ಎಂಬ ಸೀನ್ ಸೃಷ್ಟಿಯಾಗಿದ್ದರಿಂದ ಈ ಅಸ್ನೋಟಿಕರ್ ಬಿಜೆಪಿಯಲ್ಲಿ ಕಾಗೇರಿಗಿಂತ ಬಲಾಢ್ಯನೆಂಬ ಭ್ರಮೆ ಮೂಡಿತ್ತು. ಆದರೆ ಹಣಕಾಸಿನ ವ್ಯವಹಾರವೊಂದರಲ್ಲಿ ಗೋಲ್‌ಮಾಲ್ ಅಸ್ನೋಟಿಕರ್ ರೆಡ್ಡಿಗಳ ವಿಶ್ವಾಸ ಕಳೆದುಕೊಂಡುಬಿಟ್ಟ! ಗೋವಾಕ್ಕೆ ರವಾನಿಸಲ್ಪಟ್ಟಿದ್ದ ಭಿನ್ನಮತೀಯ ಶಾಸಕರ ಗ್ಯಾಂಗಿನ ಮೇಜುವಾನಿಗೆಂದು ರೆಡ್ಡಿಗಳು ಆನಂದ್ ಅಸ್ನೋಟಿಕರ್‌ನ ಕೈಲಿ ಒಂದಿಷ್ಟು ಲಕ್ಷ ರೂ. ಕೊಟ್ಟಿದ್ದರಂತೆ. ಯಡ್ಡಿ ವಿರುದ್ಧದ ದಂಗೆಯ ಆ ದಿನಗಳಲ್ಲಿ ಅಸ್ನೋಟಿಕರ್ ಬರೋಬ್ಬರಿ 30 ಲಕ್ಷದ ಲೆಕ್ಕವೇ ಕೊಡದೇ "ಅಪರಾತಪರಾ" ಮಾಡಿದ್ದನಂತೆ. ಇದು ಬಿ-ಕಂಪನಿ ಕಣ್ಣು ಕೆಂಪಾಗಿಸಿತಂತೆ. ರೆಡ್ಡಿಗಳ ಅವಕೃಪೆಗೆ ತುತ್ತಾಗಿದ್ದೇ ತಡ, ಹುಂಬ ಅಸ್ನೋಟಿಕರ್ ಒಂಥರಾ ಅಂತರ್ ಪಿಶಾಚಿಯಂತಾಗಿ ಹೋದ!

ಇಂಥದೊಂದು ವೈಮನಸ್ಸಿನ ಸಂದರ್ಭಕ್ಕಾಗಿ ಕಾಯುತ್ತಿದ್ದ ಅಸ್ನೋಟಿಕರ್‌ನ ಕ್ಷೇತ್ರ ಶತ್ರು ಸತೀಶ್ ಸೈಲ್ ಗೋವಾದ ಕಾಂಟಿನೆಂಟಲ್ ರೆಸಾರ್ಟ್ ರಾದ್ಧಾಂತದ ನಂತರ ರೆಡ್ಡಿ ಬಳಗಕ್ಕೆ ಇನ್ನಷ್ಟು ಆಪ್ತರಾಗಿ ಹೋದರು. ಅಸ್ನೋಟಿಕರ್ ಬಿಜೆಪಿ ಸೇರುವುದಕ್ಕಿಂತ ಮೊದಲೇ ಸತೀಶ್ ಸೈಲ್ ರೆಡ್ಡಿಗಳ ಅದಿರು ಮಾಫಿಯಾದಲ್ಲಿದ್ದಾತ. ಅಸ್ನೋಟಿಕರ್ ರೆಡ್ಡಿಗಳ ಶಿಷ್ಯತ್ವ ಪಡೆದ ನಂತರ ಸೈಲ್ ಒಂಟಿಯಾಗಿ ಕಡೆಗಣಿಸಲ್ಪಟ್ಟಿದ್ದ. ಅಸ್ನೋಟಿಕರ್ "ಗುರು"ಗಳ ಮೂವತ್ತು ಲಕ್ಷ ಮಂಗಮಾಯ ಮಾಡಿದ ನಂತರ ಸೈಲ್-ರೆಡ್ಡಿ ಸ್ನೇಹ-ಸಂಬಂಧ ಗಾಢವಾಗಿ ಹೋಯ್ತು! ಮಂತ್ರಿ ಅಸ್ನೋಟಿಕರ್ ಗತಿ-ಗೋತ್ರವಿಲ್ಲದ ಅಬ್ಬೇಪಾರಿಯಂತಾಗಿ ಹೋದ!!

ಯಾವಾಗ ರೆಡ್ಡಿಗಳು ತನ್ನ ಪರಮ ವೈರಿ ಸೈಲ್‌ನ ಪರವೇ ಕೈಹಾಕಿಕೊಂಡು ಕಾದಲು ಆರಂಭಿಸಿದರೋ ಆಗ ಅನಿವಾರ್ಯವಾಗಿ ಅಸ್ನೋಟಿಕರ್ ಜಿಲ್ಲೆಯಲ್ಲಿ ಅದರಲ್ಲೂ ಕಾರವಾರ-ಅಂಕೋಲಾದಲ್ಲಿ ನಡೆಯುವ ಅದಿರು ಉದ್ಯಮವನ್ನೇ ಟಾರ್ಗೆಟ್ ಮಾಡಿಕೊಂಡು ಕೂಗಾಡಹತ್ತಿದ್ದರು. ಅಕ್ರಮ ಅದಿರು ಲಾರಿಗಳ ಆರ್ಭಟದಿಂದ ತನ್ನ ಕ್ಷೇತ್ರದಲ್ಲಿ ಸಾವು-ನೋವಾಗುತ್ತಿದೆ, ಬೇಲೆಕೇರಿಯ ಪರಿಸರ ನಾಶವಾಗಿದೆ, ಸರ್ಕಾರಿ ಜಾಗ ಅತಿಕ್ರಮಿಸಿ ರಫ್ತುದಾರರು ಅಕ್ರಮ ಬಂದರು ನಿರ್ಮಿಸಿಕೊಂಡಿದ್ದಾರೆಂದೆಲ್ಲಾ ಒಂದೇ ಸಮನೆ ಅಸ್ನೋಟಿಕರ್ ಅಲವತ್ತುಕೊಳ್ಳತೊಡಗಿದ. ಈ ಅಕ್ರಮ ತಡೆಯಿರಿ ಎಂದು ಡಿಸಿ, ಎಸ್ಪಿ, ಜಿಲ್ಲಾ ಮಂತ್ರಿ ಕಾಗೇರಿ, ಬಂದರು ಮಂತ್ರಿ ಪಾಲೇಮಾರ್ ಕೊನೆಗೆ ಸಾಕ್ಷಾತ್ ಸಿಎಂ ತನಕವೂ ಅಸ್ನೋಟಿಕರ್ ಕಂಪ್ಲೇಂಟು ತೆಗೆದುಕೊಂಡು ಹೋದ. ಅದಿರು ವ್ಯವಹಾರಕ್ಕೆ ಕಡಿವಾಣ ಬಿದ್ದರೆ ತಂತಾನೆ ತನ್ನ ಆಜನ್ಮ ಶತ್ರು ಸೈಲ್‌ನ ಸೊಕ್ಕು ಕಮ್ಮಿಯಾಗುತ್ತದೆಂಬ ಲೆಕ್ಕಾಚಾರ ಅಸ್ನೋಟಿಕರ್‌ನ "ಜನಪರ ನಿಲುವಿನ" ಹಿಂದಡಗಿತ್ತು.


ಸಂತೋಷ್ ಹೆಗ್ಡೆ

ಆದರೆ "ಡಿಫ್ಯಾಕ್ಟೋ" ಸಿಎಂ ಜನಾರ್ದನ್ ರೆಡ್ಡಿಯೇ ಸೈಲ್‌ನ ಬೆನ್ನಿಗಿದ್ದರಿಂದ ಅಸ್ನೋಟಿಕರ್‌ನ "ಆಟ" ನಡೆಯಲಿಲ್ಲ. ಯಾವಾಗ ಬಂದರು-ಪರಿಸರ ಮಂತ್ರಿ ಪಾಲೇಮಾರ್ ಖುದ್ದು ಬೇಲೆಕೇರಿಗೆ ಬಂದು ಅದಿರು ಅವ್ಯವಹಾರದಾರರ ಪರವಾಗೇ ಮಾತಾಡಿ ಹೋದರೋ ಆಗ ಅಸ್ನೋಟಿಕರ್ ಕನಲಿಹೋದರು! ಇನ್ನು ಬಾಯಿ ಬಂದ್ ಮಾಡಿಕೊಂಡು ಕೂತರೆ ಕ್ಷೇತ್ರದಲ್ಲಿ ಕಿಮ್ಮತ್ತೇ ಇರದೆಂಬ ಚಿಂತೆಗೆ ಬಿದ್ದಿದ್ದ ಅಸ್ನೋಟಿಕರ್ ಬಂದರು ಮಂತ್ರಿ ಅತ್ತ ಮಂಗಳೂರು ತಲುಪುತ್ತಿದ್ದಂತೆಯೇ ಇತ್ತ ಕಾರವಾರದಲ್ಲಿ ತನ್ನದೇ ಸರ್ಕಾರದ ಮೇಲೆ ದಾಳಿ ಮಾಡಿಮುಗಿಸಿದ; ಸರ್ಕಾರದ ಯಜಮಾನ್ ಯಡ್ಡಿಯ ಮಾನ ಹರಾಜಾಕಿ ಬಿಟ್ಟ! ಯಡ್ಡಿ ಕಾಗೇರಿ, ಪಾಲೇಮಾರ್, ಡಿಸಿ-ಎಸ್ಪಿಗಳ ಅಸಹಕಾರದಿಂದ ತನ್ನ ಕಾರವಾರ-ಅಂಕೋಲಾ ತಾಲ್ಲೂಕುಗಳ ಲಾ ಅಂಡ್ ಆರ್ಡರೇ ಹಳ್ಳ ಹಿಡಿದು ಹೋಗಿದೆ ಎಂದು ಗಂಭೀರ ಆಪಾದನೆ ಮಾಡಿ ಮೊಕ್ಕೀಕ್ ಆಗಿಬಿಟ್ಟ ಅಸ್ನೋಟಿಕರ್!!

ಅಲ್ಲಿಗೆ ಅಧಿಕಪ್ರಸಂಗಿ ಆನಂದ್ ಅಸ್ನೋಟಿಕರ್ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡಂತಾಗಿತ್ತು! ಆರಂಭದಿಂದಲೂ ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ಈ ತರಲೆ ಪೋರನನ್ನು ಅಸ್ಪೃಶ್ಯನಂತೇ ಪರಿಗಣಿಸಲಾಗಿತ್ತು. ಈ ಹುಂಬನೂ ತನಗೆ ಬಿಜೆಪಿಯ ಹಂಗಿಲ್ಲ ಎಂಬ ಧಾಟಿಯಲ್ಲೇ ಸಮಾನಾಂತರ ಬಿಜೆಪಿ ಕಟ್ಟಿಕೊಂಡಿದ್ದ. ಆರೆಸ್ಸೆಸ್ ಹಿರೇಮಣಿಗಳಿಗಂತೂ ತಮ್ಮ ಕಣ್ಮಣಿ ಕಾಗೇರಿಗೆದುರಾಗಿ ಶೂದ್ರ ಅಸ್ನೋಟಿಕರ್ ಬೆಳೆಯುವುದು ಅಪಥ್ಯವೇ ಆಗಿತ್ತು. ದೇವ ಪಿತೃಗಳೆಂದು ಭಾವಿಸಿದ್ದ ರೆಡ್ಡಿಗಳೂ ದೂರ ಮಾಡಿದ್ದರು. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲೇ ಅವಾಂತರಕಾರಿ ಅಸ್ನೋಟಿಕರ್ ಪಾರ್ಟಿಯ ಗುರು-ಹಿರಿಯರನ್ನೆಲ್ಲ ಸಾಲಾಗಿ ನಿಲ್ಲಿಸಿ ಅವಮಾನಿಸಿಬಿಟ್ಟಿದ್ದ. ಇಡೀ ಬಿಜೆಪಿ ಸರ್ಕಾರವೇ ಅದಿರು ಅವ್ಯವಹಾರ-ಅಕ್ರಮಗಳ ಪರವಾಗಿದೆ ಎಂದು ಸ್ವತಃ ಮಂತ್ರಿಯಾಗಿದ್ದುಕೊಂಡೇ ನಿರ್ದಾಕ್ಷಿಣ್ಯವಾಗಿ ಮೂದಲಿಸಿದ್ದ.

ಅಸ್ನೋಟಿಕರ್‌ನ ಮಟ್ಟಹಾಕಲು ಹವಣಿಸುತ್ತಿದ್ದ ಕಾಗೇರಿಗೆ ಆತನ ಪತ್ರಿಕಾಗೋಷ್ಠಿಯ ದಾಳಿಯೇ ಸಾಕಾಯ್ತು. ಚಿ[illegible] ಚತುರರಿಗೆಲ್ಲ ಅಸ್ನೋಟಿಕರ್‌ನ ಕತೆ ಹೇಳಿದರು; ಸಿಎಂ ಯಡ್ಡಿಗೂ ಚಾಡಿ ಹೇಳಿದರು. ಆರೆಸೆಸ್ ವಲಯದಲ್ಲಿ ಅಸ್ನೋಟಿಕರ್‌ನನ್ನು ಮನೆಗೆ ಕಳಿಸುವ ನಿರ್ಧಾರವೂ ಆಗಿ ಹೋಯ್ತು. ಸಚಿವ ಸಂಪುಟ ರಿಶಫಲ್‌ನಲ್ಲಿ ಅಸ್ನೋಟಿಕರ್‌ನ ಔಟ್ ಮಾಡುವಂತೆ ಸಿಎಂಗೆ ಸಂಘಪರಿವಾರದಿಂದ ಆರ್ಡರು ಆಯ್ತು. ಆಗ ಬೆಚ್ಚಿಬಿದ್ದ ಪೆದ್ದು ಅಸ್ನೋಟಿಕರ್. ಇರುವ ಗೂಟದ ಕಾರೂ ಹೋದರೆ ಕ್ಷೇತ್ರದಲ್ಲಿ ತನ್ನ ಮೂ[illegible] ನೋಡುವವರು ಯಾರು ಇರುವುದಿಲ್ಲ ಎಂಬುದವನಿಗೆ ಖಾತ್ರಿಯಾಗಿತ್ತು. ಹೇಗಾದರೂ ಮಾಡಿ ಮಂತ್ರಿಗಿರಿ ಉಳಿಸಿಕೊಳ್ಳಬೇಕೆಂದು ಆತ ಥರಥರದ ಲೇವಾದೇವಿ ತಂತ್ರ ಶುರು ಹಚ್ಚಿಕೊಂಡ!

ಆಗಾತನಿಗೆ ಆಶಾಕಿರಣವಾಗಿ ಗೋಚರಿಸಿದ್ದೇ ಯಡ್ಡಿ ಮಗ ಡೀಲ್‌ಮಾಸ್ಟರ್ ರಾಘವೇಂದ್ರ! ಮಂತ್ರಿಗಿರಿ ಉಳಿ[illegible] ಕೊಡುವಂತೆ ರಾಘಣ್ಣನಿಗೆ ಅಸ್ನೋಟಿಕರ್ ದುಂಬಾಲು ಬಿದ್ದ. ಆಕರ್ಷಕ ಆಫರ್ ಮುಂದಿಟ್ಟ; ಅಂತಿಮವಾ[illegible] ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ಬರೋಬ್ಬರಿ ಐದು ಕೋಟಿಯ ಭರ್ಜರಿ ಬಂಗಲೆ ಒಂದನ್ನು ಖರೀದಿಸಿ ಈ ಬಂಗಲೆ ರಾಘಣ್ಣನಿಗೆ ಕಾಣಿಕೆಯಾಗಿ ಅಸ್ನೋಟಿಕರ್ ಕೊಟ್ಟಿದ್ದಾನೆಂಬ ಗುಲ್ಲೀಗ ಬೆಂಗಳೂರು ಮತ್ತು ಉತ್ತರ ಕನ್ನಡ ಬಿಜೆಪಿ ಬಿಡಾರಗಳಲ್ಲಿ ತೇಲಾಡುತ್ತಿದೆ!

ಅಲ್ಲಿಗೆ ಅಸ್ನೋಟಿಕರ್ ಬದುಕಿದೆಯಾ ಬಡ ಜೀವವೇ ಎಂದು ನಿಟ್ಟುಸಿರು ಬಿಡುತ್ತಿದ್ದಾರೆ. ಇದೇ ಹೊತ್ತಿಗೆ ಆತನ ಪ್ರತಿಸ್ಪರ್ಧಿ-ರೆಡ್ಡಿಗಳ ಸನ್ಮಿತ್ರ ಸತೀಶ್ ಸೈಲ್‌ನ ಬಂದರು ಲೀಸ್, ಎಕ್ಸ್‌ಪೋರ್ಟ್ ಲೈಸೆನ್ಸ್ ಎರಡೂ ರದ್ದಾಗಿದೆ. ಅದಿರು ರಫ್ತು ಪ್ರಕರಣದಲ್ಲಿ ಸೈಲ್‌ಗೆ ನಿರೀಕ್ಷಣಾ ಜಾಮೀನೂ ಸಿಕ್ಕಿಲ್ಲ. ಆತನ ಬಂಧನದ ಸಾಧ್ಯತೆ ದಿನೇದಿನೇ ಹೆಚ್ಚಾಗುತ್ತಿದೆ. ಜೊತೆಗೆ ಅಸ್ನೋಟಿಕರ್‌ನ ಕೆಂಗಣ್ಣಿಗೆ ಗುರಿಯಾಗಿದ್ದ ಇನ್ನೆರಡು ಅದಿರು ರಫ್ತು ಕಂಪನಿಗಳಾದ ಸಾಲಗಾಂವ್ಕರ್ ಮತ್ತು ಅದಾನಿಯ ಲೀಸ್, ಲೈಸೆನ್ಸ್ ಕ್ಯಾನ್ಸಲ್ ಆಗಿದೆ. ಹೀಗಾಗಿ ಅಸ್ನೋಟಿಕರ್‌ನ 'ರಂಗೀಲ' ಸ್ಟೈಲಿಗೆ ಮತ್ತಷ್ಟು ರಂಗೇರಿದೆ; ಆತನ ಮೋಜು-ಮ[illegible] ಅವಾಂತರಕ್ಕೆ ಹೊಸ ಖದರು ಬಂದಿದೆ.

ಈ ದೌಲು ಎಷ್ಟು ದಿನ? ಹಾಗಂತ ಕಾರವಾರಿಗರು ಮಾತಾಡಿಕೊಳ್ಳುತ್ತಿದ್ದಾರೆ. ಡಾಲರ್ಸ್ ಕಾಲನಿ ಬಂಗಲೆ ಗಿ[illegible] ಆರೆಸ್ಸೆಸ್ ಕೆಂಗಣ್ಣಿಗೆ ತುತ್ತಾಗಿರು ಅಸ್ನೋಟಿಕರ್ ಬಚಾಯಿಸಬಲ್ಲದೇ? ಆರೆಸ್ಸೆಸ್ ರಿಂಗ್ ಮಾಸ್ಟರ್‌ಗಳು ಶಕ್ತಿಶಾಲಿಯೋ? ಬಂಗಲೆ ಪಡೆದ ಯುವ ರಾ[illegible] ಶಕ್ತಿಶಾಲಿಯೋ?

ಇಂಥದೊಂದು ಕುತೂಹಲಕರ ಜಿಜ್ಞಾಸೆ ಉತ್ತರ ಕನ್ನಡ ಬಿಜೆಪಿಯಲ್ಲಿ ನಡೆದಿದೆ.

• ನಹು

ಪಕ್ಕಾ ಆಷಾಢಭೂತಿ!

ಕಾರವಾರ-ಅಂಕೋಲಾದ ಪ್ರಖ್ಯಾತೀತ ಪಾಳೇಗಾರ ತಾನೆಂಬ ಅಹಂಕಾರದಲ್ಲಿ ಅಂಡಲೆವ ಮೀನು ಮಂತ್ರಿ ಆನಂದ್ ಅಸ್ನೋಟಿಕರ್ ಶುದ್ಧ ಆಷಾಢಭೂತಿ. ತನಗೆ ಲಾಭವಿಲ್ಲದ ಅಕ್ರಮ ಅದಿರು ಲಾರಿ ಕಾರವಾರ ಮತ್ತು ಬೇಲೇಕೇರಿ ಬಂದರಿಗೆ ಬರುವುದೇ ಬೇಡವೆಂಬ ಹಠ ಆನಂದನದು; ಆದರೆ ಅಕ್ರಮ ಅದಿರು ಲಾರಿಗಳಷ್ಟೇ ಅನಾಹುತಕಾರಿ-ಅಕ್ರಮ ಗ್ರಾನೈಟ್ ಲಾರಿಗಳಿಂದ ಆತನಿಗೆ ಭರ್ಜರಿ ಫಾಯ್ದೆ ಇರುವುದರಿಂದ ಅವು ಬಂದರಿಗೆ ಧಾರಾಳವಾಗಿ ಬರಲಿ ಎನ್ನುತ್ತಿದ್ದಾನೆ. ಈ ದಗಲುಬಾಜಿ ಧೋರಣೆಯವ್ನಾತ ಯಾವ ಮಾನ-ಮರ್ಯಾದೆ-ಮುಲಾಜೂ ಇಲ್ಲದೆ ಬಹಿರಂಗವಾಗೇ ಮಂಡಿಸುತ್ತಿದ್ದಾನೆ!

ಮಳೆಗಾಲದಲ್ಲಿ ಯಮ ಭಾರದ ಅದಿರು ಲಾರಿ ಕಾರವಾರ-ಅಂಕೋಲೆಗೆ ಬಂದು-ಹೋದರೆ ಅಸ್ನೋಟಿಕರ್‌ನ ಕ್ಷೇತ್ರದ ರಸ್ತೆಗಳೆಲ್ಲ ಚಿಂದಿಯೆದ್ದು ಹೋಗುತ್ತವಂತೆ. ಆದರೆ ಸಾವಿರಾರು ಟನ್ ಭಾರದ ಗ್ರಾನೈಟ್ ಲಾರಿಗಳನ್ನು ನಿರ್ಬಂಧಿಸಬಾರದಂತೆ. ಹಾಗೆ ಗ್ರಾನೈಟ್ ಲಾರಿ ನಿಷೇಧಿಸಿದರೆ ರಾಜ್ಯದ ಏಕೈಕ-ಸರ್ಕಾರಿ ಬಂದರಾದ ಕಾರವಾರ ಪೋರ್ಟ್‌ಗೆ ಲುಕ್ಸಾನ್ ಆಗುತ್ತದೆಂಬ "ಕಳಕಳಿ" ಅಸ್ನೋಟಿಕರನದು.

ಈ "ಕಳಕಳಿ" ಹಿಂದೊಂದು ಹಿಕಮತ್ತು ಅಡಗಿದೆ. ಆನಂದನ ಅಪ್ಪ ದಿವಂಗತ ಎಮ್ಮೆಲ್ಲೆ ವಸಂತ ಅಸ್ನೋಟಿಕರ್ ಕಾಲದಿಂದಲೂ ಕಾರವಾರ ಬಂದರು ಅಸ್ನೋಟಿಕರ್ ವಂಶಸ್ಥರ ಪಾರುಪತ್ಯಕ್ಕೆ ಒಳಪಟ್ಟಿದೆ. ಆಗೆಲ್ಲ ವಸಂತ್‌ಗೆ ಪ್ರತಿ ತಿಂಗಳು ಹತ್ತಾರು ಲಕ್ಷ ರೂ. ಅಕ್ರಮ ಆಮದಾನಿ ಬಂದರು ಕಾರ್ಮಿಕ ಸಂಘ, ಸೊಸೈಟಿ ಹೆಸರಲ್ಲಿ ಬಂದುಬೀಳುತ್ತಿತ್ತು, ಈ ಪಾಪದ ಹಣ ಹಂಚಿಕೆ ಜಗಳದಲ್ಲೇ ವಸಂತ್ ಅಸ್ನೋಟಿಕರ್ ಮತ್ತು ಭೂಗತ ಪಾತಕಿ ದಿಲೀಪ್ ನಾಯ್ಕ ಕಟ್ಯಾಡಿ ವಸಂತ್ ಸತ್ತುಹೋದರು.

ಈಗ ಕಾರವಾರ ಮಾಫಿಯಾದ ದೊರೆಯಾಗಿ ಮಂತ್ರಿ ಆನಂದ್ ಅಸ್ನೋಟಿಕರ್ ಅವತರಿಸಿದ್ದಾನೆ. ಅಕ್ರಮ ಅದಿರು ರಫ್ತುದಾರರು-ಗ್ರಾನೈಟ್ ರಫ್ತುದಾರರು ಆನಂದನಿಗೆ ಪ್ರತಿ ಟನ್‌ಗೆ ಇಂತಿಷ್ಟೆಂದು ಪ್ರತಿ ತಿಂಗಳು ಮಾಮೂಲಿ ಕೊಡುತ್ತಿದ್ದಾರೆ. ಅತ್ತ ಬಡ ಕಾರ್ಮಿಕರನ್ನೂ ಶೋಷಿಸುತ್ತ ಇತ್ತ ಸರಕು ರಫ್ತುದಾರರನ್ನೂ ಸುಲಿಯುತ್ತ ಅಸ್ನೋಟಿಕರ್ ಕೋಟಿಗಳ ಲೆಕ್ಕದಲ್ಲಿ ಹಫ್ತಾ ತಿಂಗತಿಂಗಳು ಎಣಿಸುತ್ತಿದ್ದಾನೆ. ಅಸ್ನೋಟಿಕರ್‌ನ ದಾನ್‌ಗಿರಿ ರಹಸ್ಯವೇ ಈ ಬಂದರು ಮಾಫಿಯಾ ದಂಧೆ!

ಕಾರವಾರ ಬಂದರಲ್ಲಿ ಅದಿರು ರಫ್ತಿಗಿಂತ ಹೆಚ್ಚು ಅಕ್ರಮ ಆದಾಯ ಗ್ರಾನೈಟ್ ಎಕ್ಸ್‌ಪೋರ್ಟ್‌ನಿಂದ ಆನಂದನಿಗೆ ಬರುತ್ತಿದೆ. ಹಾಗಾಗಿಯೇ ಆತ "ಮಳೆ ಇರಲಿ; ಬಿಸಿಲಿರಲಿ ಗ್ರಾನೈಟ್ ಲಾರಿ ಸಾಲುಸಾಲಾಗಿ ಕಾರವಾರ ಬಂದರಿಗೆ ಬರಲಿ" ಎಂದು ಲಹರಿಯಲ್ಲಿ ಹಾಡುತ್ತಿರುತ್ತಾನೆ. ಜನರಿಗೆ ತೊಂದರೆಯಾದರೇನು? ಆನಂದನಿಗೆ ಅಕ್ರಮ ಆದಾಯ ಬಂದರಾಯ್ತು. ಈ ಕಳ್ಳ ಗ್ರಾನೈಟ್ ಗಣಿಗಾರಿಕೆ ಮತ್ತು ಅಕ್ರಮ ರಫ್ತುಗಾರಿಕೆ ಇದೆಯಲ್ಲ ಅದು, ಅದಿರು ಕಳ್ಳಸಾಗಾಣಿಕೆಯಂತೆಯೇ ಸಾವಿರಾರು ಕೋಟಿಗಳ ಕರ್ಮಕಾಂಡ!!

ಅದಿರು ಲಾರಿಗಳಿಂದಲೂ "ಗ್ರಾನೈಟ್ ಹಫ್ತಾ"ದಷ್ಟೇ ಲಾಭವಿದ್ದಿದ್ದರೆ ಆನಂದ್ ಅದಕ್ಕೂ ಧಾರಾಳವಾಗಿ ಅವಕಾಶ ಕೊಡುತ್ತಿದ್ದನೆಂಬುದು ಆತನ ಆಷಾಢಭೂತಿತನವೇ ಸಾರಿ ಹೇಳುತ್ತಿದೆ. ಬೇಲೇಕೇರಿ ಬಂದರಿನ ಮೇಲೂ ಹಿಡಿತ ಸಾಧಿಸಲು ಆನಂದ್ ವಿಫಲ ಯತ್ನ ಮಾಡುತ್ತಲೇ ಇದ್ದಾನೆ. ಬೆಂಗಳೂರಿನ ರಾಜಮಹಲ್ ಸಿಲ್ಕ್ ಹೌಸ್‌ನ ಪಾರ್ಟನರ್‌ಶಿಪ್‌ನಲ್ಲಿ ಬೇಲೇಕೇರಿಯಲ್ಲೊಂದು ಅಕ್ರಮ ಬಂದರು ಕಟ್ಟಿ ಎಕ್ಸ್‌ಪೋರ್ಟರ್ ಆಗುವ ಕನಸು ಕಂಡಿದ್ದ ಆನಂದ್. ಆದರೆ ಅದ್ಯಾಕೋ ನನಸಾಗಲೇ ಇಲ್ಲ. ಆ ಬಳಿಕ ಕೋಸ್ಟಲ್ ಸರ್ವಿಸ್ ಕಂಪನಿಯವರ ಸಹವಾಸದಲ್ಲಿ ಬೇಲೇಕೇರಿ ಪೋರ್ಟ್ ದೊರೆಯಾಗಲು ಹವಣಿಸಿ, ಅಲ್ಲೂ ಕೈ ಸುಟ್ಟುಕೊಂಡ!

ಹೀಗಾಗಿ ಆನಂದನ ಕತೆ-ಕೈಗೆ ಸಿಗದ ದ್ರಾಕ್ಷಿ ಹುಳಿಯಾದ ನರಿಯಂತಾಗಿದೆ. ಒಟ್ಟಿನಲ್ಲಿ ಆನಂದ್ ಅಸ್ನೋಟಿಕರ್ ಅದಿರು ವಿರೋಧಿ; ಗ್ರಾನೈಟ್ ಪರ ಕಾರವಾರ-ಅಂಕೋಲಿಗರ ಪಾಲಿಗೆ ಕಾಡುವ ಶನಿ!!


ಶೀಘ್ರವೇ ಶುರುವಾಗಲಿದೆ

ಯಡ್ಡಿ-ರೆಡ್ಡಿ ಢಿಶುಂ! ಢಿಶುಂ!!



ಬಿಜೆಪಿಗೆ ಬೆಂಕಿ ಬಿದ್ದಿದೆ!!


ಅಪ್ಪಟ ಅನುಕೂಲ ಸಿಂಧುತ್ವವನ್ನೇ ಸಿದ್ಧಾಂತ ಮಾಡಿ ಸು ಕುರ್ಚಿ ಟಾರ್ಗೆಟ್ ರಾಜಕಾರಣ ಶುರುಹಚ್ಚಿಕೊಂಡ ತಿಕ ಅಧಃಪತನವಿದು! ಅಕ್ರಮ ಗಣಿಗಾರಿಕೆ ಮತ್ತದಕ್ಕೆ ಬಂಧಿಸಿದಂತೆ ಲೋಕಾಯುಕ್ತ ಸಂತೋಷ್ ಹೆಗ್ಡೆ ಕೊಟ್ಟಿದ್ದ ಜೀನಾಮೆ ಹಗರಣದ ಎಪಿಸೋಡು ದ ಆಳುವ ಬಿಜೆಪಿಯ ಬುಡವನ್ನೇ ಲುಗಿಸುತ್ತಿದೆ.




ಗಣಿ ಹಗರಣವನ್ನು ಸಿಬಿಐಗೆ ಸುವಂತೆ ವಿರೋಧ ಪಕ್ಷ ವಿಧಾನ ಥಲದಲ್ಲಿ ನಡೆಸುತ್ತಿರುವ ಅಹೋರಾತ್ರಿ ಯಡ್ಡಿ-ರೆಡ್ಡಿಗಳ ಶೀತಲ ಸಮರ ನಿರ್ಣಾಯಕ ಯುದ್ಧದ ಹಂತಕ್ಕೆ ನಿಲ್ಲಿಸಿದೆ! ಒಳಗೊಳಗೇ ವೈಷಮ್ಯ-ಮನಸ್ಯದಿಂದ ಬುಸುಗುಡುತ್ತಿದ್ದ -ರೆಡ್ಡಿ ಈಗ ಕಚ್ಚೆ ಕಟ್ಟಿಕೊಂಡು ಮುಸೆಯುತ್ತಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ಯಡ್ಡಿ ದ್ಧ ಬಂಡೆದ್ದಿದ್ದ ರೆಡ್ಡಿಗಳು ಗಾಡ್ ರ್ ಸುಷ್ಮಾ ಸ್ವರಾಜ್ ಸಮ್ಮುಖ ಲ್ಲಿಂದು ನೈಚ್ಯಾನುಸಂಧಾನ ಮಾಡಿಕೊಂಡಿದ್ದರು. ಆ ರದ ಈ ಎಂಟು ತಿಂಗಳು ಬಿಜೆಪಿಯೊಳಗಿನ ಭಿನ್ನಮತ ನವಾಗಿದೆ ಎಂಬಂಥ ಭ್ರಮೆ ಮೂಡಿತ್ತು. ಆದರೆ ನ್ನ ದಿಲ್ಲಿ ಧಣಿಗಳೆದುರು ಅಪರಾಧಿಯ ಕಟಕಟೆಯಲ್ಲಿ ಅವಮಾನಿಸಿ ಒಪ್ಪಂದಕ್ಕೆ ಬಂದಿದ್ದ ರೆಡ್ಡಿ ಬಳಗದ ಆಳದಲ್ಲಿ ಯಡ್ಡಿ ಕುದಿಯುತ್ತಲೇ ಇದ್ದರು.

ಬಹಿರಂಗವಾಗಿ ರೆಡ್ಡಿಗಳ ಜತೆ ಸೌಹಾರ್ದದಿಂದ ವಂತೆ ಯಡ್ಡಿ ತೋರಿಸಿಕೊಂಡರೂ ಈ ಶನಿಪಡೆಯನ್ನು ಮು ಹಾಕುವುದು ಹೇಗೆಂಬ ಲೆಕ್ಕಾಚಾರ ಹಾಕುತ್ತಲೇ ಸು. "ರಾಜಿ" ನಂತರವೂ ಒಂದಲ್ಲ ಒಂದು ಥರದ ಕ್‌ಮೇಲ್ ಮಾಡುತ್ತಲೇ ಇದ್ದ ಬಿ-ನಿ ಬಳಗದ ಸಹವಾಸ ಹೇಗೆ ರೆಯುವುದೆಂಬ ಚಿಂತೆಗೆ ಯಡ್ಡಿ ದ್ದರು. ತಲೆ ರೋಸಿ ಹೋಗಿದ್ದ ಯಡ್ಡಿ ಆಪ್ತರಲ್ಲಿ ಸರ್ಕಾರ ಉರುಳಿದರೂ ಬಾರಿಲ್ಲ, ಅಡಿಗಡಿಗೆ ಕಾಡುತ್ತಿರುವ ಮು ಗಣಿಗಾರಿಕೆಯಿಂದ ತನ್ನ ಸರ್ಕಾರ ಇಕ್ಕಟ್ಟಿಗೆ ಸಿಲುಕಿಸುತ್ತಿರುವ ರೆಡ್ಡಿ ಗ್ ಅನ್ನು ಮಟ್ಟ ಹಾಕುತ್ತೇನೆಂದು ಮ್ಮೆ ಹೇಳುತ್ತಲೂ ಇದ್ದರು, ಪಾಪ.



ಯಾವಾಗ ಲೋಕಾಯುಕ್ತ ನ್ಯಾ. ಹೆಗ್ಡೆ ಕರ್ಮಕಾಂಡವನ್ನೇ ಮುಂದಿಟ್ಟು ನಾಮೆ ಬಿಸಾಕಿದರೋ, ಅದು ದ ಜನಸಾಮಾನ್ಯರ ಮುಂದೆ ಬಿಜೆಪಿ ಸರ್ಕಾರವನ್ನು ಯೆಂದು ಬಿಂಬಿಸಿ ಬಿಟ್ಟಿತೋ, ಅದನ್ನೇ ಯಡ್ಡಿ ಅಸ್ತ್ರ ಡಿಕೊಂಡುಬಿಟ್ಟರು. ನ್ಯಾ. ಹೆಗ್ಡೆ ರಾಜೀ ರಾದ್ಧಾಂತವನ್ನೇ ಬಳಸಿಕೊಂಡು ದ ಜನಸಮುದಾಯ ಗಣಿಕಳ್ಳ ರೆಡ್ಡಿಗಳ ದ್ಧ ತಿರುಗಿಬೀಳುವಂಥ ಸನ್ನಿವೇಶ ಸೃಷ್ಟಿಗೆ ಯಡ್ಡಿ ತಂತ್ರ ಹೆಣೆದರು.



ಸಿಎಂ ಯಡ್ಡಿಯ ಸುಪ್ತ ಕಾರ್ಯಾಚರಣೆ ಗಣಿ ಧಣಿಗಳಿಗೆ ಆತ ತಮ್ಮನ್ನು ಸಾಕಲು ಹೊಂಚು ಹಾಕುತ್ತಿದ್ದಾರೆಂಬ ಯ ಕಾಡತೊಡಗಿತು. ಈ ಆತಂಕ ದು ತಮ್ಮ ದಿಲ್ಲಿ ರಕ್ಷಕಿ ಸುಷ್ಮಮ್ಮನಿಗೂ ಬಂದರು. ಹಾಗೊಮ್ಮೆ ಯಡ್ಡಿ ನ್ನು ಬಡಿಯಲು ಬಂದರೆ ಹೇಗೆ ದಾಳಿ ಮಾಡಬೇಕೆಂಬ ಸಣ್ಣ ಸ್ಕೆಚ್ಚೂ ಕೊಂಡರು. ಮೊನ್ನೆ ವಿಧಾನಮಂಡಲದ ಅಧಿವೇಶನ ವಾಗುತ್ತಿದ್ದಂತೆಯೇ ಕಾಂಗ್ರೆಸ್-ಜೆಡಿಎಸ್‌ನವರು ಗಣಿ ಹಗರಣ-ಬೇಲೆಕೇರಿ ಬಂದರು ಭಾನಗಡಿ, ಲೋಕಾಯುಕ್ತರ ರಾಜೀನಾಮೆ ಬಗ್ಗೆ ಮಾತನಾಡಲಾರಂಭಿಸಿದಾಗ ಸಿಎಂ ಯಡ್ಡಿ ಮಾಡಿದ ಕಿತಾಪತಿಯ ಅರಿವಾಗಿ ಆತ ತಮ್ಮನ್ನು ಮುಗಿಸುವ ಹಠದಲ್ಲಿದ್ದಾರೆಂಬುದು ಗಣಿ ಕಳ್ಳ ರೆಡ್ಡಿ ಬಣಕ್ಕೆ ಖಾತ್ರಿಯಾಗಿ ಹೋಯ್ತು!

ಪ್ರತಿಪಕ್ಷದ ನಾಯಕರು ಸದನದಲ್ಲಿ ಗಣಿ ಕರ್ಮಕಾಂಡದ ಬಗ್ಗೆ ಮಾತಾಡುತ್ತಿದ್ದಾಗ ಸಿಎಂ ಯಡ್ಡಿ "ನೀವು ತುಂಬಾ ಚೆನ್ನಾಗಿ ಮಾತಾಡುತ್ತಿದ್ದೀರಿ. ನಿಮಗೆ ಶುಭವಾಗಲಿ... ನಿಮಗೆ ನನ್ನ ಸಂಪೂರ್ಣ ಸಹಕಾರವಿದೆ...." ಎಂಬ ಚೀಟಿ ಕಳಿಸಿಕೊಟ್ಟಿದ್ದರಂತೆ. ಇದು ರೆಡ್ಡಿ ಬಳಗಕ್ಕೆ ಅದ್ಹೇಗೋ ಗೊತ್ತಾಗಿದೆ. ಕೆರಳಿ ಕೆಂಡವಾದ ಬಿ-ಗ್ಯಾಂಗ್ ಯಡ್ಡಿಗೆ ಬುದ್ಧಿ ಕಲಿಸಲು ರೆಡಿಯಾಗೇ ಬಿಟ್ಟಿತು. ತಮಗೆ ಇಷ್ಟವಿಲ್ಲದ ನ್ಯಾ. ಹೆಗಡೆ ಮತ್ತೆ ಲೋಕಾಯುಕ್ತರಾಗಿ ಮುಂದುವರಿಯುವಂತೆ ಅಡ್ವಾಣಿ, ಗಡ್ಕರಿಗಳಂಥ ಬಿಜೆಪಿಯ ದೊಡ್ಡವರ ಮೂಲಕ ಯಡ್ಡಿ ಮಾಡಿಸಿದ್ದರಿಂದ ಮೊದಲೇ ಪಿತ್ಥ ನೆತ್ತಿಗೇರಿಸಿಕೊಂಡಿದ್ದ ರೆಡ್ಡಿ ತಂಡಕ್ಕೆ ಸದನದಲ್ಲಿನ ಷಡ್ಯಂತ್ರ ತಲೆ ಕೆಡಿಸಿ ಬಿಟ್ಟಿತು.


ಈ ಅಸಹಾಯಕತೆ-ಹತಾಶೆಯಲ್ಲಿದ್ದ ರೆಡ್ಡಿ ಬಳಗ ವಿಪಕ್ಷದವರ ಮೇಲೇರಿ ಹೋಗಿತ್ತು. ರೆಡ್ಡಿ ಗ್ಯಾಂಗು ಭೂಗತ ಭಾಷೆ ಬಳಸಿ ರೌಡಿಗಿರಿ ಪ್ರದರ್ಶಿಸಿದ್ದು ಬಿಜೆಪಿಯೊಳಗಿನ ಕಾಲೆಳೆವ ಕಸರತ್ತಿನ ಅಡ್ಡ ಪರಿಣಾಮವಾಗಿತ್ತು. ಸ್ವಪಕ್ಷದ ಹಿತಶತ್ರು ಸಿಎಂ ಯಡ್ಡಿ ಮೇಲಿನ ಆಕ್ರೋಶ ಪ್ರದರ್ಶಿಸುವ ಭರದಲ್ಲಿ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ, ಸುರೇಶ್ ಬಾಬು ಮತ್ತು ನಾಗೇಂದ್ರ ಶುದ್ಧ ಗೂಂಡಾಗಳಂತೆ ಸದನದಲ್ಲಿ ಹಾರಾಡಿಬಿಟ್ಟರು. ಅಲ್ಲಿಗೆ ಬಿಜೆಪಿ ಅಧಿಕಾರ ಲಾಲಸೆಯಿಂದ ಎಂತೆಂಥ ಎಲಿಮೆಂಟುಗಳನ್ನೆಲ್ಲಾ ವಿಧಾನಸಭೆಗೆ ತಂದು ಕೂರಿಸಿದೆ ಎಂಬುದರ ಹಿಂದಿನ ಅಸಲೀಯತ್ತುಗಳೆಲ್ಲ ಬೆತ್ತಲಾದವು.

ಅದಿರಲಿ, ಯಡ್ಡಿ ಗಣಿ ಧಣಿಗಳ ಮೇಲೆ ದಾಳಿಗಿಳಿದಿದ್ದ ವಿಪಕ್ಷದ ನಾಯಕರನ್ನು ಹುರಿದುಂಬಿಸಿದ್ದೇಕಿರಬಹುದು? ಇದರ ಹಿಂದೆ ರೆಡ್ಡಿ ಬಳಗದ ಹಾವಳಿಯಿಂದ ತಪ್ಪಿಸಿಕೊಂಡು ಸ್ವತಂತ್ರ-ಶುದ್ಧ ಬಿಜೆಪಿ ಸರ್ಕಾರ ರಚಿಸುವ ಪ್ಲಾನೊಂದಿತ್ತು. ಇದಕ್ಕೆ ಸಂಘಪರಿವಾರದ ನಾಯಕರ ಆಶೀರ್ವಾದವೂ ಸಿಕ್ಕಿತ್ತು. ರೆಡ್ಡಿಗಳ ಹಂಗಿಲ್ಲದ ಸರ್ಕಾರಕ್ಕೆ ಹಾರ್ಡ್‌ಕೋರ್ ಬಿಜೆಪಿಗರು ಯಡ್ಡಿ ಹಿಂದೆ ಒತ್ತಾಸೆಯಾಗಿ ನಿಂತಿದ್ದರು.

ಎಲ್ಲಿಯವರೆಗೆ ಈ ರೆಡ್ಡಿಗಳ ಹಂಗಿನಲ್ಲಿ ಸರ್ಕಾರ ನಡೆಸುವ ದರ್ದಿರುತ್ತದೋ ಅಲ್ಲಿಯವರೆಗೆ ನೆಮ್ಮದಿ ಇರದೆಂಬುದು ಯಡ್ಡಿಗೆ ರೇಜಿಗೆ ಹುಟ್ಟಿಸಿಬಿಟ್ಟಿತ್ತು. ಹಾಗಾಗಿ ರೆಡ್ಡಿ ಬಳಗ ಭಾನಗಡಿಗಳಿಂದ ಬಿಜೆಪಿಗೆ-ಸರ್ಕಾರಕ್ಕೆ ಕಳಂಕ ಮೆತ್ತುತ್ತಿದೆಯೆಂಬುದನ್ನು ಕೇಂದ್ರ ನಾಯಕರ, ಚೆಡ್ಡಿ ರಿಂಗ್‌ಮಾಸ್ಟರ್‌ಗಳ ಮುಂದೆ ಬಿಂಬಿಸಲು ಏನೆಲ್ಲಬೇಕೋ ಅದೆಲ್ಲವನ್ನು ಆತ ಒಳಗೊಳಗೇ ಮಾಡುತ್ತಲೇ ಇದ್ದರು. ರೆಡ್ಡಿಗಳ ಗಣಿ 'ದುಡ್ಡಿನ ಬಲವಿಲ್ಲದೇ ಮಧ್ಯಂತರ ಚುನಾವಣೆಗೆ ಹೋಗಲೂ ಮಂಥನ ನಡೆಯುತ್ತಿತ್ತು.

ಕುಮಾರಸ್ವಾಮಿ ವಚನಭ್ರಷ್ಟರೆಂದು ಅತ್ತೂ ಕರೆದು "ಸಿಂಪಥಿ" ಸೃಷ್ಟಿಸಿಕೊಂಡು ಸಿಎಂ ಆಗಿರುವ ಯಡ್ಡಿಗೆ ದುರಂತ ನಾಯಕ ಪಟ್ಟದಿಂದಾಗುವ ಲಾಭದ ರುಚಿ ಹತ್ತಿದೆ. ಈಗ ಈ ರೆಡ್ಡಿಗಳ ಹಿಂಸೆ-ಬ್ಲಾಕ್‌ಮೇಲ್ ಅಕ್ರಮ ಗಣಿಗಾರಿಕೆಯಿಂದ ಅಸೆಂಬ್ಲಿ ವಿಸರ್ಜಿಸಬೇಕಾಗಿ ಬಂತೆಂದು ಜನರ ಮುಂದೆ ಗೋಳಾಡಿದರೆ ಮತ್ತೆ ರೆಡ್ಡಿಗಳ ನೆರವಿಲ್ಲದೆ ಸಿಎಂ ಆಗಬಹುದೆಂಬ ಲೆಕ್ಕಾಚಾರ ಯಡ್ಡಿಯದ್ದು. ಈ ಹಿನ್ನೆಲೆಯಲ್ಲೇ ಆತ ಸದನದಲ್ಲಿ ವಿಪಕ್ಷ ನಾಯಕರಿಗೆ ಕುಮ್ಮಕ್ಕು ಕೊಟ್ಟಿದ್ದು. ಆ ಮೂಲಕ ರಾಜ್ಯದಲ್ಲಿ ರೆಡ್ಡಿ ಬಳಗದ ವಿರುದ್ಧ ಜನಾಭಿಪ್ರಾಯ ಮೂಡಲೆಂಬ ಮಸಲತ್ತು ಮುಖ್ಯಮಂತ್ರಿಗಳದು!

ಹಾಗಾಗಿಯೇ ಸೋಮವಾರ ಮಧ್ಯಾಹ್ನದವರೆಗೂ ಗಣಿ ರೆಡ್ಡಿ ಪಡೆಯ ಐವರು ರೌಡಿ ಶಾಸಕರನ್ನು ಸದನದಿಂದ ಸಸ್ಪೆಂಡ್ ಮಾಡಬೇಕು, ಅವರ ಮೇಲೆ ಕ್ರಿಮಿನಲ್ ಕೇಸು ಹಾಕಿ ಪೊಲೀಸರಿಗೊಪ್ಪಿಸಬೇಕೆಂದು ಗದ್ದಲವೆಬ್ಬಿಸಿದ್ದ ವಿರೋಧ ಪಕ್ಷದವರು, ಇದ್ದಕ್ಕಿದ್ದಂತೆ ಗಣಿಗಾರಿಕೆ ಅವ್ಯವಹಾರ ಸಿಬಿಐಗೆ ಒಪ್ಪಿಸಬೇಕೆಂಬುದೊಂದೇ ತಮ್ಮ ಡಿಮ್ಯಾಂಡ್ ಎಂದು ರಾಗ ಬದಲಿಸಿಬಿಟ್ಟಿದ್ದರು. ಇದರ ಹಿಂದೆ ಖುದ್ದು



ಯಡ್ಡಿಯದೇ ಕರಾಮತ್ತಡಗಿದೆ ಎಂಬುದು ರೆಡ್ಡಿ ಬಳಗಕ್ಕೆ ಗೊತ್ತಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಅಲ್ಲಿಗೆ ಸಿಎಂ ಯಡ್ಡಿ ತಮ್ಮನ್ನು ಬಿಜೆಪಿಯ ಶಕ್ತಿ ಕೇಂದ್ರದಿಂದ ಹೊರಗೆಹಾಕಿ ಮಧ್ಯಂತರ ಚುನಾವಣೆಗೆ ಹೋಗಲು ಸ್ಟ್ರಾಟಜಿ ರೂಪಿಸುತ್ತಿದ್ದಾರೆಂಬುದೂ ರೆಡ್ಡಿ ಬಣದ 'ದಂಡ'ನಾಯಕ ಜನಾರ್ದನ ರೆಡ್ಡಿಗೆ ಗ್ಯಾರಂಟಿಯಾಗಿ ಹೋಯ್ತು.

ಯಡ್ಡಿ ಈ ಪೀಡೆಯನ್ನು ತೊಲಗಿಸಲು ಎಚ್ಚರಿಕೆಯಿಂದಲೇ ಹೆಜ್ಜೆಯಿಡುತ್ತಿದ್ದಾರೆ. ವಿಪಕ್ಷದವರನ್ನು ನೇರವಾಗಿ ಸಂಪರ್ಕಿಸುವ ಗೋಜಿಗೆ ಹೋಗುತ್ತಿಲ್ಲ. ತನ್ನ ಸಂದೇಶ-ಆಶಯಗಳನ್ನು ಎದುರು ಪಕ್ಷದವರಿಗೆ ತಿಳಿಸಲು-ರೆಡ್ಡಿಗಳ ವಿರುದ್ಧ ಬಳಸಬೇಕಾದ "ಅಸ್ತ್ರ" ರವಾನಿಸಲು ನಂಬಿಕಸ್ಥ ಇಬ್ಬರು ಮಂತ್ರಿಗಳನ್ನು ನಿಯೋಜಿಸಿದ್ದಾರೆ. ಸಚಿವ ಬಸವರಾಜ್ ಬೊಮ್ಮಾಯಿ ಮತ್ತು ಶಿವರಾಜ್ ತಂಗಡಗಿ ಸಿಎಂ ರಾಯಭಾರಿಯಾಗಿ ಅಗತ್ಯ ಕಂಡಾಗೆಲ್ಲ ವಿಪಕ್ಷದ ಕಲಿಗಳನ್ನು ಸಂಧಿಸಿ ಬರುತ್ತಿದ್ದಾರೆ. ಇದೆಲ್ಲ ಗೊತ್ತಾಗಿಯೇ ಜನಾರ್ದನ ರೆಡ್ಡಿ ತಲೆ ಉಳಿಸಿಕೊಳ್ಳಲು ಪ್ರತಿತಂತ್ರ ಹೂಡುತ್ತಿದ್ದಾರೆ.

ಸಿಎಂ ಯಡ್ಡಿ, ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪರನ್ನು ಕೇರ್ ಮಾಡದೆ ಸಿಬಿಐ ತನಿಖೆ ಬೇಡಿಕೆ ಮಂಡಿಸಿ ಗದ್ದಲ ಎಬ್ಬಿಸಿ ರಾಜ್ಯದ ಜನರಲ್ಲಿ ತಮ್ಮನ್ನು ಕ್ರಿಮಿನಲ್‌ಗಳೆಂಬಂಥ ಭಾವನೆ ಮೂಡಿಸುತ್ತಿರುವ ಯಡ್ಡಿ ಪ್ರಚೋದಿತ ವಿಪಕ್ಷದ ವಿರುದ್ಧ ಏಕಪಕ್ಷೀಯವಾಗಿ ಯುದ್ಧ ಘೋಷಿಸುತ್ತಿದ್ದಾರೆ. ತನ್ಮೂಲಕ ಯಡ್ಡಿಗೂ ಸೆಡ್ಡು ಹೊಡೆದು ನಿಂತಿದ್ದಾರೆ. ದಿಲ್ಲಿ ದೊರೆಗಳಿಗೂ ಯಡ್ಡಿ ವಿರುದ್ಧ ದೂರು ಕೊಟ್ಟಿರುವ ರೆಡ್ಡಿಗಳು ಬಿಜೆಪಿಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿದ್ದಾರೆ.

'ತಾಯಿ' ಸುಷ್ಮಾ ಸ್ವರಾಜ್‌ಗೂ ಯಡ್ಡಿ ಬಗ್ಗೆ ಚಾಡಿ ಹೇಳುತ್ತಿದ್ದಾರೆ. ಹಾಗಾಗಿಯೇ ಬಿಜೆಪಿ ವರಿಷ್ಠರೀಗ ಯಡ್ಡಿಗೆ ರೆಡ್ಡಿಗಳ ಮೇಲೆ ಯಾವುದೇ ಕ್ರಮಕ್ಕೆ ಕೈಹಾಕಬೇಡಿ, ಗಣಿ ಗಲಾಟೆಯನ್ನು ಸಿಬಿಐಗೆ ಯಾವ ಕಾರಣಕ್ಕೂ ಒಪ್ಪಿಸಬೇಡಿ ಎಂದು ಕಟ್ಟಾಜ್ಞೆ ಹೊರಡಿಸಿದ್ದಾರೆ. ರಾಜ್ಯಪಾಲರು ಕಳ್ಳ ಗಣಿಗಾರಿಕೆ ನಡೆಸುತ್ತಿರುವ ಚೋರ ಮಂತ್ರಿಗಳನ್ನು ಸಂಪುಟದಿಂದ ಕೈಬಿಡಿ ಎಂದಿರುವುದು ಯಡ್ಡಿಯನ್ನೀಗ ಇಕ್ಕಟ್ಟಿಗೆ ಸಿಲುಕಿಸಿದೆ. ಇಷ್ಟಾದರೂ ಯಡ್ಡಿ ರೆಡ್ಡಿಗಳ ಬದುಕಿಗಾಗಿನ ಹೋರಾಟ ಜೋರಾಗುತ್ತಿದ್ದಂತೆಯೇ ವಿಪಕ್ಷದ ಗಣಿ ಗಲಾಟೆ ಜೋರಾಗಿಸುವ ದ್ವಂದ್ವಾರ್ಥದ ಮಾತಾಡುತ್ತಿದ್ದಾರೆ. ಇದು ವಿರೋಧಿಗಳಿಗೆ ಶಕ್ತಿ ತುಂಬುತ್ತಿದೆ; ಬಿಜೆಪಿಯಲ್ಲಿ ಭಿನ್ನಮತ ತೀವ್ರವಾಗಿದೆ.

ಒಟ್ಟಿನಲ್ಲೀಗ ಯಡ್ಡಿ-ರೆಡ್ಡಿ ಎರಡನೇ ಸುತ್ತಿನ ಜಂಗೀಕುಸ್ತಿಗೆ ಅಣಿಯಾಗಿದ್ದಾರೆ. ಇದು ರೆಡ್ಡಿಗಳನ್ನು ಬಲಿ ಪಡೆಯುತ್ತದೋ? ಇಲ್ಲ ಯಡ್ಡಿ ಸರ್ಕಾರಕ್ಕೆ ಮುಳುಗು ನೀರಾಗುತ್ತದೋ? ಇದು ರಾಜ್ಯದ ಜನರ ಮುಂದಿರುವ ಕುತೂಹಲ.

• ನಹುಷ

ಕಾರ್ಟೂನ್ ಕಾರ್ನರ್




ಸುಂದರಿಯೊಳಗೆ ಸೈತಾನ

ವಕೀಲೆ ಶುಭಾಗೆ ಜೀವಾವಧಿ ಶಿಕ್ಷೆ

ಸತತ ಏಳು ವರ್ಷಗಳ ಕಾಲ ನಡೆದ ಸುದೀರ್ಘ ಕಾನೂನಿನ ಕಸರತ್ತಿನಲ್ಲಿ ಸಿ.ವಿ.ನಾಗೇಶ್ ತನ್ನನ್ನು ಬಚಾವು ಮಾಡುತ್ತಾರೆಂದೇ ಶುಭಾ ಲೆಕ್ಕ ಹಾಕಿದ್ದು 2010ರ ಜುಲೈ 13ಕ್ಕೆ ಸುಳ್ಳಾಗಿತ್ತು. ಜಡ್ಜ್ ಒಂಟಿಗೋಲಿ ಶುಭಾ ಸೇರಿದಂತೆ ನಾಲ್ವರನ್ನೂ ಅಪರಾಧಿಗಳೆಂದು ತೀರ್ಪಿತ್ತಾಗಿತ್ತು. ಅದರ ಮರುದಿನವೇ ಜೀವಾವಧಿ ಶಿಕ್ಷೆ ವಿಧಿಸಿಬಿಟ್ಟರು. ಇನ್ನೂ 28ರ ಹರೆಯ. ತುಂಬು ಯೌವನ, ಕ್ಷಣಚಿತ್ತದ ಪ್ರಣಯದ ಮತ್ತು ಶುಭಾ ಎಂಬ ಸುಂದರಿಯ ಬದುಕನ್ನೇ ಹೊಸಕಿಹಾಕಿತ್ತು. ಪ್ರಿಯಕರ ಅರುಣ್‌ನ ಮುಖದಲ್ಲಿ ಪಶ್ಚಾತ್ತಾಪ ತಾಂಡವವಾಡುತ್ತಿತ್ತಾದರೂ ಕಾಲ ಮಿಂಚಿಹೋಗಿತ್ತು. ಓರ್ವ ವಕೀಲೆಯಾಗಿ, ಕಾನೂನಿನ ಪರಿವೆಯಿದ್ದೂ ಶುಭಾ ಏಕೆ ತನ್ನ ಬದುಕಿಗೆ ಬೆಂಕಿಯಿಟ್ಟುಕೊಂಡಳು? ಏನೂ ತಪ್ಪು ಮಾಡದ ಗಿರೀಶನನ್ನು ಯಾಕಿಷ್ಟು ನಿರ್ದಯವಾಗಿ ಕೊಲ್ಲಿಸಿದಳು?

• ರಾ. ಸೋಮನಾಥ್
ra.somanath2010@gmail.com

ಮುಖ ನಿರ್ಲಿಪ್ತವಾಗಿತ್ತು, ಆದರೆ ಕಣ್ಣುಗಳಲ್ಲಿ ಅದೆಂಥದೋ ಪಶುಸದೃಶ ವಾಂಛೆಯಿತ್ತು, ರಕ್ತಗೆಂಪಿನ ಚೂಡಿದಾರ್, ನೀಟಾಗಿ ತೀಡಿ ಬಾಚಿದ ಬೈತಲೆ, ತುಟಿಯಲ್ಲಿ ತಿಳಿಯಾದ ಲಿಪ್‌ಸ್ಟಿಕ್ ಮತ್ತು ತುಂಬಿತುಳುಕುತ್ತಿದ್ದ ಯೌವನ. ನಗರ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದ 17ನೇ ನಂಬರಿನ ಕೋರ್ಟ್ ಹಾಲು ಕಿಕ್ಕಿರಿದಿತ್ತು, ನಿರ್ಲಿಪ್ತಳಾಗಿ, ನಿಸ್ತೇಜಳಾಗಿ ಕಟಕಟೆಯಲ್ಲಿ ನಿಂತಿದ್ದಳು ಇಪ್ಪತ್ತೆಂಟರ ಹರೆಯದ ಶುಭ ಶಂಕರನಾರಾಯಣ.


ಕೊಲೆಯಾದ ಗಿರೀಶ್

ಇಂಟೆಲ್ ಉದ್ಯೋಗಿ ಮತ್ತು ತನ್ನ ಭಾವಿ ಪತಿ ಬಿ.ವಿ.ಗಿರೀಶ್‌ನನ್ನು ತಾನೇ ನಿಂತುಕೊಲ್ಲಿಸಿದಾಕೆ. ತನ್ನ ಪ್ರಿಯತಮ ಅರುಣ್‌ವರ್ಮಾನನ್ನೇ ಛೂಬಿಟ್ಟು ಕಾರ್ಯ ಸಾಧಿಸಿದಾಕೆ. ತನ್ನ ಕಣ್ಣೆದುರೇ ಮದುವೆಯಾಗುವಾತ ವಿಲಿಗುಡುತ್ತಾ ಪ್ರಾಣಬಿಡುತ್ತಿದ್ದರೆ ತನ್ನ ಗುಪ್ತಪ್ರೇಮಿಯನ್ನು ನೆನೆಸಿಕೊಂಡು ಪ್ರಣಯದ ಕನಸು ಕಂಡಾಕೆ.

ಬಹುಶಃ ತನ್ನ ಪಾಲಿಗಿನ್ನು ತೆರೆಯಬಲ್ಲ ಬಾಗಿಲುಗಳೇ ಉಳಿದಿಲ್ಲ ಎಂಬುದು ಆಕೆಗೆ ಮನದಟ್ಟಾಗಿರಬೇಕು. ತನ್ನ ಜೀವಿತಾವಧಿ ಪೂರ್ತಿ ಜೈಲಲ್ಲೇ ಕಳೆಯಬೇಕಾಗಬಹುದೆಂಬ ಗಟ್ಟಿ ನಿರ್ಧಾರಕ್ಕಾಗಲೇ ಆಕೆ ಬಂದಿರಬೇಕು. ಪಶ್ಚಾತ್ತಾಪ, ಪ್ರಾಯಶ್ಚಿತ್ತ, ನಾಚಿಕೆ, ಅವಮಾನ, ಅಳುಕು, ಆತಂಕ, ದುಃಖ, ಕಣ್ಣೀರು ಯಾವುದು ಆಕೆಯ ಮುಖದಲ್ಲಿರಲಿಲ್ಲ, ಅದು ಭಂಡತನವಾ ಮೊಂಡು ಬುದ್ಧಿಯಾ ಗೊತ್ತಿಲ್ಲ, ಹದಿನೇಳನೇ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದ ಜಡ್ಜ್ ವಿ.ಎಸ್.ಒಂಟಿಗೋಲಿ ತಮ್ಮ ತೀರ್ಪನ್ನು ಓದಿ ಹೇಳುತ್ತಿದ್ದರೆ ಶುಭಾ ಶೂನ್ಯವನ್ನು ದಿಟ್ಟಿಸುತ್ತಿದ್ದಳು. ಪಕ್ಕದಲ್ಲೇ ಆಕೆಯ ಪ್ರಿಯಕರ ಅರುಣ್ ವರ್ಮಾ ನಿಂತಿದ್ದ, ಶುಭಾಳ ನಿರ್ಲಿಪ್ತತೆಗಿಂತಲೂ ಆತನದು ವ್ಯತಿರಿಕ್ತ ವರ್ತನೆ. ತನ್ನ ಮುಖ ಮುಚ್ಚಿಕೊಳ್ಳುತ್ತಿದ್ದ, ತಲೆತಗ್ಗಿಸಿ ನೆಲ ನೋಡುತ್ತಿದ್ದ, ಆತನ ಆಜೂಬಾಜಿನಲ್ಲೇ ಹಂತಕರಾದ ದಿನೇಶ್ ಮತ್ತು ವೆಂಕಟೇಶ್ ನಿಂತಿದ್ದರು. ನ್ಯಾಯ ತನ್ನ ವಿಧಿಯನ್ನು ಮುಲಾಜಿಲ್ಲದೇ ನೆರವೇರಿಸಿತು.

ಕೊಲೆಗೆ ಸಂಚು ಮಾಡಿದ ವಕೀಲೆ ಶುಭಾ, ಆಕೆಯ ಪ್ರಿಯಕರ ಅರುಣ್ ವರ್ಮಾ ಕೊಂದ ವೆಂಕಟೇಶ್ ಮತ್ತು ದಿನೇಶ್‌ಗೆ ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿತ್ತು, 2010ರ ಜುಲೈ 14ರ ಮಧ್ಯಾಹ್ನದ ನಾಲ್ಕು ಗಂಟೆಯ ಆ ತೀರ್ಪು ಶುಭಾಳ ಎಲ್ಲ ಕನಸನ್ನೂ ಆಕೆಯ ಯೌವನ ಮತ್ತು ಭವಿಷ್ಯದ ಸಮೇತ ಹೊಸಕಿಹಾಕಿತ್ತು, ಆಕೆಯ ಲಾಯರ್ ಸಿ.ವಿ.ನಾಗೇಶ್ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಅಪೀಲು ಹೋಗುವ ನಿರ್ಧಾರ ಪ್ರಕಟಿಸಿದರಾದರೂ ಶುಭಾಳ ಕಣ್ಣಲ್ಲಿ ಹೊಳಪು ಮೂಡಲೇ ಇಲ್ಲ,

ಸಣ್ಣದೊಂದು ದುಡುಕು, ಪ್ರಾಯ ಸಹಜ ಲಾಲಸೆ ಆಕೆಯ ಬದುಕನ್ನೇ ಹೊಸಕಿ ಹಾಕಿತ್ತು, ಪ್ರೇಯಸಿಯ ಮೋಹಕ್ಕೆ ಬಿದ್ದು ಕೊಲ್ಲಿಸಿದ ಅರುಣ್ ವರ್ಮಾ ತನ್ನ ಜೀವಮಾನವಿಡೀ ಕಂಬಿ ಎಣಿಸಲು ಅಣಿಯಾಗಿ ನಿಂತಿದ್ದ, ಕೊಂದ ವೆಂಕಟೇಶ್ ಮತ್ತು ದಿನೇಶ್ ಮಾತ್ರ ತಲೆತಲೆ ಚಚ್ಚಿಕೊಂಡು ಅಳುತ್ತಿದ್ದರು. ಕಾಮದ ಒಡಲೊಳಗಿಂದಲೇ ಕೊಲೆಗಾರನೊಬ್ಬ ಹುಟ್ಟಬಲ್ಲನೆಂಬ ಬುದ್ಧ ನೀತಿಗೆ ಶುಭಾ ಮತ್ತು ಅರುಣ್ ವರ್ಮಾ ಇಬ್ಬರೂ ಪ್ರತ್ಯಕ್ಷಸಾಕ್ಷಿಗಳಂತಿದ್ದರು.

ಇದು ಆಕೆಯ ಸ್ವಯಂಕೃತಾಪರಾಧ. ತನ್ನ ಕೈಯಾರೆ ತನ್ನದೇ ಬದುಕಿಗೆ ಬೆಂಕಿ ಕೊಟ್ಟುಕೊಂಡ ಮೂರ್ಖ ಹೆಣ್ಣುಮಗಳು ಶುಭಾ. ಆಕೆಯ ತಂದೆ ಶಂಕರ ನಾರಾಯಣ ಓರ್ವ ಯಶಸ್ವೀ ವಕೀಲ. ಬನಶಂಕರಿ 2ನೇ ಹಂತದ 23ನೇ ಕ್ರಾಸಿನಲ್ಲಿ ಸ್ವಂತ ಮನೆಯಿತ್ತು, ತಾಯಿ ವಿಜಯಾ ಕೂಡಾ ಸಭ್ಯ ಗೃಹಿಣಿಯೇ. ಸಮಸ್ಯೆ ಶುರುವಾಗಿದ್ದು 2001ರಲ್ಲಿ, ಶುಭಾ ಆ ಹೊತ್ತಿಗೆ ಬಿಎಂಎಸ್ ಕಾನೂನು ಕಾಲೇಜಿನಲ್ಲಿ ತನ್ನ ಅಂತಿಮ ವರ್ಷದ ಎಲ್‌ಎಲ್‌ಬಿ ಓದುತ್ತಿದ್ದಳು. ಅದೇ ಕಾಲೇಜಿನಲ್ಲಿ ಆಕೆಗಿಂತಲೂ ಒಂದು ವರ್ಷದ ಜೂನಿಯರ್ ಆಗಿದ್ದವನು ಅರುಣ್ ವರ್ಮಾ. ಆತ ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರ ಮಗ. ಯಾವ ಮಾಯೆ ಕಾಡಿತ್ತೊ, ಅದ್ಯಾವ ಗಳಿಗೆಯಲ್ಲಿ ಪ್ರೀತಿ ಚಿಗುರಿತೋ ತನ್ನ ಬದುಕಿನ ದುರಂತ ಈ ಪ್ರೀತಿಯ ಮೂಲಕವೇ ಆವರಿಸಲಿದೆಯೆಂಬುದು ಆಕೆಗೆಲ್ಲಿ ಗೊತ್ತಿತ್ತು?

ಅರುಣ್ ಮತ್ತು ಶುಭಾ ಪ್ರಣಯ ಆಕೆಯ ತಂದೆಯ ಕಿವಿ ಮುಟ್ಟಲು ಹೆಚ್ಚು ಸಮಯ ಹಿಡಿಯಲೇ ಇಲ್ಲ, ತಂದೆ ಶಂಕರನಾರಾಯಣರಿಗೆ ಮಗಳ ಸುಖಕ್ಕಿಂತಲೂ ಪ್ರತಿಷ್ಠೆ ಮುಖ್ಯ, ಮಗಳು ಪ್ರೀತಿಸುತ್ತಿದ್ದವನನ್ನು ತಿರಸ್ಕರಿಸಲು ಯಾವುದೇ ಕಾರಣವಿರಲಿಲ್ಲ, ವಿನಾಕಾರಣ ಜಿದ್ದಿಗೆ ಬಿದ್ದರು. ಅರುಣ್‌ನಿಂದ ಮಗಳನ್ನು ಬೇರ್ಪಡಿಸುವ ಅವಸರಕ್ಕೆ ಬಿದ್ದು ತುರ್ತಾಗಿ ಆಕೆಗೆ ಮದುವೆ ಮಾಡಲು ನಿರ್ಧರಿಸಿದ್ದು ಅವರ ಮೊದಲನೆ ತಪ್ಪಾಗಿತ್ತು, ಅದು ಗೊತ್ತಿದ್ದೂ ತನ್ನದೇ ಮನೆ ಪಕ್ಕದ ಗಿರೀಶನ ಜೊತೆ ಮಗಳ ಮದುವೆ ಮುಗಿಸಲು ನಿರ್ಧರಿಸಿದ್ದು ಎರಡನೇ ಯಡವಟ್ಟಾಗಿತ್ತು,

ಕನಿಷ್ಠ ಗಿರೀಶನ ಜೊತೆ ನಿಶ್ಚಿತಾರ್ಥ ಮುಗಿಸುವ ಮುನ್ನ ಒಂದಷ್ಟು ಕಾಲಾವಕಾಶವಾದರೂ ಕೊಟ್ಟಿದ್ದರೆ ಶುಭಾ ದುಡುಕುತ್ತಿರಲಿಲ್ಲವೇನೋ? ಬಿ.ವಿ.ಗಿರೀಶ್ ಶುಭಾಳ ಅಕ್ಕನಿಗೆ ಸಹಪಾಠಿಯಾಗಿದ್ದ ಸಭ್ಯ ಮತ್ತು ಸುಸಂಸ್ಕೃತ. ಸ್ಫುರದ್ರೂಪಿ ಕೂಡ. ತನ್ನೆಲ್ಲ ಒಳ್ಳೆಯತನ ಮುಂದೊಮ್ಮೆ ತನಗೇ ಕುತ್ತಾಗಲಿದೆ ಎಂಬುದು ಆತನಿಗೆಲ್ಲಿ ಅರ್ಥವಾಗಬೇಕು. ತನ್ನದೇ ಬೀದಿಯ ಹುಡುಗಿ. ವಿದ್ಯಾವಂತೆ. ತಂದೆ ಖ್ಯಾತ ವಕೀಲ. ಜೊತೆಗೆ ಸುಂದರಿ. ಅದ್ಯಾವ ದುರ್ಘಳಿಗೆಯಲ್ಲಿ ಶುಭಾಳ ತಂದೆ ಮದುವೆಯ ಪ್ರಸ್ತಾಪವಿಟ್ಟರೋ ಗಿರೀಶ್ ಕ್ಷಣ ಕೂಡ ಯೋಚಿಸದೇ ಒಪ್ಪಿಕೊಂಡುಬಿಟ್ಟ.

ಅದು 2003ರ ನವೆಂಬರ್ 30. ಶಂಕರನಾರಾಯಣರ ಮನೆಯಲ್ಲೇ ನಿಶ್ಚಿತಾರ್ಥ ನಡೆದಿತ್ತು, ಶುಭಾಳ ತಂದೆ, ತಾಯಿ ವಿಜಯಾ, ಅಕ್ಕ ಹೇಮಾ, ಗಿರೀಶನ ತಂದೆ ವೆಂಕಟೇಶ್, ತಾಯಿ ಪುಷ್ಪವಲ್ಲಿ, ಅಣ್ಣ ರಮೇಶ್, ಅಕ್ಕ ಸುನೀತಾ, ಅತ್ತಿಗೆ ನಾಗರತ್ನ ಮತ್ತು ಇಡೀ ಬಂಧುಬಳಗವೆಲ್ಲ ನಿಶ್ಚಿತಾರ್ಥಕ್ಕೆ ಸಾಕ್ಷಿಯಾಗಿತ್ತು, ಬಹುಶಃ ಶುಭಾ ಎಡವಿದ್ದು ಇಲ್ಲೇ. ಮನೆಯವರ ಬಲವಂತಕ್ಕೆ ಮಣಿದು ತಾನು ಮದುವೆಯಾಗುತ್ತಿದ್ದೇನೆಂಬುದನ್ನು ಆಕೆ ಮೊದಲೇ ಹೇಳಿಬಿಟ್ಟಿದ್ದರೆ ಗಿರೀಶ್ ಬಚಾವಾಗುತ್ತಿದ್ದ, ತಾನು ನೇರವಾಗಿ ಹೇಳದೇ ಹೋದರೂ ಪ್ರಿಯಕರ ಅರುಣ್‌ನನ್ನು ಮುಂದೆ ಬಿಟ್ಟು ಹೇಳಿಸಬಹುದಿತ್ತು, ಕನಿಷ್ಠ ಗಿರೀಶನ ಅಕ್ಕ ಸುನೀತಾಳ ಜೊತೆ ಆತ್ಮೀಯತೆಯಿತ್ತಲ್ಲ; ಆಕೆಯ ಜೊತೆಗಾದರೂ ನೋವು ತೋಡಿಕೊಳ್ಳಬಹುದಿತ್ತು, ಇದ್ಯಾವುದನ್ನೂ ಶುಭಾ ಮಾಡಲೇ ಇಲ್ಲ, ಒಲ್ಲದ ಮನಸ್ಸಿನಿಂದಲೇ ನಿಶ್ಚಿತಾರ್ಥಕ್ಕೆ ಒಪ್ಪಿಕೊಂಡ[illegible] ಮನೆಯ ಮರ್ಯಾದೆ, ತಂದೆಯ ಪ್ರತಿಷ್ಠೆ, ತಾಯಿ[illegible] ಹಂಗು, ಸಂಬಂಧಿಕರ ಮುಲಾಜುಗಳೆಲ್ಲವೂ ಆಕೆಯ[illegible] ಕಟ್ಟಿಹಾಕಿತ್ತು, ಯಾವತ್ತು ನಿಶ್ಚಿತಾರ್ಥ ಮುಗಿಯಿತೋ[illegible] ಇತ್ತ ಪ್ರಿಯಕರನ ತಲೆಕೆಟ್ಟಿದೆ. ಹೇಗೋ ಕಾನೂ[illegible] ವಿದ್ಯಾರ್ಥಿಯಾಗಿದ್ದನಲ್ಲ, ಘಾತಕ ಮನಸ್ಸು ಜಾಗೃತಗೊಂಡಿ[illegible] ಗಿರೀಶನನ್ನು ಮುಗಿಸಿಬಿಟ್ಟರೆ ಶುಭಾ ಶಾಶ್ವತವಾಗಿ [illegible] ಪಾಲಾಗುತ್ತಾಳೆಂದು ಅರುಣ್ ನಿರ್ಧರಿಸಿದ್ದಾನೆ.


ಶುಭಾ

ಪೆದ್ದಿ ಶುಭಾ ವ್ಯಾಮೋಹಕ್ಕೆ ಬಿದ್ದು ವಿವೇಕಹಿ[illegible]ಳಾಗಿದ್ದಾಳೆ. ನಿರ್ಜನ ಪ್ರದೇಶದಲ್ಲಿ ಗಿರೀಶನನ್ನು ಮುಗಿಸಿಬಿ[illegible] ಯಾರೋ ರಾಬರಿಗಳು ಮಾಡಿದ ಕೊಲೆಯೆಂ[illegible] ಪೊಲೀಸರು ದಿಕ್ಕು ತಪ್ಪುತ್ತಾರೆಂದು ಅರುಣ್ ಹೇಳಿದ್ದ[illegible] ಶುಭಾ ನಂಬಿದ್ದಾಳೆ. ಖುದ್ದು ವಕೀಲೆಯಾಗಿದ್ದು ಅ[illegible] ಪರಿಣಾಮ ಏನಾಗಬಹುದೆಂಬ ಲೆಕ್ಕಾಚಾರ ಕೂ[illegible] ಆಕೆಗಿರಲಿಲ್ಲ, ಕೊಲ್ಲುವುದಕ್ಕೆಂದೇ ಅರುಣ್ ತನ್ನ ಸೋದರತ್ತೆ ಮಗ ದಿನೇಶ್ ಅಲಿಯಾಸ್ ದಿನಕರ್‌ನನ್ನು ರೆಡಿ ಮಾಡಿದ[illegible] ಆತನ ಜೊತೆಗಿರಲಿ ಎಂದು ತನ್ನ ಗೆಳೆಯ ವೆಂಕಟೇಶ್‌ನ[illegible] ಒಪ್ಪಿಸಿದ್ದಾನೆ.

ಬೆಲಿಗೆ ಸ್ಥಳ ಅಂತ ಗೊತ್ತಾದದ್ದು ಕೋರಮಂಗ[illegible] ರಿಂಗ್‌ರಸ್ತೆಯ ಏರ್‌ವ್ಯೂವ್ ಪಾಯಿಂಟು. ಇಂದಿರಾನ[illegible] ಕೋರಮಂಗಲ ರಿಂಗ್ ರಸ್ತೆಯಲ್ಲಿನ ಟಿಜಿಐಎಫ್ ರೆಸ್ಟೋ[illegible]ರೆಂಟ್‌ನಲ್ಲಿ ಕೂತು ಪಾರ್ಟಿ ಮಾಡುತ್ತಿದ್ದರೆ ಪಕ್ಕದ[illegible] ಇರುವ ಏರ್‌ಪೋರ್ಟ್‌ನ ವಿಮಾನಲಂಘನವನ್ನು ಕಣ[illegible] ನೋಡಬಹುದು. ದೇಶ-ವಿದೇಶದ ವಿಮಾನಗಳು ಬಂ[illegible] ಇಳಿಯುವುದು, ಜಿಗಿಯುವುದನ್ನು ಅತ್ಯಂತ ಸಮೀಪದಿ[illegible] ನೋಡುವುದು ತನಗೆ ಖಯಾಲಿಯೆಂದೂ ಡಿಸೆಂಬ[illegible] 3ರ ರಾತ್ರಿ ಅಲ್ಲೇ ಪಾರ್ಟಿ ಮಾಡೋಣವೆಂದೂ ಶು[illegible] ಗಿರೀಶನನ್ನು ಒಪ್ಪಿಸಿದ್ದಾಳೆ. ಅಷ್ಟಕ್ಕೆ ಪುಳಕಿತನಾದ ಗಿರಿ[illegible] ಒಪ್ಪಿಬಿಟ್ಟ.

ಅದು ಡಿಸೆಂಬರ್ 3ರ ರಾತ್ರಿ ಹತ್ತೂವರೆಯ ಹೊ[illegible] ನಿಶ್ಚಿತಾರ್ಥದ ಸಂತೋಷಕ್ಕೆಂದು ಗಿರೀಶನನ್ನು ಏರ್‌ಪೋ[illegible] ಪಕ್ಕದ ರೆಸ್ಟೋರೆಂಟ್‌ಗೆ ಪಾರ್ಟಿಗೆಂದು ಶುಭಾ ಕರೆದಿ[illegible] ಗಿರೀಶ್ ಹಿಂದುಮುಂದು ನೋಡದೇ ಬಂದುಬಿಟ್ಟ[illegible] ವ್ಯೂ ಪಾಯಿಂಟ್ ಬಳಿಯ ನಿರ್ಜನ ರಿಂಗ್‌ರಸ್ತೆಯ[illegible] ಗಿರೀಶ್ ಮತ್ತು ಶುಭಾ ಇಬ್ಬರೇ ವಿಮಾನ ಇಳಿಯುತ್ತಿದ್ದ[illegible] ತಲ್ಲೀನರಾಗಿ ನೋಡುತ್ತಿದ್ದರೆ ಎರಡು ಆಕೃತಿಗಳು ಸದ್ದಿಲ್ಲ[illegible] ಎದ್ದು ನಿಂತವು. ಅದು ದಿನೇಶ್ ಮತ್ತು ವೆಂಕಟೇಶ್[illegible]

ಏನಾಗುತ್ತಿದೆ ಎಂದು ಅರಿವಾಗುವ ಮೊದಲೇ ಗಿರಿ[illegible] ಕುಸಿದು ಬಿದ್ದಿದ್ದ. ಹಿಂದಿನಿಂದ ವೆಂಕಟೇಶ್ ಶ[illegible] ಅಬ್ಸಾರ್ಬರ್‌ನ ರಾಡ್‌ನಿಂದ ಅದೆಷ್ಟು ಬಲವಾಗಿ ಹೊಡೆ[illegible] ನೆಂದರೆ; ಒಂದೇ ಏಟಿಗೆ ಗಿರೀಶನ ತಲೆಚಿಪ್ಪೇ ಪುಡಿಯ[illegible] ಹೋಗಿತ್ತು, ಬಿದ್ದ ಗಿರೀಶನ ತಲೆಗೆ ದಿನೇಶ್ ಎರಡ[illegible] ಏಟು ಹಾಕಿದ. ಶುಭಾ ಏನೂ ಗೊತ್ತಿಲ್ಲದವಳಂತೆ ನ[illegible] ಹೆಲ್ಪ್ ಹೆಲ್ಪ್ ಎಂದು ಕಿರುಚಿಕೊಂಡಳು. ಅದೇ ಹೊ[illegible] ನಿವೃತ್ತ ಮಿಲಿಟರಿ ಅಧಿಕಾರಿ ಥಾಮಸ್ ಮತ್ತು ಅ[illegible] ಸ್ನೇಹಿತ ಟಾಲಿಉಕ್ಸನ್ ಅದೇ ರಸ್ತೆಯಲ್ಲಿ ತಮ್ಮ ಕಾರಿ[illegible] ಪಾಸ್ ಆಗುತ್ತಿದ್ದವರು ಗದ್ದಲ ಕೇಳಿದ್ದೇ ನೆರವಿಗೆ ಧಾವಿಸಿದ[illegible] ವೆಂಕಟೇಶ್ ಮತ್ತು ದಿನೇಶ್ ಸೇರಿಕೊಂಡು ಗಿರೀಶನ[illegible] ಹೊಡೆಯುತ್ತಿದ್ದದ್ದನ್ನು ಕಣ್ಣಾರೆ ನೋಡಿದ್ದಾರೆ. ತಕ್ಷಣ[illegible]

ಕೊರಕೊರಗಿಯೇ ಪ್ರಾಣಬಿಟ್ಟರು ಗಿರೀಶ್‌ನ ತಂದೆ


ಯಾವ ಪಾಪವನ್ನೂ ಮಾಡದೇ ವಿನಾಕಾರಣ ಕುಟುಂಬವೊಂದು ಹೇಗೆ ವಿನಾಶಕ್ಕೆ ಸಿಲುಕುತ್ತದೆ ಎಂಬುದಕ್ಕೆ ಗಿರೀಶ್‌ನ ಮನೆಯೇ ಉದಾಹರಣೆಯಂತಿದೆ. ಶುಭಾ ಜೊತೆಗಿನ ನಿಶ್ಚಿತಾರ್ಥಕ್ಕೂ ಮುನ್ನ ಗಿರೀಶನ ಮನೆಯಲ್ಲಿ ಸಂತೋಷವಿತ್ತು, ಗಿರೀಶ್‌ನ ತಂದೆ ವೆಂಕಟೇಶ್ ವಾಯುಸೇನೆಯಲ್ಲಿದ್ದು ನಿವೃತ್ತರಾಗಿದ್ದರು. ಅಣ್ಣ ರಮೇಶ್‌ಗೆ ಒಳ್ಳೆಯ ಉದ್ಯೋಗವಿತ್ತು, ಅಕ್ಕ ಸುನೀತಾಳ ಸಂಸಾರ ಕೂಡ ಸುಖವಾಗೇ ಸಾಗಿತ್ತು,

ಅದ್ಯಾವ ಗಳಿಗೆಯಲ್ಲಿ ಶುಭಾಳ ಎಂಟ್ರಿಯಾಯಿತೋ ದುರಂತಗಳು ಒಂದರ ಮೇಲೊಂದಾಗಿ ಅಪ್ಪಳಿಸಿದವು. ಗಿರೀಶ್ ಕೊಲೆಯಾಗಿದ್ದೇ ಕೊನೆ ಆ ಮನೆಯ ದೀಪವೇ ಆರಿಹೋಗಿತ್ತು, ಮಗನ ಸಾವಿನ ಕೊರಗಿನಲ್ಲೇ ತಂದೆ ವೆಂಕಟೇಶ್ ಹಾಸಿಗೆ ಹಿಡಿದರು. ಅಣ್ಣ ರಮೇಶ್ ಕೋರ್ಟ್‌ಗೆ ಅಲೆದಲೆದೇ ಇದ್ದ ಕೆಲಸ ಕಳಕೊಂಡರು. ಕೋರ್ಟ್‌ನ ಓಡಾಟ ಮತ್ತು ಸಾಕ್ಷಿ ವ್ಯವಸ್ಥೆಗೆಂದೇ ಅಕ್ಕ ಸುನೀತಾ ಖರೀದಿಸಿದ್ದ ಸೈಟು ಮಾರಿಕೊಂಡಳು. ತಾಯಿ ಪುಷ್ಪವಲ್ಲಿ ಕೂಡಾ ಕೊರಗಿಗೆ ಬಿದ್ದು ಹಾಸಿಗೆ ಹಿಡಿದರು. ಇಡೀ ಕುಟುಂಬ ಗಿರೀಶ್ ಹಂತಕರಿಗೆ ಶಿಕ್ಷೆ ಕೊಡಿಸಲು ಅದೆಂಥಾ ಹೆಣಗಾಟಕ್ಕಿಳಿಯಿತೆಂದರೆ ಆರ್ಥಿಕ ಸಂಕಷ್ಟ, ಮನೆಯ ದುರವಸ್ಥೆ, ಮಗನ ಅಗಲಿಕೆಯ ಶೋಕಕ್ಕೆ ಸಿಲುಕಿದ ತಂದೆ ವೆಂಕಟೇಶ್ 2007ರ ಡಿಸೆಂಬರ್ 18ರಂದು ಕೊರಗಿಗೇ ಬಿದ್ದೇ ಸತ್ತು ಹೋದರು. ಗಿರೀಶ್ ಕೊಲೆಯಾಗಿ ಆ ಹೊತ್ತಿಗೆ ನಾಲ್ಕು ವರ್ಷಗಳಾಗಿದ್ದವು. ಈ ನಾಲ್ಕು ವರ್ಷಗಳ ಪೈಕಿ ಮೂರು ವರ್ಷಗಳ ಕಾಲ ವೆಂಕಟೇಶ್ ಕೋರ್ಟು, ಪೊಲೀಸ್ ಠಾಣೆ, ವಕೀಲರ ಕಚೇರಿ, ಸಾಕ್ಷಿಗಳ ಮನೆಗೆ ಅಲೆದಲೆದೇ ಹೈರಾಣಾಗಿದ್ದರು.

ಒಂದು ಕೊಲೆ, ಅದೇ ಕೊರಗಿಗೆ ಸಂಭವಿಸಿದ ತಂದೆಯ ಸಾವು, ಹಾಸಿಗೆ ಹಿಡಿದ ತಾಯಿ, ಮಾಡಿಕೊಂಡ ಸಾಲ, ಹಾಕಿದ ಕಣ್ಣೀರು, ಪಟ್ಟ ಪಡಿಪಾಟಲು ಎಲ್ಲಕ್ಕೂ ಸಿಕ್ಕ ಏಕೈಕ ಪರಿಹಾರವೆಂದರೆ ಜುಲೈ 14ರ ತೀರ್ಪು. ಗಿರೀಶ್ ಅಣ್ಣ ರಮೇಶ್ ಟಿವಿ ಕ್ಯಾಮೆರಾಗಳ ಮುಂದೆ 'ಜನಸಾಮಾನ್ಯರಿಗೂ ಕೋರ್ಟು ನ್ಯಾಯ ಕೊಡುತ್ತದೆ ಎಂಬುದಕ್ಕೆ ಈ ತೀರ್ಪೇ ಸಾಕ್ಷಿ...' ಎಂದದ್ದು ಉತ್ಪ್ರೇಕ್ಷೆ ಎನ್ನಿಸಬಹುದು. ಆದರೆ ಅದಕ್ಕಾಗಿ ಅವರ ಮನೆಯವರೆಲ್ಲ ಅನುಭವಿಸಿದ ನೋವಿದೆಯಲ್ಲ ಅದಕ್ಕೆ ಪರಿಹಾರವುಂಟೇ?

ನರಳುತ್ತಿದ್ದ ಗಿರೀಶನನ್ನು ಮಣಿಪಾಲ್ ಆಸ್ಪತ್ರೆಗೆ ಸಾಗಿಸಿದ್ದಾರೆ.

ಆದರೆ ಆಸ್ಪತ್ರೆಗೆ ಬರುವ ಹೊತ್ತಿಗಾಗಲೇ ಗಿರೀಶ್ ಅರೆಜೀವವಾಗಿದ್ದ. ಮಣಿಪಾಲ್ ಆಸ್ಪತ್ರೆಯ ವೈದ್ಯರು ಏನೇ ಸರ್ಮಾಹಸಗೈದರೂ ಆತ ಬದುಕುಳಿಯುವಂತಿರಲಿಲ್ಲ. ಶಾಕ್ ಅಬ್ಸಾರ್ಬರ್‌ನ ಪೆಟ್ಟು ಅಷ್ಟೊಂದು ಬಲವಾಗಿತ್ತು. ಆಗ ಏರ್‌ಪೋರ್ಟ್ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದವರು ಹುಬ್ಬಳ್ಳಿಯ ದಾವೂದ್ ಖಾನ್. ಮೊದಮೊದಲು ಯಾರೋ ರಾಬರಿಗಳೇ ಮಾಡಿದ ಕೊಲೆಯೆಂದು ನಿರ್ಧರಿಸಿದ ಪೊಲೀಸರಿಗೆ ಕೆದಕುತ್ತಾ ಹೋದಂತೆಲ್ಲ ಗಿರೀಶ್ ಹತ್ಯೆಗೆ ಬೇರೆಯದೇ ಕಾರಣವಿದೆಯೆಂಬುದು



ನಿಶ್ಚಿತಾರ್ಥದಲ್ಲಿ ಗಿರೀಶ್ ಮತ್ತು ಶುಭಾ

ಗೋಚರಿಸಲಾರಂಭಿಸಿತ್ತು. ಹಾಗೊಮ್ಮೆ ರಾಬರಿಗಾಗೇ ಗಿರೀಶನನ್ನು ಕೊಂದಿದ್ದರೆ ಆತನ ಜೊತೆಗಿದ್ದ ಶುಭಾಗೆ ಸಣ್ಣ ಪೆಟ್ಟಾದರೂ ಬೀಳಬೇಕಿತ್ತು.

ವಿಶೇಷವೆಂದರೆ ಅಷ್ಟೊಂದು ಬರ್ಬರವಾಗಿ ಗಿರೀಶನನ್ನು ಕೊಂದಿದ್ದ ಹಂತಕರು ಆತನ ಬಳಿಯಿದ್ದ ಲ್ಯಾಪ್‌ಟಾಪ್, ಪರ್ಸು, ಅದರಲ್ಲಿದ್ದ ದುಡ್ಡು, ಧರಿಸಿದ್ದ ಚಿನ್ನಾಭರಣ ಇತ್ಯಾದಿ ಯಾವೊಂದನ್ನೂ ಮುಟ್ಟೇ ಇರಲಿಲ್ಲ. ನಡೆದ ಘಟನೆಯ ಬಗ್ಗೆ ಶುಭಾಳ ಹೇಳಿಕೆ ಅನುಮಾನಾಸ್ಪದವಾಗಿತ್ತು. ಕ್ವಚಿತ್ತಾಗಿ ಯಾರೋ ರೌಡಿಗಳು, ರಾಬರಿಗೆ ಬಂದಿದ್ದರು ಎಂದು ತಾನೇ ನಿರ್ಧರಿಸಿದವಳಂತೆ ಪೊಲೀಸರೆದುರು ವಾದಿಸುತ್ತಿದ್ದಳು. ಅವರು ರೌಡಿಗಳು ಅನ್ನೋದು ನಿನಗೆ ಹೇಗೆ-ಗೊತ್ತು ಎಂದರೆ 'ರೌಡಿಗಳಲ್ಲದೇ ಇನ್ನಾರು ಸಾರ್ ಮಾಡ್ತಾರೆ?' ಎಂದು ಪೆದ್ದುಪೆದ್ದಾಗಿ ಕೇಳುತ್ತಿದ್ದಳು.



ಹಂತಕರಾದ ವೆಂಕಟೇಶ್ ಮತ್ತು ದಿನೇಶ್

ಆಗಲೇ ಇನ್ಸ್‌ಪೆಕ್ಟರ್ ದಾವೂದ್ ಖಾನ್‌ಗೆ ಅನುಮಾನ ಶುರುವಾಗಿದೆ. ಸದ್ದಿಲ್ಲದೇ ಆಕೆಯ ಮೊಬೈಲ್ ಅನ್ನು ಟ್ಯಾಪ್ ಮಾಡಿದ್ದಾರೆ. ಡಿಸೆಂಬರ್ 3ರ ಹಿಂದುಮುಂದಿನ ಆಕೆಯ ಕಾಲ್ ಡಿಟೇಲ್ಸ್ ತರಿಸಿಕೊಂಡರೆ, ಪ್ರಿಯಕರ ಅರುಣ್‌ನ ಮೊಬೈಲ್‌ಗೆ ಅಸಂಖ್ಯಾತ ಕಾಲ್‌ಗಳು ಹೋಗಿದ್ದವು. ಗಿರೀಶ್‌ನ ಕೊಲೆ ನಡೆಯುವುದಕ್ಕೂ ಕೆಲವೇ ಕ್ಷಣಗಳ ಮುನ್ನ ಆಕೆ ತಾನು ಮತ್ತು ಗಿರೀಶ್ ಇಂಥಲ್ಲೇ ಇದ್ದೇವೆ, ಇಷ್ಟೇ ಹೊತ್ತಿಗೆ ಮನೆಬಿಟ್ಟದ್ದೇವೆ, ಇಂಥದ್ದೇ



ಜೈಲಿನ ದಾರಿಯಲ್ಲಿ ಶುಭಾ

ಜಾಗಕ್ಕೆ ಬಂದಿದ್ದೇವೆ ಇತ್ಯಾದಿ ಪ್ರತಿಯೊಂದನ್ನೂ ಅರುಣ್‌ನ ಮೊಬೈಲ್‌ಗೆ ಎಸ್ಸೆಮ್ಮೆಸ್ ಮಾಡುತ್ತಿದ್ದಳು. ದಾಳಿಗೂ ಮುನ್ನ ಹಂತಕರಾದ ವೆಂಕಟೇಶ್ ಮತ್ತು ದಿನೇಶ್ ಜೊತೆ ಮಾತಾಡಿದ್ದಳು. ಕೊಲೆಯ ನಂತರ ಅರುಣ್, ದಿನೇಶ್ ಮತ್ತು ವೆಂಕಟೇಶ್‌ನ ಮೊಬೈಲ್‌ಗೆ ಆಕೆಯ ಮೊಬೈಲಿನಿಂದ ಸಿಕ್ಕಾಪಟ್ಟೆ ಕರೆಗಳು ಹೋಗಿದ್ದವು.

ಶುಭಾಳ ಮೊಬೈಲ್‌ನ ಕಾಲ್ ಡಿಟೇಲ್ಸ್ ಒಂದೇ ಇಡೀ ಷಡ್ಯಂತ್ರವನ್ನು ಬಗೆದಿಟ್ಟಿತ್ತು. ಕೊಲೆ ನಡೆದು ಒಂದೂವರೆ ತಿಂಗಳಾಗುತ್ತಿದ್ದಂತೆ ಹೆಚ್‌ಎಎಲ್ ಪೊಲೀಸರು ಶುಭಾ ಸೇರಿದಂತೆ ಆಕೆಯ ಪ್ರಿಯಕರ ಅರುಣ್ ಮತ್ತು ಇನ್ನಿಬ್ಬರು ಹಂತಕರನ್ನು ನಿರಾಯಾಸವಾಗಿ ಬಂಧಿಸಿ ತಂದಿದ್ದರು. ಶುಭಾಳಿಗೂ ಮೊದಲೇ ಅರುಣ್ ಬಾಯಿಬಿಟ್ಟಿದ್ದ!

ಅಷ್ಟಾಗ್ಯೂ ತಾನು ಕಾನೂನಿನ ಕಣ್ಣಿಗೆ ಮಣ್ಣೆರಚಬಹುದೆಂದೇ ಶುಭಾ ಲೆಕ್ಕಹಾಕಿದ್ದಳು. ಕೋರ್ಟು ಮೊಬೈಲ್ ಫೋನಿನ ತಾಂತ್ರಿಕ ಅಂಶಗಳನ್ನು ಸಾಕ್ಷ್ಯವಾಗಿ ಪರಿಗಣಿಸುವುದಿಲ್ಲವಾದ್ದರಿಂದ ತಾನು ನಿರಾಯಾಸವಾಗಿ ಬಚಾವಾಗಬಹುದೆಂದು ಭಾವಿಸಿದ್ದಳು. ಮೂರು ತಿಂಗಳು ಜೈಲಿನಲ್ಲಿ ಕಳೆದು ಜಾಮೀನಿನ ಮೇಲೆ ಹೊರಬಂದು ತಂದೆಯ ಜೊತೆಗೆ ಕರಿಕೋಟು ಧರಿಸಿಕೊಂಡು ಕೋರ್ಟ್‌ಗೆ ಬರುತ್ತಿದ್ದಳು. ಅರುಣ್ ಕೂಡಾ ಜಾಮೀನು ಗಿಟ್ಟಿಸಿ ಹೊರಬಂದಿದ್ದ. ತನ್ನ ಮಗಳ ಪರವಾಗಿ ಶಂಕರನಾರಾಯಣ ಖ್ಯಾತ ವಕೀಲ ಸಿ.ವಿ.ನಾಗೇಶರನ್ನು ನೇಮಿಸಿಕೊಂಡಿದ್ದ. ಅರುಣ್ ಮತ್ತೊಬ್ಬ ವಕೀಲ ಹನುಮಯ್ಯನವರನ್ನು ವಕಾಲತ್ತಿಗೆ ಬಿಟ್ಟ. ವೆಂಕಟೇಶ್ ತನ್ನ ಪರವಾಗಿ ಪ್ರಕಾಶ್ ಎಂಬ ಪ್ರತ್ಯೇಕ ವಕೀಲರನ್ನಿಟ್ಟ. ಆದರೆ ಕೊಲೆಯಾದ ಗಿರೀಶನ ಅಣ್ಣ ರಮೇಶ್ ಮತ್ತು ಅಕ್ಕ ಸುನೀತಾ ಮಾತ್ರ ಬಿಡಲೇ ಇಲ್ಲ. ಸರ್ಕಾರಕ್ಕೆ ಅರ್ಜಿ ಕೊಟ್ಟು ನಿಷ್ಣಾತ ವಕೀಲ ವೆಂಕಟರಾವ್‌ರನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಿಕೊಂಡದ್ದು ಶುಭಾ ಮತ್ತು ಅರುಣ್ ಪಾಲಿಗೆ ದೊಡ್ಡ ತಲೆನೋವಾಯಿತು.

ಸಣ್ಣಪುಟ್ಟ ಸಾಕ್ಷ್ಯವನ್ನೂ ಬಿಡದೇ ತಮ್ಮ ವಾದಕ್ಕೆ ಬಳಸಿಕೊಂಡ ವೆಂಕಟರಾವ್ ಕೊಲೆ ನಡೆದಾಗ ಅರುಣ್, ಶುಭಾ, ವೆಂಕಟೇಶ್ ಮತ್ತು ದಿನೇಶ್‌ರ ಮೊಬೈಲ್‌ಗಳೆಲ್ಲವೂ ಏರ್‌ಪೋರ್ಟ್ ಪಕ್ಕದ ಟಿಜಿಐಎಫ್ ಟವರ್‌ನಿಂದಲೇ ಕಾರ್ಯ ನಿರ್ವಹಿಸಿದ್ದನ್ನು ಅತೀ ಮುಖ್ಯ ಸಾಕ್ಷ್ಯವನ್ನಾಗಿ ನಿರೂಪಿಸಿದ್ದರು. ಇದರರ್ಥ ಕೊಲೆಯ ಸಂದರ್ಭದಲ್ಲಿ ನಾಲ್ವರೂ ಒಂದೇ ಸ್ಥಳದಲ್ಲಿದ್ದರು ಮತ್ತು ಕೊಂದವರು ಶುಭಾಳ ಒಡವೆ, ತಂದಿದ್ದ ಕೈನೆಟಿಕ್, ಪರ್ಸ್‌ನಲ್ಲಿದ್ದ ದುಡ್ಡು ಯಾವುದನ್ನೂ ಮುಟ್ಟದೇ ಇದ್ದದ್ದು!

ಸತತ ಏಳು ವರ್ಷಗಳ ಕಾಲ ನಡೆದ ಸುದೀರ್ಘ ಕಾನೂನಿನ ಕಸರತ್ತಿನಲ್ಲಿ ಸಿ.ವಿ.ನಾಗೇಶ್ ತನ್ನನ್ನು ಬಚಾವು ಮಾಡುತ್ತಾರೆಂದೇ ಶುಭಾ ಲೆಕ್ಕ ಹಾಕಿದ್ದು 2010ರ ಜುಲೈ 13ಕ್ಕೆ ಸುಳ್ಳಾಗಿತ್ತು. ಜಡ್ಜ್ ಒಂಟಿಗೋಲಿ ಶುಭಾ ಸೇರಿದಂತೆ ನಾಲ್ವರನ್ನೂ ಅಪರಾಧಿಗಳೆಂದು ತೀರ್ಪಿತ್ತಾಗಿತ್ತು. ಅದರ ಮರುದಿನವೇ ಜೀವಾವಧಿ ಶಿಕ್ಷೆ ವಿಧಿಸಿಬಿಟ್ಟರು. ಇನ್ನೂ 28ರ ಹರೆಯ. ತುಂಬು ಯೌವನ, ಕ್ಷಣಚಿತ್ತದ ಪ್ರಣಯದ ಮತ್ತು ಶುಭಾ ಎಂಬ ಸುಂದರಿಯ ಬದುಕನ್ನೇ ಹೊಸಕಿಹಾಕಿತ್ತು. ಪ್ರಿಯಕರ ಅರುಣ್‌ನ ಮುಖದಲ್ಲಿ ಪಶ್ಚಾತ್ತಾಪ ತಾಂಡವವಾಡುತ್ತಿತ್ತಾದರೂ ಕಾಲ ಮಿಂಚಿಹೋಗಿತ್ತು. ಓರ್ವ ವಕೀಲೆಯಾಗಿ, ಕಾನೂನಿನ ಪರಿವೆಯಿದ್ದೂ ಶುಭಾ ಏಕೆ ತನ್ನ ಬದುಕಿಗೆ ಬೆಂಕಿಯಿಟ್ಟುಕೊಂಡಳು? ಏನೂ ತಪ್ಪು ಮಾಡದ ಗಿರೀಶನನ್ನು ಯಾಕಿಷ್ಟು ನಿರ್ದಯವಾಗಿ ಕೊಲ್ಲಿಸಿದಳು?

ಮೋಹ ಇಷ್ಟೊಂದು ಮೋಸವೇ? ಸುಂದರಿಯೊಳಗೂ ಸೈತಾನ ಇರುತ್ತಾನಾ?

ಗಿರೀಶನ ಸಾವಿಗೆ, ಶುಭಾಳ ಪಾಡಿಗೆ ವಿಷಾದವಲ್ಲದೇ ಬೇರೇನು ತಾನೇ ಸಾಧ್ಯ? ●

ಅಸೆಂಬ್ಲಿಗೂ ಬಂತೂ ರೌಡಿಜಮ್

* ಏಯ್... ಬಾರೋ ಬೋ... ಮಗನೆ, ತಾಕತ್ತಿದ್ರೆ ಬಳ್ಳಾರಿಗೆ ಬಾರೋ. ಬಂದು ನೀನು ವಾಪಸ್ಸು ಹೋಗ್ತೀಯಾ?

* ಏಯ್; ಸೂ... ಮಕ್ಳಾ, ಏನ್ ಶಾ.... ಕಿತ್ತು ಕೋತೀರಾ? ಬಳ್ಳಾರಿಯವ್ರು ಏನು ಅಂತ ತೋರಿಸ್ತೀವಿ ಬನ್ರೋ....!


* ನಿಮ್ಮನ್ನೆಲ್ಲಾ ಮುಗಿಸ್ದೇ ಬಿಡ್ತೀವಿ ಅಂದ್ಕೊಂಡಿದೀರಾ? ಇಲ್ಲೇನೋ ಮಾತಾಡೋದು? ಬಾರೋ ಬೀದಿಗೆ, ಅಲ್ಲಿ ತೋರ್ಸ್ರೋ ನಿನ್ನ ಗಂಡಸ್ತನಾನಾ?


* ಹೌದು ಕಣ್ರೋ ನಾವಿರೋದೇ ಹಂಗೆ. ಬಳ್ಳಾರಿಗೆ ಬಂದು ಜೀವಂತ ವಾಪಸ್ಸು ಹೋಗ್ತಿಯೇನೋ....?

ಅಥವಾ ರೌಡಿ ಅಡ್ಡೇನಾ? ಎಂದು ಅವಾಕ್ಕಾಗಿ ಪ್ರಶ್ನಿಸುತ್ತಿದ್ದಂತೆ ಕರುಣಾಕರ ರೆಡ್ಡಿ ರಕ್ಕಸ ರೂಪ ತಾಳಿಬಿಟ್ಟ.

ಕೇಳುವುದಕ್ಕೂ, ಬರೆಯುವುದಕ್ಕೂ ಅಸಹ್ಯಕರ ಶಬ್ದಗಳನ್ನು ಬಳಸಿದ ಕರುಣಾಕರ ರೆಡ್ಡಿ ಇನ್ನೇನು ಸಿದ್ಧರಾಮಯ್ಯ ಡೀಕೆಯನ್ನು ಹಿಡಿದು ಹೊಡೆದೇ ಬಿಟ್ಟ ಅನ್ನುವಾಗಲೇ ಬಿಜೆಪಿಯ ಲಿಂಬಾವಳಿ, ಸಿ.ಟಿ. ರವಿ, ಸುರೇಶ್‌ಕುಮಾರ್ ಮುಂತಾದ ಶಾಸಕರು ಅಡ್ಡ ನಿಂತು ಕಾಂಗ್ರೆಸ್ ಶಾಸಕರ ರಕ್ಷಣೆಗೆ ನಿಂತುಬಿಟ್ಟರು.

ಆದರೆ ಇದೆಲ್ಲಕ್ಕಿಂತಲೂ ಅಸಹ್ಯಕ್ಕೆ ಕೂಡ್ಲಿಗಿ ಶಾಸಕ ನಾಗೇಂದ್ರ ಕೈಯಿಟ್ಟಿದ್ದ. ದಿನೇಶ್ ಗುಂಡೂರಾವ್ ಕಾಲರ್ ಪಟ್ಟಿಯನ್ನೇ ಹಿಡಿದು ಹೊಡೆಯುವವನಂತೆ ಏರಿಹೋದ ನಾಗೇಂದ್ರ ಏಯ್ ಗಾಂಡೂ... ನಿನ್ನಮ್ಮನ್, ನಿನ್ನಕ್ಕನ್; ಗಂಡಸೇನ್ರೋ ನೀವೆಲ್ಲಾ? ಬಳ್ಳಾರಿಗೆ ಬಂದು ಜೀವಂತ





ಜೈಲಿನ ಕೈದಿಗಳ ಬ್ಯಾರಕ್ಕಿನಲ್ಲೋ, ಇನ್ನಾರೋ ರೌಡಿಯೊಬ್ಬನ ಅಡ್ಡೆಯಲ್ಲೋ ಅಥವಾ ಎರಡು ರೌಡಿ ಗ್ಯಾಂಗುಗಳ ನಡುವಿನ ಹೊಡೆದಾಟದ ಮಧ್ಯೆಯೋ ಇಂಥ ಮಾತುಗಳನ್ನು ಕೇಳಿದ್ದರೆ ಅದಕ್ಕೊಂದು ಸಮರ್ಥನೆಯಿರುತ್ತಿತ್ತು. ಆದರೆ ಈ ಎಲ್ಲಾ ಬಯ್ಗುಳ ಕೇಳಿಬಂದದ್ದು ಕರ್ನಾಟಕದ ವಿಧಾನಸಭೆಯಲ್ಲಿ, ಜುಲೈ 9 ರ ಶುಕ್ರವಾರ ಸಂಜೆಯ ಅಸೆಂಬ್ಲಿ ರೌಡಿಜಮ್ಮಿನ ಅಸಹ್ಯಕ್ಕೆ ಬಹುಶಃ ಅಲ್ಲಿದ್ದ ಹಿರಿಯರ ಭಾವಚಿತ್ರಗಳೂ ಕೂಡ ನಾಚಿಕೆ ಪಟ್ಟಿರಲೇಬೇಕು-

ಅವತ್ತು ಗಣಿ ಲೂಟಿಯ ವಿರುದ್ಧ ವಿರೋಧಿ ನಾಯಕ ಸಿದ್ಧರಾಮಯ್ಯ ಇನ್ನಿಲ್ಲದಂತೆ ಕುಟುಕಿದ್ದು, ಕಾಂಗ್ರೆಸ್-ಜೆಡಿಎಸ್‌ನ ಎಲ್ಲಾ ನಾಯಕರೂ ಗಣಿ ಹಗರಣವನ್ನು ಸಿಬಿಐ ತನಿಖೆಗೊಪ್ಪಿಸುವಂತೆ ಒಕ್ಕೊರಲಿನಿಂದ ಪ್ರತಿಭಟಿಸಿದ್ದು ಇದೆಲ್ಲಕ್ಕೂ ಉತ್ತರ ಕೊಟ್ಟ ಮುಖ್ಯಮಂತ್ರಿ ಯಡ್ಡಿ ಮಾತು ಮುಗಿಸುತ್ತಿದ್ದಂತೆ ಸದನದ ಯಾವ ನಿಯಮದ ಹಂಗೂ ಇಲ್ಲದಂತೆ ಅಡ್ಡಬಾಯಿ ಹಾಕಿದ ಜನಾರ್ದನ ರೆಡ್ಡಿ ಏಕಾಏಕಿ ಮಾತಾಡಲು ನಿಂತದ್ದು ಒಂದಾದರೆ ಆನಂತರ ನಡೆದದ್ದೇ ಬೇರೆ.

ಮುಖ್ಯಮಂತ್ರಿಯ ಮಾತಿನ ಮಧ್ಯೆ ನಿಂತು ಅಡ್ಡಬಾಯಿ ಹಾಕಿದ ಜನಾರ್ದನ ರೆಡ್ಡಿಯನ್ನು ತಡೆದದ್ದು ಗಾಂಧಿನಗರದ ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್. ಬಾಯಿಗೆಬಂದಂತೆ ಮಾತಾಡೋಕ್ಕೆ ಇದೇನು ಬಳ್ಳಾರಿ ಅಲ್ಲ, ಕುತ್ಕೊಳ್ರೀ... ಎಂದು ದಿನೇಶ್ ಹೇಳಿದ್ದೇ ತಡ, ಅವರತ್ತ ನುಗ್ಗಿ ಬಂದವನು ಕಂಪ್ಲಿ ಶಾಸಕ ಸುರೇಶ್ ಬಾಬು. ಏಯ್ ಬೋ... ಮಗನೇ, ತಾಕತ್ತಿದ್ರೆ, ಬಳ್ಳಾರಿಗೆ ಬಾರೋ, ಬಂದು ನೀನು ವಾಪಸ್ಸು ಹೋಗ್ತಿಯೇನೋ... ಎಂದು ತೋಳೇರಿಸಿಕೊಂಡು ನುಗ್ಗಿಯೇ ಬಿಟ್ಟ ಸುರೇಶ್ ಬಾಬುವನ್ನು ಕೆಲ ಬಿಜೆಪಿ ಶಾಸಕರೇ ಎಳೆದು ನಿಲ್ಲಿಸಿದರೆ, ಆತನನ್ನೇ ಮೀರಿಸುವಂತೆ ರೌಡಿ ರೂಪ ತಾಳಿಬಿಟ್ಟ ಜನಾರ್ದನ ರೆಡ್ಡಿ.

ನಿಮ್ಮನ್ನೆಲ್ಲಾ ಮುಗಿಸ್ದೇ ಬಿಡ್ತೀವಿ ಅಂದ್ಕೊಂಡಿದಿರೇನ್ರೋ, ತಾಕತ್ತಿದ್ರೆ ಬೀದಿಗೆ ಬಾರೋ. ಅಲ್ಲಿ ತೋರ್ಸ್ರೋ ನಿನ್ನ ಗಂಡಸ್ತನಾನಾ?

ಮಂತ್ರಿ ಜನಾರ್ದನ ರೆಡ್ಡಿಯ ಬಾಯಿಂದ ಬಂದ ಇಂಥ ಬಯ್ಗುಳದ ನಡುವೆಯೇ ಸೋಮಶೇಖರ ರೆಡ್ಡಿ ಏರಿಬಂದದ್ದೇ... ಏಯ್, ಸೂ... ಮಕ್ಕಾ, ಏನ್ ಶಾ.... ಕಿತ್ಕೋತೀರಾ? ಬಳ್ಳಾರಿಯವ್ರು ಏನು ಅಂತ ತೋರಿಸ್ತೀವಿ ಬನ್ರೋ... ಎಂದು ಹೂಂಕರಿಸಿಬಿಟ್ಟ. ಏಕಾಏಕಿ ಅಂಕೆ ಮೀರಿದ ಗಣಿ ಗ್ಯಾಂಗ್ ಅಟ್ಟಹಾಸ ಕಂಡ ಕಾಂಗ್ರೆಸ್ ನಾಯಕರಿಗೆ ಎಂಥಾ ಶಾಕ್ ಕಾದಿತ್ತೆಂದರೆ ಬಹುಶಃ ಜೀವನವಿಡೀ ಇಂಥದೊಂದು ಪರಿಸ್ಥಿತಿ ಎದುರಾಗಿರಲಿಕ್ಕಿಲ್ಲ. ಅಷ್ಟಕ್ಕೇ ಸಿದ್ಧರಾಮಯ್ಯ ಎದ್ದು ನಿಂತು ಇದೇನು ಅಸೆಂಬ್ಲೀನಾ? ಹೋಗ್ತೀರೇನ್ರೋ? ಬಾರೋ... ನಿಮ್ಮಪ್ಪನಿಗೇ ಹುಟ್ಟಿದ್ರೆ ಬಳ್ಳಾರಿಗೆ ಬಾರೋ....!

ಕೂಡ್ಲಿಗಿ ನಾಗೇಂದ್ರ, ಕಂಪ್ಲಿ ಸುರೇಶ್ ಬಾಬು, ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ ಸೇರಿಕೊಂಡು ಇನ್ನೇನು ಡೀಕೆ-ಸಿದ್ಧರಾಮಯ್ಯರನ್ನು ಹಾಕಿ ತುಳಿದೇ ಬಿಡುತ್ತಾರೆ ಎನ್ನಿಸಿದಾಗ ಇತರೇ ಬಿಜೆಪಿ ಶಾಸಕರೆಲ್ಲ ಕಾಂಗ್ರೆಸ್ ಶಾಸಕರ ರಕ್ಷಣೆಗೆ ನಿಲ್ಲಬೇಕಾಯ್ತು. ತಾರು ಶಾಸಕರೆಂದಾಗಲಿ, ಮಂತ್ರಿಗಳೆಂದಾಗಲಿ ಇದು ಸದನವೆಂಬ ಯಾವ ಪರಿವೆಯೂ ಇಲ್ಲದೇ ರೌಡಿಗಳಿಗಿಂತಲೂ ಹೀನಾಯವಾಗಿ ಬಡಿದಾಟಕ್ಕೆ ನಿಂತ ರೆಡ್ಡಿ ಗ್ಯಾಂಗ್ ತನ್ಮೂಲಕ ವಿನೂತನ ದಾಖಲೆಯೊಂದನ್ನು ಸೃಷ್ಟಿಸಿತ್ತು.

ಅದು ನಲವತ್ತು ವರ್ಷಗಳ ವಿಧಾನಮಂಡಲದ ಇತಿಹಾಸದಲ್ಲಿ ನಡೆದ ಅತ್ಯಂತ ಅಸಹ್ಯದ ಶಾಸಕ ದುರ್ವರ್ತನೆಯಾಗಿತ್ತು. ಸ್ಪೀಕರ್ ಬೋಪಯ್ಯ ಸದನವನ್ನು ಮುಂದೂಡದೇ ಹೋಗಿದ್ದರೆ ಬಳ್ಳಾರಿ ಗ್ಯಾಂಗ್ ಕಾಂಗ್ರೆಸ್ ಶಾಸಕರನ್ನು ಅಟ್ಟಾಡಿಸಿಬಿಡುತ್ತಿತ್ತು.

ಎಂದೂ ಕಾಣದ ದುರಾಚಾರವೊಂದಕ್ಕೆ ಅವತ್ತು ಸದನ ಸಾಕ್ಷಿಯಾಗಿತ್ತು. ಕರ್ನಾಟಕದ ವಿಧಾನಸಭೆಯ ಇತಿಹಾಸ ಕಂಡ ಮೊದಲ ಸಿಟ್ಟಿನ ವರ್ತನೆಯೆಂದರೆ 70 ರ ದಶಕದ ಶುರುವಿನಲ್ಲಿ ಶಾಂತವೇರಿ ಗೋಪಾಲಗೌಡರು ತಮ್ಮ ಕೈಯಲ್ಲಿದ್ದ ಪುಸ್ತಕ ಹರಿದು ಮೈಕ್ ಕಿತ್ತು ರೇಗಾಡಿದ್ದು. ಆ ಹೊತ್ತಿಗೆ ಇದೇ ಅತೀ ದೊಡ್ಡ ರಾದ್ಧಾಂತವಾಗಿತ್ತು. ಆದರೆ ಗೋಪಾಲಗೌಡರ ಇಂಥ ವರ್ತನೆಗೊಂದು ಸಮರ್ಥನೆಯಿತ್ತು. ಅದನ್ನು ಎಲ್ಲಾ ಶಾಸಕರೂ ಸಮರ್ಥಿಸಿಕೊಂಡಿದ್ದರು. ಅದು ಬಡವರ ಪರ ಎತ್ತಿದ ದನಿಯಾಗಿತ್ತು.

ಅದು ಬಿಟ್ಟರೆ ದೇವೇಗೌಡ ಮುಖ್ಯಮಂತ್ರಿಯಾಗಿದ್ದಾಗ ಶಿವರಾಮೇಗೌಡ ಸೇರಿದಂತೆ ಕೆಲ ಜನತಾದಳದ ಶಾಸಕರು ಕಾಂಗ್ರೆಸ್ ಶಾಸಕರತ್ತ ನುಗ್ಗಿ ಬಂದು ಕೂಗಾಡಿದ್ದು. ಮೊನ್ನೆ ಅಂದರೆ ಬೋಪಯ್ಯ ಸ್ಪೀಕರ್ ಹುದ್ದೆಗೆ ಆಯ್ಕೆಯಾದಾಗ ಜೆಡಿಎಸ್‌ನ ಜಮೀರ್ ಮತ್ತು ಮಾಗಡಿ ಬಾಲಕೃಷ್ಣ ಸ್ಪೀಕರ್ ಆಸದನತ್ತ ಏರಿಹೋಗಿ ಮೈಕ್ ಕಿತ್ತು ಪ್ರತಿಭಟಿಸಿದ್ದೇ ಕೊನೆ. ಕರ್ನಾಟಕದ ಸದನದ ಇತಿಹಾಸದಲ್ಲಿ ಯಾವೊಬ್ಬ ಶಾಸಕನೂ ಅಮ್ಮನ್ ಅಕ್ಕನ್ ಪದಬಳಕೆ ಮಾಡಿರಲಿಲ್ಲ. ಮತ್ತೊಬ್ಬ ಶಾಸಕ ಮೇಲೆ ಹಲ್ಲೆಗೆ ಯತ್ನಿಸಿರಲಿಲ್ಲ. ಸದನದಲ್ಲೇ ವಿರೋಧಿಗಳಿಗೆ ಕೊಲೆ ಬೆದರಿಕೆ ಹಾಕಿರಲಿಲ್ಲ. ಮುಗಿಸ್ತೀವಿ, ಜೀವಂತ ವಾಪಸ್ ಹೋಗ್ತಿಯಾ? ಸೂ... ಮಕ್ಕಾ, ಬೋ.... ಮಕ್ಕಳಾ ಇತ್ಯಾದಿ ಪಕ್ಕಾ ಕ್ರಿಮಿನಲ್ ವರಸೆಯನ್ನು ಮೊದಲ ಬಾರಿಗೆ ಕರ್ನಾಟಕದ ಅಸೆಂಬ್ಲಿಗೆ ತಂದ ಕೀರ್ತಿ ಗಣಿ ರೆಡ್ಡಿಗಳಿಗೇ ಸಲ್ಲಬೇಕು.

ಶ್ರೀರಾಮಚಂದ್ರನ ಆದರ್ಶಪಾಲಕ ಬಿಜೆಪಿ ಸದನಕ್ಕೆ ಕ್ರಿಮಿನಲ್ಲುಗಳನ್ನೂ, ತನ್ಮೂಲಕ ರಾಕ್ಷಸ ಸಂಸ್ಕೃತಿಯನ್ನೂ ಈ ಮೂಲಕವಾದರೂ ಹೊತ್ತು ತರುತ್ತಿದೆಯಲ್ಲ-ಜೈ ಶ್ರೀರಾಮ್!

● ರಾ.ಸೋ.

'ಜೋಗಯ್ಯ'ನ ಜೋಷ್ ಶುರುವಾಗಿದೆ. ಮೊನ್ನೆ ಕಂಠೀರವ ಸ್ಟೇಡಿಯಂನಲ್ಲಿ ಚಿರಂಜೀವಿ, ವಿಜಯ್, ಸೂರ್ಯರಂಥ ಜನಪ್ರಿಯ ಪರಭಾಷಾ ತಾರೆಯರನ್ನು ಕರೆಸುವ ಮೂಲಕ ಮುಹೂರ್ತ ನಡೆಸಿರುವ ಪ್ರೇಮ್-ಶಿವಣ್ಣ 'ಜೋಗಯ್ಯ'ನನ್ನು ಜನರ ಮುಂದೆ ಇಡಲು ಅಣಿಯಾಗುತ್ತಿದ್ದಾರೆ. ಇದು ಶಿವಣ್ಣನ 100ನೇ ಸಿನಿಮಾ ಮಾತ್ರವಲ್ಲ, ರಕ್ಷಿತಾಳ ದುಡ್ಡೂ ಇರುವುದರಿಂದ ಈ ಸಿನೆಮಾವನ್ನು ಗೆಲ್ಲಿಸಲು ಪ್ರೇಮ್ ತನ್ನ ತಂತ್ರಗಳ ಜೊತೆ ಶ್ರಮವನ್ನೂ ಬಳಸಬೇಕಿದೆ....

• ಶೆಣೈ, ಅರುಣ್

'ಜೋಗಯ್ಯ'ರ ಜೋಷ್!



2005ರಲ್ಲಿ ಬಿಡುಗಡೆಗೊಂಡ 'ಜೋಗಿ' ಚಿತ್ರದ ನಂತರ ಕಳೆದ ಐದು ವರ್ಷಗಳಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ನಟಿಸಿರುವ ೧೭ ಸಿನಿಮಾಗಳಲ್ಲಿ ಯಾವುದೂ ಸೂಪರ್ ಹಿಟ್ ಆಗಿಲ್ಲ. ಅವುಗಳಲ್ಲಿ ದೊಡ್ಡ ಬಡ್ಜೆಟ್ಟಿನ 'ಗಂಡುಗಲಿ ಕುಮಾರ ರಾಮ' ತರಹದ ಸಿನಿಮಾಗಳು ನಿರ್ಮಾಪಕರನ್ನೇ ಮುಳುಗಿಸಿದ್ದರೆ, 'ಮಾದೇಶ'ದಂತಹ ಆರ್ಡಿನರಿ ಸಿನಿಮಾ ಬದುಕಿದೆಯಾ ಬಡ ಜೀವವೇ ಎಂಬಂತೆ ಬಾಕ್ಸ್ ಆಫೀಸಿನಲ್ಲಿ ಅದು ಹೇಗೋ ತೂರಿಕೊಂಡಿತ್ತು.

ಇನ್ನು 'ಜೋಗಿ' ಚಿತ್ರದ ನಿರ್ದೇಶಕ ಪ್ರೇಮ್‌ನ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. 'ಜೋಗಿ' ಚಿತ್ರಕ್ಕೂ ಮುನ್ನ ಪ್ರೇಮ್ ನಿರ್ದೇಶಿಸಿದ್ದ 'ಕರಿಯ' ಮತ್ತು 'ಎಕ್ಸ್ಕ್ಯೂಸ್ ಮಿ' ಚಿತ್ರಗಳು ಹಿಟ್ ಆಗಿದ್ದವು ನಿಜ. ಆದರೆ 'ಜೋಗಿ'ಯ ನಂತರ ಆತ ನಿರ್ದೇಶಿಸಿದ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರವು ನಿರ್ಮಾಪಕ ಅಶ್ವಿನಿ ರಾಮಪ್ರಸಾದರನ್ನೇ ಮಖಾಡೆ ಮಲಗಿಸಿದ್ದರೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟಿಸಿದ್ದ 'ರಾಜ್ - ದಿ ಶೋ ಮ್ಯಾನ್' ಎಂಬ ಚಿತ್ರ ಸಾಮಾನ್ಯ ಯಶಸ್ಸನ್ನೆ ಮಾತ್ರ ಕಂಡಿತ್ತು.

ಅಂದರೆ ಶಿವರಾಜ್‌ಕುಮಾರ್ ಮತ್ತು ಪ್ರೇಮ್ ಇಬ್ಬರಿಗೂ ಈಗ ಒಂದು ಹಿಟ್ ಚಿತ್ರ ಬೇಕಿದೆ. ಅದಕ್ಕೆ ಅವರಿಬ್ಬರು ಈಗ 'ಜೋಗಿ'ಯ ಮೊರೆ ಹೋಗಿ ಅದರ ಮುಂದುವರೆದ ಭಾಗವಾದ 'ಜೋಗಯ್ಯ' ಚಿತ್ರಕ್ಕೆ ಮೊನ್ನೆ ಅದ್ಧೂರಿಯಾಗಿ ಚಾಲನೆ ನೀಡಿದ್ದಾರೆ. ಒಂದೆಡೆ 'ಜೋಗಯ್ಯ' ಶಿವರಾಜ್‌ಕುಮಾರ್ ಅವರ ನೂರನೇ ಚಿತ್ರ ಎಂಬ ಹೆಗ್ಗಳಿಕೆ. ಇನ್ನೊಂದೆಡೆ ಜುಲೈ 12 ರಂದೇ ಶಿವಣ್ಣನ ೪೮ನೇ ಹುಟ್ಟುಹಬ್ಬ ಎಂಬ ಹುಮ್ಮಸ್ಸು. ಇವೆರಡು ಕಾರಣಗಳನ್ನು ಚೆನ್ನಾಗಿ ಬೆರೆಸಿದ ಪ್ರೇಮ್ ಅದಕ್ಕೆ ದಕ್ಷಿಣ ಭಾರತದ ಹಿರಿಯರು ಮತ್ತು ಪ್ರಮುಖ ತಾರೆಯರು ಬರುವಂತೆ ನೋಡಿಕೊಂಡರು. ಸಮಾರಂಭಕ್ಕೆ ಬೇಕಾಬಿಟ್ಟಿ ಪಾಸ್‌ಗಳನ್ನು ಹಂಚಿ ಜನಧೊಂಬಿ ಸೇರುವಂತೆ ಮಾಡಿದರು. ಆ ಮೂಲಕ 'ಜೋಗಯ್ಯ' ಚಿತ್ರದ ಮುಹೂರ್ತಕ್ಕೆ ಪುಟಗಟ್ಟಲೆ ಪುಕ್ಕಟೆ ಪ್ರಚಾರವನ್ನೂ ಪಡೆದರು. ಪ್ರೇಮ್ ನಿರ್ದೇಶನದ ಚಿತ್ರ 'ರಾಜ್' ತೋಪಾಗಿದ್ದರೂ ಪ್ರೇಮ್ ತಾನು ನಿಜವಾಗಲೂ 'ಶೋ ಮ್ಯಾನ್' ಎಂಬುದನ್ನು ಸಾಬೀತುಪಡಿಸಿದರು!

ಈ ಸಮಾರಂಭಕ್ಕೆ ಹಿಂದಿಯ ಪ್ರಮುಖ ನಟ ಆಮೀರ್ ಖಾನ್ ಬರುತ್ತಾರೆಂದೂ, ಭಾರತೀಯ ಜನತಾ ಪಕ್ಷದ ಮುದಿ ನಾಯಕ ಎಲ್.ಕೆ.ಅಧ್ವಾನಿ ಕೂಡ ಹಾಜರಾಗುತ್ತಾರೆಂದೂ ಪ್ರೇಮ್ ಪ್ರಚಾರ ಮಾಡಿದ್ದರು. ಆದರೆ ಅವರಿಬ್ಬರೂ 'ಆಬ್ಸೆಂಟ್' ಆದರು. ಆದರೇನಂತೆ, ಆಮೀರ್ ಖಾನ್‌ನನ್ನು ನೋಡಲು ಹಿಂದಿ ಚಿತ್ರಗಳ ವೀಕ್ಷಕರು ಬಾರದಿದ್ದರೂ, ಅಧ್ವಾನಿಯ ಚೆಡ್ಡಿ ಹಿಂಬಾಲಕರು ಗೈರುಹಾಜರಾದರೂ, ತೆಲುಗು ಸಿನಿಮಾದ ಸೂಪರ್ ಸ್ಟಾರ್ ಚಿರಂಜೀವಿ ಮತ್ತು ತಮಿಳು ಚಿತ್ರರಂಗದ ಯಶಸ್ವಿ ಯುವ ನಟರಾದ ವಿಜಯ್ ಮತ್ತು ಸೂರ್ಯ ಬಂದಿದ್ದರಿಂದ ಅವರ ಅಭಿಮಾನಿಗಳೂ ಕಂಠೀರವ ಸ್ಟೇಡಿಯಂಗೆ ಮುತ್ತಿಗೆ ಹಾಕುವಂತಹ 'ಕೈ' ಚಳಕವನ್ನು ಪ್ರೇಮ್ ತೋರಿದರು!!

ಗಾಂಧಿನಗರ ಗೈರುಹಾಜರಿ

ಇಲ್ಲೊಂದು ಸೋಜಿಗ ನೋಡಿ. ಈ ಚಿತ್ರದ ಮುಹೂರ್ತಕ್ಕೆ ಬೇರೆ ಭಾಷೆಯ ಹಿರಿಯ, ಯಶಸ್ವೀ ನಟರೇ ಬಂದಿದ್ದರೂ ಕನ್ನಡ ಚಿತ್ರರಂಗದ ದಿಗ್ಗಜರು ಮಾತ್ರ ನಾಪತ್ತೆಯಾಗಿದ್ದರು! ಪರಭಾಷಾ ಚಿತ್ರಗಳ

ಅದ್ಧೂರಿ ಮುಹೂರ್ತ

ಬಹುತೇಕ ಕನ್ನಡ ಚಿತ್ರಗಳ ಮುಹೂರ್ತಗಳು ಕಂಠೀರವ ಸ್ಟುಡಿಯೋದಲ್ಲೋ ಅಥವಾ ಯಾವುದಾದರೂ ಗಣಪತಿ ದೇವಸ್ಥಾನದಲ್ಲೋ ನಡೆಯುವುದು ಮಾಮೂಲಿ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಕೆಲವರು ಮುಹೂರ್ತ ಎಂಬ ಸಮಾರಂಭವನ್ನೂ ಸಿಂಪಲ್ ಆಗಿ ಮಾಡಿಮುಗಿಸುತ್ತಿದ್ದಾರೆ. ಎಸ್.ನಾರಾಯಣ್ ಮತ್ತು ರಾಕ್‌ಲೈನ್ ವೆಂಕಟೇಶ್ ತರಹದವರಂತೂ ಉದ್ಯಮದವರನ್ನಾಗಲಿ, ಮಾಧ್ಯಮದವರನ್ನಾಗಲಿ ಆಹ್ವಾನಿಸದೆ ಗುಟ್ಟಾಗಿ ಮುಹೂರ್ತ ಮಾಡುವ ಸಂಪ್ರದಾಯವನ್ನೇ ಆರಂಭಿಸಿದ್ದಾರೆ. ಇದಕ್ಕೆ ಕೆಲವರು ನೀಡುವ ಕಾರಣ ಕನ್ನಡ ಚಿತ್ರರಂಗ ಕುಂಟುತ್ತಾ ಸಾಗುತ್ತಿದೆ, ಆದ್ದರಿಂದ ಇವತ್ತು ದುಂದುವೆಚ್ಚಕ್ಕೆ ಅವಕಾಶವೇ ಇಲ್ಲ, ಚಿತ್ರ ಮಾಡಿ ಮುಗಿಸಿದರೆ ಸಾಕು ಎಂಬುದೇ ಆಗಿದೆ. ಆದರೆ ಪ್ರೇಮ್ ಮಾತ್ರ ಇಂತಹ ಯಾವ ಲೆಕ್ಕಕ್ಕೂ ಕೇರ್ ಮಾಡದೆ ತನ್ನ ಹೆಂಡತಿ ರಕ್ಷಿತಾ ನಿರ್ಮಿಸುತ್ತಿರುವ ಚಿತ್ರಕ್ಕೆ ಅದ್ಧೂರಿಯಾದ ಮುಹೂರ್ತವನ್ನೇ ಮಾಡಿದ್ದಾರೆ. ಇದು ದುಂದುವೆಚ್ಚವೋ ಅಥವಾ ಪ್ರಚಾರಕ್ಕಾಗಿ ಮಾಡಿದ ಗಿಮಿಕ್ಕೋ ಎಂಬುದು ಚಿತ್ರ ಬಿಡುಗಡೆಯಾದ ನಂತರ ಗೊತ್ತಾಗಲಿದೆ ಎಂಬುದಂತೂ ಸ್ಪಷ್ಟ.



ತಾರೆಗಳನ್ನು ಕರೆದಿದ್ದು ಶಿವಣ್ಣ



ಮೊನ್ನೆ ನಡೆದ 'ಜೋಗಯ್ಯ' ಮುಹೂರ್ತಕ್ಕೆ ಚಿರಂಜೀವಿ ಮತ್ತು ಸೂರ್ಯ ತರಹದ ತೆಲುಗು ಮತ್ತು ತಮಿಳಿನ ಸ್ಟಾರ್‌ಗಳು ಬಂದಿದ್ದರು, ಅವರನ್ನೆಲ್ಲ ಮಂಡ್ಯದ ಹಳ್ಳಿ ಹೈದನಂತಿರುವ ನಿರ್ದೇಶಕ ಪ್ರೇಮ್ ಕರೆದಿದ್ದರೆ, ಅವರು ಬರುವುದಿರಲಿ ಅವರ ಮನೆಯ ಅಸಿಸ್ಟೆಂಟುಗಳೂ ಬರುತ್ತಿರಲಿಲ್ಲವೇನೋ. ಆದರೆ ಈ ಸಮಾರಂಭಕ್ಕೆ ಈ ಖ್ಯಾತಾನುಖ್ಯಾತ ನಟರು ಬಂದಿದ್ದಕ್ಕೆ ಕಾರಣ ಅವರನ್ನು ಆಹ್ವಾನಿಸಿದ್ದು ಪ್ರೇಮ್ ಅಲ್ಲ ಬದಲಾಗಿ ಶಿವಣ್ಣ ಎಂಬುದು.

ಇದು ಶಿವಣ್ಣನ ನೂರನೇ ಚಿತ್ರವಾದ್ದರಿಂದ ರಾಜ್ ಕುಟುಂಬಕ್ಕೂ ಈ ಸಮಾರಂಭ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಹೀಗಾಗಿ ಖುದ್ದು ಶಿವರಾಜ್‌ಕುಮಾರ್ ಮತ್ತು ಪಾರ್ವತಮ್ಮ ಅವರೇ ತಮಿಳುನಾಡು, ಆಂಧ್ರಕ್ಕೆ ಫೋನ್ ಮಾಡಿ ಸ್ಟಾರ್ ನಟರನ್ನು ಕರೆಸಿಕೊಳ್ಳುವಲ್ಲಿ ಸಫಲರಾದರು.

ತಮಿಳು ಮತ್ತು ಆಂಧ್ರ ಚಿತ್ರರಂಗದವರೊಂದಿಗೂ ರಾಜ್ ಕುಟುಂಬ ಮೊದಲಿನಿಂದಲೂ ಉತ್ತಮ ನಂಟನ್ನು ಹೊಂದಿದೆ. ತಮಿಳು ಹಾಗೂ ತೆಲುಗಿನ ಯಾವುದೇ ಪ್ರಮುಖ ನಟರು ಬೆಂಗಳೂರಿಗೆ ಬಂದರೂ ಅವರು ಒಮ್ಮೆ ಸದಾಶಿವನಗರದಲ್ಲಿರುವ ರಾಜ್ ಮನೆಗೆ ಭೇಟಿ ನೀಡುವುದು ಒಂದು ಸಂಪ್ರದಾಯವಾಗಿಹೋಗಿದೆ. ಶಿವಾಜಿ ಗಣೇಶನ್ ಮಗ ಪ್ರಭು, ಕಮಲ್ ಹಾಸನ್‌ರಂಥ ನಟರೂ ಬೆಂಗಳೂರಿಗೆ ಬಂದರೆ ರಾಜ್ ನಿವಾಸಕ್ಕೆ ಭೇಟಿ ನೀಡುತ್ತಾರೆ.



ಅಷ್ಟೇ ಅಲ್ಲದೆ, ಭಾರತದ ಎಲ್ಲ ನಟರೊಂದಿಗೂ ಡಾ.ರಾಜ್ ಸ್ನೇಹಪೂರ್ವಕವಾಗಿದ್ದುದರಿಂದ ಅವರ ಕುಟುಂಬದವರ ಬಗ್ಗೆ ಎಲ್ಲರಿಗೂ ಅಪಾರ ಗೌರವವಿದೆ. ಅಂತಹವರಲ್ಲಿ ಹಿಂದಿಯ ಮೇರು ನಟ ಅಮಿತಾಭ್ ಬಚ್ಚನ್ ಕೂಡ ಒಬ್ಬರಾಗಿದ್ದಾರೆಂದರೆ ಇದು ಸಾಮಾನ್ಯವಲ್ಲ. ಹೀಗಿರುವಾಗ ಸ್ವತಃ ಪಾರ್ವತಮ್ಮ ಮತ್ತು ಶಿವಣ್ಣನೇ ಕರೆದಾಗ ಯಾರು ತಾನೆ ಬರೋದಿಲ್ಲ ಅಂತ ಹೇಳಲು ಸಾಧ್ಯ? ಆದ್ದರಿಂದಲೇ ಚಿರಂಜೀವಿ ಆದಿಯಾಗಿ ವಿಜಯ್, ಸೂರ್ಯ ತನಕ ಎಲ್ಲರೂ 'ಜೋಗಯ್ಯ'ನ ಮುಹೂರ್ತಕ್ಕೆ ಆಗಮಿಸಿದ್ದರು.

ಬಿಕರಿಯಾದ ಪಾಸ್!




ಕಂಠೀರವ ಸ್ಟೇಡಿಯಂನ ಸೀಟಿಂಗ್ ಕೆಪಾಸಿಟಿ ಇರುವುದೇ ಹನ್ನೆರಡು ಸಾವಿರ. ಆದರೂ ನಿರ್ದೇಶಕ ಪ್ರೇಮ್ ಮೂವತ್ತು ಸಾವಿರಕ್ಕೂ ಅಧಿಕ 'ವಿಐಪಿ' ಮತ್ತು 'ವಿವಿಐಪಿ' ಎಂಬ ಪಾಸ್‌ಗಳನ್ನು ಪ್ರಿಂಟು ಮಾಡಿಸಿ ಅವುಗಳನ್ನು ಊರು ತುಂಬ ಹಂಚಿದ್ದರು!

ಮುಹೂರ್ತದ ದಿನ ಕಂಠೀರವ ಸ್ಟೇಡಿಯಂನಲ್ಲಿ ಬೆಳಿಗ್ಗೆಯಿಂದಲೇ ಜನ ಸೇರಲಾರಂಭಿಸಿದ್ದರು. ಹನ್ನೆರಡು ಗಂಟೆ ಹೊತ್ತಿಗೆ ಸ್ಟೇಡಿಯಂ ಭರ್ತಿಯಾಗಿಹೋಗಿತ್ತು. ಆದರೂ ಸಂಜೆ ತನಕ ಜನ ನುಗ್ಗಿಬರುತ್ತಲಿದ್ದರು. ಅಷ್ಟೇ ಅಲ್ಲ, ಪ್ರತಿಯೊಬ್ಬರ ಕೈಲೂ ವಿಐಪಿ ಮತ್ತು ವಿವಿಐಪಿ ಪಾಸುಗಳಿದ್ದವು. 'ನಮ್ಮ ಹತ್ರ ಪಾಸ್ ಇದೆ, ಒಳಗೆ ಬಿಡ್ರೀ' ಎಂದು ಅವಾಜು ಬಿಟ್ಟವರಿಗೆಲ್ಲಾ ಪೊಲೀಸರು ಲಾಠಿ ರುಚಿ ತೋರಿಸಬೇಕಾಯಿತು.

ಕೆಲವು ಸಿನಿಮಾ ಪತ್ರಿಕೆಗಳ ಮೂಲಕ ಉಚಿತವಾಗಿ ಈ ಪಾಸುಗಳನ್ನು ಹಂಚಲಾಗಿತ್ತು. ಜೊತೆಗೆ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ವಿಐಪಿ ಪಾಸ್‌ಗಳನ್ನು ಶ್ರೀರಾಂಪುರ ಮತ್ತು ಓಕಳೀಪುರಗಳಲ್ಲಿರುವ ತಮಿಳು ಸ್ಲಂಗಳಲ್ಲಿ ವಿತರಿಸಲಾಗಿತ್ತು. ಈ ಏರಿಯಾಗಳಲ್ಲಿರುವ ವಿಜಯ್ ಮತ್ತು ಸೂರ್ಯನ ಅಭಿಮಾನಿಗಳು ಒಂದು ಪಾಸಿಗೆ ನೂರೈವತ್ತರಿಂದ ಇನ್ನೂರು ರೂಪಾಯಿ ಕೊಟ್ಟು ಖರೀದಿಸಿ ಬಂದಿದ್ದರು.

ಒಂದೆಡೆ ಕನ್ನಡ ಪತ್ರಿಕೆಗಳಿಂದ ಪಾಸ್ ಪಡೆದ ಹೆಣ್ಣು ಮಕ್ಕಳು, ಇನ್ನೊಂದೆಡೆ ಪಾಸ್‌ಗಳನ್ನು ಖರೀದಿಸಿಬಂದಿದ್ದ ತಮಿಳು ಪೋಕರಿಗಳು, ಮತ್ತೊಂದೆಡೆ ಶಿವಣ್ಣನ ಅಭಿಮಾನಿಗಳು, ಮಗದೊಂದೆಡೆ ಚಿರಂಜೀವಿಯ ತೆಲುಗು ಭಕ್ತರು... ನೂಕು ನುಗ್ಗಲಾಗದೆ ಇರುತ್ತದೆಯೇ? ಆದರೇನಂತೆ, 'ಜನಸ್ತೋಮ', 'ಅಭಿಮಾನಿಗಳಿಗೆ ಲಾಠಿ ಏಟು' ಎಂಬಂತಹ ಪತ್ರಿಕಾ ವರದಿಗಳ ಮೂಲಕ ಪ್ರೇಮ್‌ನ 'ಜೋಗಯ್ಯ' ಮಿಂಚಿದ್ದೋ ಮಿಂಚಿದ್ದು!!






ಪ್ರೇಮ್‌ಗೆ ಡೆಡ್‌ಲೈನ್

ಪ್ರೇಮ್ ಕೈಗೆ ಸಿನಿಮಾ ಕೊಟ್ಟರೆ ದಿನಗಳಿಗೆ ಬೆಲೆಯಿಲ್ಲದಂತೆ ಅದನ್ನು ಇನ್ನಿಲ್ಲದಂತೆ ಎಳೆದುಬಿಡುತ್ತಾರೆ ಎಂಬುದು ರಾಜ್ ಕುಟುಂಬಕ್ಕೂ ಗೊತ್ತಿರುವುದರಿಂದಲೇ ಈ ಬಾರಿ ಶಿವಣ್ಣನ ಕಾಲ್‌ಶೀಟ್ ಅನ್ನು ಲೆಕ್ಕ ಹಾಕಿ ಆತನಿಗೆ ಕೊಡಲಾಗಿದೆ. 'ಜೋಗಯ್ಯ' ಸಿನಿಮಾಕ್ಕೆ ಮೂರ್‍ನಾಲ್ಕು ಶೆಡ್ಯೂಲ್ ಆದರೆ ಅದು ಈ ಕಾಲಕ್ಕೇ ಮುಗಿಯುವುದಿಲ್ಲ ಎಂಬ ಕಾರಣಕ್ಕೆ ನಲವತ್ತೈದು ದಿನದ ಒಂದೇ ಶೆಡ್ಯೂಲನ್ನು ಮಾತ್ರ ನೀಡಲಾಗಿದೆ. ಹೀಗಾಗಿ ಏನೇ ಆದರೂ ಅಷ್ಟು ದಿನಗಳಲ್ಲಿ ಚಿತ್ರೀಕರಣ ಮುಗಿಸಲೇಬೇಕಾದ ಜವಾಬ್ದಾರಿ ಪ್ರೇಮ್ ಮೇಲಿದೆ.

ಪ್ರೇಮ್ ತಮ್ಮ ಹಿಂದಿನ ಚಿತ್ರಗಳಾದ 'ರಾಜ್' ಮತ್ತು 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರಗಳಿಗೆ ಸರಿಯಾದ ಸಿದ್ಧತೆ ಮಾಡಿಕೊಂಡಿರಲಿಲ್ಲ. ಆ ಸಿನಿಮಾಗಳ ಚಿತ್ರೀಕರಣ ಆರಂಭವಾದರೂ ಸ್ಕ್ರಿಪ್ಟು ರಿಪೇರಿಯಾಗುತ್ತಲೇ ಇತ್ತು. ಆದರೆ ಈ ಬಾರಿ ಬರೋಬ್ಬರಿ ಹತ್ತು ತಿಂಗಳ ಕಾಲ ಚಿತ್ರಕತೆಯನ್ನು ತಿದ್ದಿ ತೀಡಿ, ಒಪ್ಪ ಮಾಡಿದ್ದಾರೆ ...ಮ್.



ನರೇಂದ್ರಬಾಬು

ಆದರೆ ಪ್ರೇಮ್ ಜೊತೆ ಈ ಹಿಂದೆ ಇದ್ದ ಟೆಕ್ನಿಕಲ್ ಟೀಂ ಆಗಲಿ, ...ಡಕ್ಷನ್ ವಿಭಾಗದವರಾಗಲಿ ಈಗಿಲ್ಲ. ಸ್ವತಃ ಪ್ರೇಮ್‌ನ ಸಣ್ಣತನಗಳೇ ...ವರನ್ನೆಲ್ಲ ದೂರಮಾಡಿದೆ. ಈಗ ಪ್ರೇಮ್ ಸಂಪೂರ್ಣವಾಗಿ ಹೊಸದೊಂದು ...ಡವನ್ನು ಕಟ್ಟಿಕೊಂಡಿದ್ದಾರೆ. 'ಕಬಡಿ' ನರೇಂದ್ರಬಾಬುರಂಥ ಪ್ರಬುದ್ಧ ...ಗೂ ಕ್ರಿಯಾಶೀಲ ವ್ಯಕ್ತಿ ಚಿತ್ರಕಥೆಗೂ ಕುಳಿತು, ಸಂಭಾಷಣೆಯನ್ನೂ ...ಸಿದ್ದಾರೆ.

ಒಂದು ಮೂಲದ ಪ್ರಕಾರ 'ಜೋಗಯ್ಯ'ನ ಕಥೆ ಮಾಮೂಲಿ ಸಿನಿಮಾಗಳಿಗಿಂತ ವಿಭಿನ್ನ ಹಾಗೂ ...ದ್ಭುತವಾಗಿ ಮೂಡಿಬಂದಿದೆಯಂತೆ. ಹರಿಕೃಷ್ಣ ಟ್ಯೂನ್ ನೀಡಿರುವ ಹಾಡುಗಳಂತೂ ಕಲ್ಪನೆಗೂ ...ೀರುವಷ್ಟು ಇಂಪಾಗಿವೆಯಂತೆ.

...ದನ್ನೆಲ್ಲಾ ನೋಡಿದರೆ, 'ಜೋಗಯ್ಯ'ನ ಗೆಲುವು ಗ್ಯಾರಂಟಿ ಎಂದನಿಸುತ್ತದೆ. ಮಾತ್ರವಲ್ಲ, ಚಿತ್ರಕ್ಕೆ ...ಯಲುವ ಖರ್ಚಿನ ಮೇಲೆ ಐದು ಕೋಟಿ ಕೊಡುವುದಾಗಿ ಈಗಾಗಲೇ ಹಲವಾರು ಆಫರ್‌ಗಳು ...ೇಮ್‌ಗೆ ಬಂದಿವೆಯಂತೆ.

ಇಂಥ ಎಲ್ಲ ಅವಕಾಶಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡು, ಜೊತೆಗಿರುವವರಿಗೂ ಬೆಲೆ ...ಟ್ಟು 'ಜೋಗಯ್ಯ'ನನ್ನು ತೆರೆಯಮೇಲೆ ಕಟ್ಟಿಕೊಡುವ ಮಹತ್ತರ ಜವಾಬ್ದಾರಿ ಮಾತ್ರ ಪ್ರೇಮ್‌ರದ್ದು.



ಅಘೋರಿ ಬರುವುದು ಹಾಡಿನಲ್ಲಿ ಮಾತ್ರ!


'ಜೋಗಯ್ಯ'ನ ಪಬ್ಲಿಸಿಟಿಯ ಚಿತ್ರಗಳಲ್ಲಿ ಶಿವಣ್ಣನ ಮುಖ ಮತ್ತು ಮೈಗೆಲ್ಲಾ ಬೂದಿ ಬಳಿದು, ಅವರನ್ನು ಅರೆಬೆತ್ತಲೆ ನಿಲ್ಲಿಸಿ, ಕೈಗೊಂದು ತ್ರಿಶೂಲ ಕೊಟ್ಟು ಅಘೋರಿ ಗೆಟಪ್‌ನಲ್ಲಿ ತೋರಿಸಲಾಗಿದೆ. ಈ ಪಾತ್ರವೇ ಚಿತ್ರದ ಹೈಲೇಟು ಎಂಬ ಸುದ್ದಿ ಕೂಡಾ ಹರಿದಾಡುತ್ತಿದೆ.

ಆದರೆ ನಿಜ ಸಂಗತಿಯೆಂದರೆ, ಈ ಸಿನಿಮಾಕ್ಕೂ ಅಘೋರಿಗೂ ಯಾವ ಸಂಬಂಧವೂ ಇಲ್ಲ. ಒಂದೇ ಒಂದು ಹಾಡಿನಲ್ಲಿ ಮಾತ್ರ ಶಿವಣ್ಣನನ್ನು ಈ ಗೆಟಪ್‌ನಲ್ಲಿ ಬಳಸಿಕೊಳ್ಳಲಾಗಿದೆ.

ಈ ಹಿಂದೆ 'ನಾನ್ ಕಡವುಳ್' ಎಂಬ ತಮಿಳು ಚಿತ್ರದಿಂದ ಪ್ರೇರೇಪಿತರಾಗಿ, ಆ ಚಿತ್ರದಲ್ಲಿಯಂತೆ ಈ ಚಿತ್ರದಲ್ಲೂ ಶಿವಣ್ಣನನ್ನು ಅಘೋರಿಯನ್ನಾಗಿಸುವುದು ಪ್ರೇಮ್ ಪ್ಲಾನಾಗಿತ್ತು. ಆದರೆ ಆನಂತರ 'ಜೋಗಯ್ಯ' ಕಥೆಯಲ್ಲಿ ಹಲವಾರು ಮಾರ್ಪಾಡುಗಳಾಗಿದ್ದರಿಂದ ಅದನ್ನು ಕೇವಲ ಒಂದು ಹಾಡಿನಲ್ಲಿ ಮಾತ್ರ ಬಳಸಿಕೊಂಡು ಕಥೆಯಲ್ಲಿ ಕೈಬಿಡಲಾಗಿದೆ.



ಆನಂದ್ ಟು ಜೋಗಯ್ಯ, ಜೋಗಯ್ಯ ಟು ಆನಂದ್



ತಮ್ಮ 100ನೇ ಚಿತ್ರಕ್ಕೆ ಶಿವರಾಜ್‌ಕುಮಾರ್ ಯಾವ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ? ಈ ಚಿತ್ರದ ಬಗ್ಗೆ ಅವರ ಅಭಿಮಾನಿಗಳಲ್ಲಿ ಅಪಾರವಾದ ನಿರೀಕ್ಷೆಯಿರುವುದರಿಂದ ಅದಕ್ಕಾಗಿ ಏನಾದರು ಹೊಸದನ್ನು ಮಾಡಲಿದ್ದಾರೆಯೇ? ಎಂಬಿತ್ಯಾದಿ ಪ್ರಶ್ನೆಗಳು ಅವರ ಅಭಿಮಾನಿಗಳಲ್ಲಿ ಈಗಾಗಲೇ ಉಂಟಾಗಿದೆ. ಯಾಕೆಂದರೆ ಗಿಮಿಕ್ ರಾಜ ಪ್ರೇಮ್ ಮಾಡುವ ಪಬ್ಲಿಸಿಟಿ ಸ್ಟಂಟ್‌ಗಳಿಂದಾಗಿ ಚಿತ್ರದ ನಿರೀಕ್ಷೆ ಈಗಾಗಲೇ ಗಗನಕ್ಕೇರಿದೆ. ಈ ಎಲ್ಲಾ ಕಾರಣಗಳನ್ನು ಶಿವಣ್ಣನಿಗೆ ನೆನಪಿಸಿದರೆ ಅವರು ಹೇಳುವುದೇನು ಗೊತ್ತೇ?

"ನಾನು ಇನ್ನೂ ಸಂಪೂರ್ಣವಾಗಿ ಈ ಚಿತ್ರದ ಕತೆಯನ್ನು ಕೇಳಿಲ್ಲ. ಮಾತ್ರವಲ್ಲ ಅದನ್ನು ಉದ್ದೇಶಪೂರ್ವಕವಾಗಿಯೇ ಕೇಳಿಸಿಕೊಂಡಿಲ್ಲ. ಯಾಕೆಂದರೆ ಕಥೆ ಕೇಳಿದರೆ ನಾನು ಅದಕ್ಕಾಗಿ ನನ್ನದೇ ರೀತಿಯಲ್ಲಿ ತಯಾರಾಗುತ್ತೇನೆ. ಈ ಚಿತ್ರದ ವಿಷಯದಲ್ಲಿ ಹಾಗೆ ಮಾಡುವುದು ನನಗೆ ಇಷ್ಟವಿಲ್ಲ. ನಾನು ನನ್ನ ಮೊದಲನೆ ಚಿತ್ರ 'ಆನಂದ್'ಗೆ ಹೇಗೆ ಮುಕ್ತ ಮತ್ತು ಮುಗ್ಧ ಮನಸ್ಸಿನಿಂದ ಹೋಗಿದ್ದೇನೋ ಅದೇ ರೀತಿಯಲ್ಲಿ 'ಜೋಗಯ್ಯ'ನಿಗೂ ಹೋಗಬೇಕೆಂದು ನಿರ್ಣಯಿಸಿದ್ದೇನೆ. ನನಗೆ ಪ್ರೇಮ್ ನಿರ್ದೇಶನದಲ್ಲಿ ನಂಬಿಕೆಯಿರುವುದರಿಂದ ಈ ರೀತಿಯ ರಿಸ್ಕ್ ತೆಗೆದುಕೊಳ್ಳುತ್ತಿದ್ದೇನೆ" ಎಂದು ಹೇಳುವ ಮೂಲಕ ಶಿವಣ್ಣ ಅಚ್ಚರಿ ಮೂಡಿಸಿದರು.

25 ವರ್ಷಗಳ ಹಿಂದೆ 'ಆನಂದ್' ಚಿತ್ರ ಆರಂಭಿಸುವಾಗ ಇದ್ದ ಮನೋಸ್ಥಿತಿಗೆ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮರಳಿರುವುದು ನಿಜಕ್ಕೂ ಒಂದು ಆಶಾದಾಯಕ ವಿಷಯ. ಯಾಕೆಂದರೆ ಪ್ರತಿ ಚಿತ್ರವೂ ಹೊಸತು ಎಂದು ಯಾವಾಗ ನಾಯಕ ನಟ ಭಾವಿಸುತ್ತಾರೋ ಆಗಲೇ ಆತನಿಂದ ಶ್ರೇಷ್ಠವಾದುದನ್ನು ನೀಡಲು ಸಾಧ್ಯ. ಹಾಗೆಯೇ ತಾನು ನೂರು ಚಿತ್ರಗಳ ಸರದಾರನಾದರೂ "ನನಗೆ ನನ್ನ ನಿರ್ದೇಶಕನ ಮೇಲೆ ನಂಬಿಕೆಯಿದೆ. ಆತ ಹೇಳಿದಂತೆ ನಟಿಸುತ್ತೇನೆ" ಎಂದು ಶಿವಣ್ಣ ಹೇಳಿರುವುದೂ ನಿರ್ದೇಶಕರ ಸ್ಥಾನಮಾನಕ್ಕೆ ಅವರು ನೀಡಿದ ಮರ್ಯಾದೆ.

'ಜೋಗಯ್ಯ' ಚಿತ್ರದ ಹಾಡಿನ ರೆಕಾರ್ಡಿಂಗ್, ರಕ್ಷಿತಾ ನಿರ್ಮಾಣ ಸಂಸ್ಥೆಯ ಉದ್ಘಾಟನೆ, ನಾಯಕನಟನ ಉಡುಪುಗಳ ಬಗ್ಗೆ ಪ್ರಚಾರ, ಅದಾದ ನಂತರ ಇದೀಗ ಅದ್ದೂರಿ ಮುಹೂರ್ತ... ಹೀಗೆ ಈ ಚಿತ್ರ ಸತತವಾಗಿ ಸುದ್ದಿಯಲ್ಲಿದೆ. ಮುಂದೆ ಪ್ರೇಮ್ ಬತ್ತಳಿಕೆಯಲ್ಲಿ ಏನೇನಿದೆಯೋ ಕಾದು ನೋಡಬೇಕು....

...ದ್ಧ ಸಮರ ಸಾರಿರುವ ಚೇಂಬರ್‌ನ ಹಲವು ...ಕಾರಿಗಳು ಕನ್ನಡದ ನಟನೊಬ್ಬನ 100ನೇ ...ಕ್ಕೆ ಶುಭ ಹಾರೈಸಲು ಬರಲೇ ಇಲ್ಲ. ...ೀಗಯ್ಯ'ನ ಮುಹೂರ್ತದ ಆಹ್ವಾನ ...ಕೆಯಲ್ಲಿ ಕನ್ನಡ ಚಿತ್ರರಂಗದ ಒಂದು ಡಜನ್ ...ರೋಗಳ ಹೆಸರಿದ್ದವು. ಆದರೆ ರೆಬೆಲ್ ಸ್ಟಾರ್ ...ಬರೀಶ್ ಹೊರತಾಗಿ ಬೇರೆ ಯಾವ ನಟನೂ ...ಜರಾಗಲಿಲ್ಲ ಎಂದರೆ ನಮ್ಮ ಚಿತ್ರರಂಗದಲ್ಲಿ ...ಷ್ಟು ಒಗ್ಗಟ್ಟಿದೆ ಎಂದು ಗೊತ್ತಾಗುತ್ತದಲ್ಲವೇ?


...ಮಿಕ್ ರಾಜನ ಮತ್ತೊಂದು ಗಿಮಿಕ್



...ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ದಿನದಿಂದಲೇ ...ಮ್ ಪ್ರಚಾರ ಮತ್ತು ಗಿಮಿಕ್‌ಗಳಿಂದ ...ದ್ದಿಮಾಡುತ್ತಿರುವ ವ್ಯಕ್ತಿ. ವಾಸ್ತವವಾಗಿ ಶಿವಣ್ಣನ ...ರನೇ ಚಿತ್ರವನ್ನು ತಮ್ಮ ವಜ್ರೇಶ್ವರಿ ಸಂಸ್ಥೆಯಿಂದ ನಿರ್ಮಿಸಬೇಕೆಂಬುದು ಪಾರ್ವತಮ್ಮ ರಾಜ್‌ಕುಮಾರ್ ಅವರ ಆಶೆಯಾಗಿತ್ತು. ಆದರೆ ಅವರಿಗೆ ದುಂಬಾಲು ಬಿದ್ದ ಪ್ರೇಮ್ ತಾನೇ ಆ ಚಿತ್ರವನ್ನು ನಿರ್ಮಿಸಿ-ನಿರ್ದೇಶಿಸುವುದಾಗಿ ಹೇಳಿದರು. ಮಾತ್ರವಲ್ಲ, ಅದು ಸೂಪರ್ ಹಿಟ್ 'ಜೋಗಿ'ಯ ಭಾಗ ಎರಡಾಗಿರುತ್ತದೆ ಎಂದರು. ಶಿವರಾಜ್‌ಕುಮಾರ್ ಕೂಡ ಹಿಟ್ ಚಿತ್ರಕ್ಕಾಗಿ ಹವಣಿಸುತ್ತಿರುವಾಗ ಅವರ ನೂರನೆ ಚಿತ್ರ ಸಲೀಸಾಗಿ ಪ್ರೇಮ್ ಮಡಿಲಿಗೆ ಬಿತ್ತು.

ಈಗ ಈ ಅವಕಾಶವನ್ನು ಪ್ರೇಮ್ ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಕಳೆದ ವರ್ಷ ಅಣ್ಣಾವ್ರ ಬರ್ತ್‌ಡೇ ದಿನದಂದೇ ಈ ಚಿತ್ರ ಸೆಟ್ಟೇರುತ್ತದೆ ಎಂದು ಘೋಷಿಸಿ ಆಗಲೂ ಈ ಚಿತ್ರಕ್ಕೆ ಪ್ರಚಾರ ಗಿಟ್ಟಿಸಿದ್ದರು. ಆದರೆ ಆಗ ಈ ಚಿತ್ರ ಆರಂಭಗೊಂಡಿರಲಿಲ್ಲ. ಆಮೇಲೆ ಶಿವಣ್ಣನಿಗೆ ಅಘೋರಿಯ ಮೇಕಪ್ ಮಾಡಿಸಿ ಅದಕ್ಕೂ ಟಿವಿಯಲ್ಲಿ ಪ್ರಚಾರ ಪಡೆಯಲಾಯಿತು. ಕೊನೆಗೆ ಮೊನ್ನೆ ಶಿವಣ್ಣನ ಬರ್ತ್‌ಡೇ ಎಂದೇ ಚಿತ್ರವನ್ನು ಪ್ರಾರಂಭಿಸಿದ್ದಾರೆ ಪ್ರೇಮ್.


...ಕೋಟಿ ನಿರ್ಮಾಪಕಿ ರಕ್ಷಿತಾ!



ಶಿವರಾಜ್‌ಕುಮಾರ್ ಮತ್ತು ಪ್ರೇಮ್ ಜೋಡಿಯ ಈ ಚಿತ್ರ ಹೇಗೆ ಶಿವಣ್ಣನ 100ನೇ ಚಿತ್ರವೋ ಹಾಗೆಯೇ ರಕ್ಷಿತಾ-ಪ್ರೇಮ್ ನಿರ್ಮಾಣದ ಮೊದಲನೇ ಚಿತ್ರ ಕೂಡ ಹೌದು. ಹಲವರ ಪ್ರಕಾರ ಈ ಚಿತ್ರದ ಬಜೆಟ್ ಕಡಿಮೆ ಎಂದರೂ ಐದು ಕೋಟಿ ರೂಪಾಯಿಗಳು. ಈತನಕ ಕೋಟಿಗಟ್ಟಲೆ ಹಣ ಸುರಿದು ಚಿತ್ರ ಮಾಡುವ ಮೂಲಕ 'ಕೋಟಿ ನಿರ್ಮಾಪಕ' ಎಂಬ ಬಿರುದು ಪಡೆದಿದ್ದವರು ರಾಮು. ಆದರೀಗ ಆ ಗೌರವವನ್ನು ರಾಮು ಕೈಯಿಂದ ರಕ್ಷಿತಾ ಕಸಿದುಕೊಂಡಿದ್ದಾಳೆ.

ಇತ್ತೀಚಿನ ಯುವ ನಾಯಕ ನಟರುಗಳಲ್ಲಿ ಶಿವರಾಜ್‌ಕುಮಾರ್‌ರಷ್ಟು ವೇಗವಾಗಿ ಯಾರೂ ಸೆಂಚುರಿ ಬಾರಿಸಿಲ್ಲ. ಶಿವರಾಜ್‌ಕುಮಾರ್‌ಗಿಂತಲೂ ಮುನ್ನ ಚಿತ್ರರಂಗವನ್ನು ಪ್ರವೇಶಿಸಿದ ರವಿಚಂದ್ರನ್ ಮೊನ್ನೆಯಷ್ಟೇ 'ಹೂ' ಚಿತ್ರದ ಮುಖಾಂತರ ಅರ್ಧ ಸೆಂಚುರಿ ಬಾರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಹಾಗೆಯೇ ಶಿವಣ್ಣನ ಸಮಕಾಲೀನರಾದ ಶಶಿಕುಮಾರ್, ಶ್ರೀಧರ್, ರಮೇಶ್, ದೇವರಾಜ್ - ಇವರ್‍ಯಾರೂ ಇನ್ನೂ ಸೆಂಚುರಿ ಬಾರಿಸಿಲ್ಲ.

100ನೇ ಚಿತ್ರಕ್ಕೆ 3 ಊಟ!



ಶಿವರಾಜ್‌ಕುಮಾರ್ ಸೆಂಚುರಿ ಬಾರಿಸಿದ ಸಂಭ್ರಮವನ್ನು ಅವರ ಕುಟುಂಬದವರು ತಮ್ಮದೇ ಆದ ರೀತಿಯಲ್ಲಿ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಅದರಂತೆ ಬರುವ ಶುಕ್ರವಾರ ಮಾಧ್ಯಮದ ಪ್ರತಿನಿಧಿಗಳನ್ನೆಲ್ಲ ಮನೆಗೆ ಕರೆಸಿ ತಮ್ಮ ಮನೆಯಂಗಳದಲ್ಲಿ 'ಮನದ ಮಾತು-ಮನೆಯೂಟ' ಏರ್ಪಡಿಸಿದ್ದಾರೆ. ಅದರ ಮಾರನೆ ದಿನ ಶನಿವಾರವಂತೂ ಶಿವಣ್ಣನೊಂದಿಗೆ ನಟಿಸಿದ ನಾಯಕಿಯರಿಗೂ, ಚಿತ್ರ ನಿರ್ದೇಶಿಸಿದ ನಿರ್ದೇಶಕರುಗಳಿಗೂ, ನಿರ್ಮಿಸಿದ ನಿರ್ಮಾಪಕರುಗಳಿಗೂ ತಮ್ಮ ಮನೆಯಂಗಳದಲ್ಲೇ ಒಂದು ಭರ್ಜರಿ ಔತಣಕೂಟ ಏರ್ಪಡಿಸಿದ್ದಾರೆ. ಅದಾದ ನಂತರ ಒಂದು ವಾರದ ಬಳಿಕ ತಮ್ಮ ಕುಟುಂಬದ ಸದಸ್ಯರಿಗಾಗಿ ಮತ್ತೊಂದು ಭರ್ಜರಿ ಊಟ.

ಇದೆಲ್ಲ ಒಂದು ರೀತಿಯಲ್ಲಿ ಶಿವಣ್ಣನ ಏಳಿಗೆಗೆ ಸಹಕರಿಸಿದ ಎಲ್ಲಾ ಮಹನೀಯರನ್ನು ನೆನಪಿಸಿಕೊಳ್ಳುವ ಕಾರ್ಯಕ್ರಮ ಎನ್ನುತ್ತಾರೆ ಶ್ರೀಮತಿ ಗೀತಾ ಶಿವರಾಜ್‌ಕುಮಾರ್. ಈ ಇಡೀ ಕಾರ್ಯಕ್ರಮದ ಕಲ್ಪನೆ ಮತ್ತು ಜವಾಬ್ದಾರಿಯನ್ನು ಗೀತಾ ಅವರೇ ವಹಿಸಿಕೊಂಡಿದ್ದು, ಅದಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಸಿದ್ಧತೆಯನ್ನು ಸಹ ಮಾಡಿಕೊಳ್ಳುತ್ತಿದ್ದಾರೆ. ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಈ ರೀತಿ Thanks giving ಸಮಾರಂಭವನ್ನು ಯಾರೂ ಈ ಹಿಂದೆ ಹಮ್ಮಿಕೊಂಡಿರಲಿಲ್ಲ ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಮಲೈ ಮಹದೇಶ್ವರ ಬೆಟ್ಟ ಮುಕ್ಕುತ್ತಿದ್ದಾಳೆ ವಿಜಯಾ ಮೇಡಮ್ಮು!



ಕೊಳ್ಳೇಗಾಲ ತಾಲ್ಲೂಕಿನ ಮಲೈ ಮಹದೇಶ್ವರ ಬೆಟ್ಟದ ಸುತ್ತ ಭ್ರಷ್ಟಾಚಾರದ ಕಮಟು ದಟ್ಟೈಸಿದೆ. ರಾಜ್ಯಲ್ಲಿ ಭರಪೂರ ಆದಾಯ ತರುವ ದೇವಸ್ಥಾನಗಳಲ್ಲಿ ಎರಡನೇ ಸ್ಥಾನದಲ್ಲಿರುವ ಮಲೈ ಮಹದೇಶ್ವರ ಬೆಟ್ಟದ ಕೋಟಿ ಕಿಮ್ಮತ್ತಿನ ಖಜಾನೆಗೆ ದಿನನಿತ್ಯ ಕನ್ನ ಕೊರೆಯಲಾಗುತ್ತಿದೆ. ಈ ಪವಿತ್ರ ಕೆಲಸವನ್ನು ಭಕ್ತಿಯಿಂದ ಮಾಡುತ್ತಿರುವುದು ಬೇರ್‍ಯಾರೂ ಅಲ್ಲ, ಈ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎ. ವಿಜಯಾ ಎಂಬಾಕೆ. ಈಕೆಯ ಧನದಾಹ ಕಂಡು ಮಾದೇಶ್ವರನೇ ಕಂಗಾಲಾದಂತಿದೆ!

ಬೆಂಗಳೂರಿನವಳಾದ ವಿಜಯಾ ಈ ಭಾಗದ ಮಾಜಿ ಶಾಸಕಿ ಪರಿಮಳಾ ನಾಗಪ್ಪರ ಕಟ್ಟಾ ಶಿಷ್ಯೆ. ಈಗ್ಗೆ ಮೂರು ವರ್ಷಗಳ ಹಿಂದೆ ಪರಿಮಳಾ ಈಕೆಯನ್ನು ಬೆಟ್ಟದ ಇ.ಓ. ಆಗಿ ತಂದು ಕೂರಿಸಿದರು. ಹಾಗೆ ಬಂದು ಕೂರುತ್ತಲೇ ಕಳ್ಳ ಬುದ್ಧಿಗೆ ಚಾಲನೆ ನೀಡಿದ ವಿಜಯಾ ಪ್ರತೀದಿನ ಬರುವ ಆದಾಯದಲ್ಲಿ ಕತ್ತರಿಯಾಡಿಸಹತ್ತಿದಳು.


ಪರಿಮಳಾ ನಾಗಪ್ಪ

ವಿಜಯಾಳ ಧನದಾಹದ ಹಿಂದೆ ಪರಿಮಳ ನಾಗಪ್ಪರ ಹಣಬಾಕತನದ ಹುನ್ನಾರವಿರುವುದು ಬಹಿರಂಗ ಸತ್ಯ. ಜೆಡಿಎಸ್ ತೊರೆದು ಬಿಜೆಪಿಗೆ ಹಾರಿದ ಪರಿಮಳಾ ರಾಜ್ಯಾಧಿಕಾರ ಬಿಜೆಪಿ ತೆಕ್ಕೆಗೆ ಬೀಳುತ್ತಲೇ ಬೆಟ್ಟದ ಹುಂಡಿಯತ್ತ ಕಣ್ಣಿಟ್ಟರು. ಈ ಸಂಬಂಧ ತಾನು ಹೇಳಿದ್ದಕ್ಕೆಲ್ಲ ಗೋಣಾಡಿಸುವ ವಿಜಯಾಳನ್ನು ಬೆಟ್ಟದ ಇ.ಓ. ಆಗಿ ತಂದು ಕೂರಿಸಿದರು.


ನರೇಂದ್ರ

ಈಕೆಯ ಧನದಾಹ ಯಾವ ಹಂತ ತಲುಪಿದೆಯೆಂದರೆ, ಮಾದೇಶ್ವರನ ಭಕ್ತರಿಗೆ ಅನುಕೂಲವಾಗಲೆಂದು ದಾನದ ಹಣದಲ್ಲಿ ಕಟ್ಟಿಸಿರುವ ಶಿವದರ್ಶಿನಿ, ಗಿರಿದರ್ಶಿನಿ ಹಾಗೂ ಶೈಲದರ್ಶಿನಿ ಮುಂತಾದ ವಸತಿ ಗೃಹಗಳನ್ನೇ ತನ್ನ ಆದಾಯದ ಮೂಲ ಮಾಡಿಕೊಂಡಿದ್ದಾಳೆ. ಬೆಟ್ಟದ ನಿಜ ಭಕ್ತರನ್ನು ನಿರ್ದಯವಾಗಿ ಸುಲಿಯುತ್ತಿರುವ ಈಕೆ ವಸತಿ ಗೃಹಗಳ ವಿದ್ಯುತ್, ನೀರು ಮುಂತಾದ ಸೌಕರ್ಯಗಳಿಗೆ ನಿಗದಿತ ದರಕ್ಕಿಂತ ಮೂರು ಪಟ್ಟು ಹೆಚ್ಚು ಹಣ ದೋಚುತ್ತಿದ್ದಾಳೆ. ಈ ಹಡಬೆ ವಹಿವಾಟಿನಿಂದಲೇ ಇಂದು ಕೋಟಿಗೆ ತೂಗುತ್ತಿದ್ದಾಳೆ.

ಈಕೆ ಯಾವ ಪರಿ ಅಖಾಡಕ್ಕಿಳಿದಿದ್ದಾಳೆಂದರೆ ಈ ವಸತಿ ಗೃಹಗಳನ್ನು ಕಟ್ಟಿಸಿಕೊಟ್ಟ ದಾನಿಗಳೇ ಖುದ್ದಾಗಿ ಬಂದರೂ ಹೆಚ್ಚಿನ ಹಣ ಕೊಟ್ಟೇ ಉಳಿದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ! ದಾನಿಗಳಿಗೆ ಉಚಿತ ವಸತಿ ಸೌಕರ್ಯ ಕಲ್ಪಿಸಿಕೊಡಬೇಕೆಂಬ ಆಡಳಿತ ಮಂಡಳಿಯ ನಿಬಂಧನೆಯನ್ನು ಎಡಗಾಲಲ್ಲಿ ಒದ್ದಿರುವ ವಿಜಯಾ ಆ ಮೂಲಕವೂ ಆಮದಾನಿ ಹೆಚ್ಚಿಸಿಕೊಳ್ಳುತ್ತಿದ್ದಾಳೆ. ಸಣ್ಣ ದಾನಿಗಳನೇಕರು ಇದನ್ನು ಪ್ರಶ್ನಿಸುವ ಗೋಜಿಗೆ ಹೋಗದೆ ತೆಪ್ಪಗಿರುವುದು ವಿಜಯಾಳ ಧನದಾಹಕ್ಕೆ ಹಾದಿ ಸುಗಮಗೊಳಿಸಿದೆ.

ಇನ್ನು ಬೆಟ್ಟದ ದಾಸೋಹ ಭವನದಲ್ಲೂ ವಿಜಯಾ ಮೇಡಂನ 'ಸ್ವಾಹಾ' ಕಾರ್ಯಾಚರಣೆ ತಡೆಯಿಲ್ಲದೆ ನೆರವೇರುತ್ತಿದೆ. ಬೆಟ್ಟದ ಭಕ್ತರಿಗೆ ಅನ್ನದಾಸೋಹ ಮಾಡುವ ಸದುದ್ದೇಶದಿಂದ ಬೆಟ್ಟಕ್ಕೆ ಭಕ್ತರು ಪ್ರತೀ ದಿನ ಮೂಟೆಗಟ್ಟಲೆ ಅಕ್ಕಿ, ರಾಗಿ, ತರಕಾರಿಗಳನ್ನು ತಂದು ಸುರಿಯುತ್ತಾರೆ. ದುರಂತವೆಂದರೆ ಕಡುಭ್ರಷ್ಟೆ ವಿಜಯಾ ದಾಸೋಹದ ಹೆಸರಲ್ಲೂ ಲಕ್ಷಾಂತರ ಬಿಲ್ ಗೀಚಿ ಆ ಹಣವನ್ನು ತನ್ನ ತಿಜೋರಿಗಿಳಿಸಿಕೊಳ್ಳುತ್ತಿದ್ದಾಳೆ.

ಇಷ್ಟು ಲಫಡಾ ನಡೆಸಿ ಕೋಟಿಗಳ ಲೆಕ್ಕದಲ್ಲಿ ಅವ್ಯವಹಾರ ನಡೆಸಿದರೂ ವಿಜಯಾಳ ಧನದಾಹ ಇಂಗುವುದಿಲ್ಲ. ಈಕೆ ಅದಕ್ಕಾಗಿ ಯಾವ ಮಟ್ಟಕ್ಕಿಳಿಯಲೂ ಹೇಸುವ ಆಸಾಮಿಯಲ್ಲ. ಇದಕ್ಕೆ ಬೆಟ್ಟದ ಆಸುಪಾಸಲ್ಲಿ ಹೋಟೆಲ್, ಅಂಗಡಿ ಹಾಕಿಕೊಂಡು ಹೊಟ್ಟೆ ಹೊರೆಯುತ್ತಿರುವವರ ಪಡಿಪಾಟಲೇ ಸ್ಪಷ್ಟ ಸಾಕ್ಷಿ. ಈ ವಿಜಯಮ್ಮ ಇವರುಗಳಿಂದಲೂ ದಿನನಿತ್ಯ ಕಪ್ಪ ಪಡೆಯುತ್ತಾಳೆ!

ಇಷ್ಟೆಲ್ಲಾ ಅಪರಾತಪರಾ ನಡೆಸಿರುವ ವಿಜಯಾ ಕೆಲ ವಿಚಾರದಲ್ಲಿ ಪಕ್ಕಾ 'ಭಕ್ತೋದ್ಧಾರಕಿ'ಯ ಅವತಾರವೆತ್ತುತ್ತಾಳೆ, ಆ ಮೂಲಕವೇ ಹಣ ಹೊಡೆದುಕೊಳ್ಳುವ ದಾರಿ ಹುಡುಕುತ್ತಾಳೆ! ಇದಕ್ಕೆ ಆಡಳಿತ ಮಂಡಳಿ ವತಿಯಿಂದ ಖರೀದಿಸಲಾಗಿರುವ ಬಸ್‌ಗಳೇ ಸಾಕ್ಷಿ. 'ಭಕ್ತರಿಗೆ ಅನುಕೂಲವಾಗಬೇಕು' ಎಂಬ ಘೋಷಣೆಯೊಂದಿಗೆ ಬಸ್ ಖರೀದಿಸಿದ ವಿಜಯಾ ಬಸ್ ಹತ್ತುವ ಭಕ್ತರಿಗೆ ಟಿಕೆಟ್ ಕೊಡದೆ ಹೆಚ್ಚಿನ ಹಣ ಸುಲಿಗೆ ಮಾಡಿಸುತ್ತಿದ್ದಾಳೆ. ಇದು ಮಾಧ್ಯಮಗಳಲ್ಲಿ ಸುದ್ದಿಯಾದಾಗ ತಾತ್ಕಾಲಿಕವಾಗಿ ಹಡಬೆ ದಂಧೆ ನಿಲ್ಲಿಸಿದ್ದಳಾದರೂ ಇದೀಗ ಮತ್ತೆ ತಣ್ಣಗೆ ಚಾಲನೆ ನೀಡಿದ್ದಾಳೆ. ಇನ್ನು ಬಸ್‌ಗೆ ಬಳಸುವ ಡೀಸೆಲ್‌ಗೂ ನಾಲಿಗೆ ಚಾಚಿರುವ ಈಕೆ ಪ್ರತಿ ತಿಂಗಳ ಆದಾಯಕ್ಕೆ ಕಳ್ಳ ಲೆಕ್ಕ ಬರೆದು ಲಕ್ಷಗಳ ಲೆಕ್ಕದಲ್ಲಿ ಗೆಬರುತ್ತಿದ್ದಾಳೆ.

ಇನ್ನು ಬೆಟ್ಟದ ಭಕ್ತರು ಹರಕೆ ಹೊತ್ತು ಚಿನ್ನದ ತೇರೆಳೆಯುವ ಸಂಪ್ರದಾಯವೊಂದಿದೆ. ಚಾಲಾಕಿ ವಿಜಯಾ ಇದರಲ್ಲೂ ಹಣ ಗೆಬರಲು ನಿಂತು ಒಂದು ಬಾರಿ ಚಿನ್ನದ ತೇರೆಳೆಯಲು ಮೂರು ಸಾವಿರ ಕೀಳುತ್ತಿದ್ದಾಳೆ. ಆದರೆ ಲೆಕ್ಕದ ಪುಸ್ತಕದಲ್ಲಿ ಮಾತ್ರ ಚಿನ್ನದ ತೇರೆಳೆಯುವುದಕ್ಕೆ ಒಂದು ಸಾವಿರ ಅಂತ ಗೀಚುತ್ತಾಳೆ. ನೆನಪಿರಲಿ, ಬೆಟ್ಟದಲ್ಲಿ ಪ್ರತೀ ದಿನ ಚಿನ್ನದ ತೇರೆಳೆಯುವ ಭಕ್ತರ ಸಂಖ್ಯೆ ನೂರು ದಾಟುತ್ತದೆ!

ಈ ರೀತಿ ಕಂಡಲ್ಲೆಲ್ಲಾ ಹಣ ಗೆಬರುವ ಉಮೇದಿನಲ್ಲಿರುವ ವಿಜಯಾ ಮೇಡಂಗೆ ಬೆಟ್ಟದೊಳಗಿನ ಕೊಳಕುಗಳು ಕಾಣಿಸುತ್ತಿಲ್ಲ. ಇದರಿಂದಾಗಿಯೇ ಪಾಪ ಕಳೆದುಕೊಳ್ಳುವ ಸಲುವಾಗಿ ಅಂತರಗಂಗೆಯಲ್ಲಿ ಸ್ನಾನ ಮಾಡುವ ಭಕ್ತರು ರೋಗ ಅಂಟಿಸಿಕೊಂಡು ವಾಪಾಸಾಗುವಂತಾಗಿದೆ. ಯಾಕೆಂದರೆ ಅಸುಪಾಸಿನ ಬಹುತೇಕರು ತಂತಮ್ಮ ಟಾಯ್ಲೆಟ್ ಪೈಪನ್ನು ಅಂತರಗಂಗೆಗೆ ಹರಿಬಿಡುತ್ತಿದ್ದಾರೆ. ಈಯಮ್ಮ ಇದರಲ್ಲೂ ಡೀಲು ಕುದುರಿಸಿಕೊಂಡು ತೆಪ್ಪಗಿದ್ದಾಳೆಂಬ ಗುಮಾನಿಗಳೂ ಇವೆ.

ಇಡೀ ಆಡಳಿತ ಮಂಡಳಿಯನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ವಿಜಯಮ್ಮ ಎಲ್ಲವನ್ನೂ ಎಕ್ಕುಟ್ಟಿಸುತ್ತಿದ್ದಾಳೆ. ಇಲ್ಲಿನ ನೌಕರರೇ ಬೆಟ್ಟದ ಸುತ್ತಾ ಬಿಲ್ಡಿಂಗ್ ಎಬ್ಬಿಸಿ ಭಕ್ತರಿಗೆ ಬಾಡಿಗೆಗೆ ಬಿಡುತ್ತಿದ್ದರೆ, ಈ ಆಸಾಮಿ ಅವರಿಂದ ಕಪ್ಪ ಪಡೆದು ತೆಪ್ಪಗಿದ್ದಾಳೆ. ಜೊತೆಗೆ ಇಂಥಾ ಖಾಸಗಿ ಲಾಡ್ಜ್‌ಗಳಲ್ಲಿ ಅವ್ಯಾಹತವಾಗಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ.


ವಿಜಯಮ್ಮ

ತನ್ಮೂಲಕ ಬೆಟ್ಟದ ಪಾವಿತ್ರ್ಯವೂ ಹಾಳಾಗುತ್ತಿವೆ. ಇ... ಪರಿಹರಿಸಬೇಕಾದ ವಿಜಯಮ್ಮ 'ಕಪ್ಪ'ದ ಕೋಟೆ... ಕುರುಡಾಗಿ ಕುಕ್ಕರಿಸಿದ್ದಾಳೆ.

ಈಕೆಯ ಭ್ರಷ್ಟ ಚಟುವಟಿಕೆಯಿಂದ ಬೆಟ್ಟದ... ಭಕ್ತರು, ಆಸುಪಾಸಿನ ನಾಗರಿಕರು ರೋಸಿ ಹೋಗಿ... ಈ ಸಂಬಂಧ ಶಾಸಕ ನರೇಂದ್ರ ವಿಜಯಾಳನ್ನು ಎತ್ತ... ಮಾಡಿಸಲು ಪ್ರಯತ್ನಿಸಿದ್ದೂ ಆಗಿದೆ. ಆದರೆ ವಿಜ... ಮಾತ್ರ ಯಾವ ಆತಂಕಗಳೂ ಇಲ್ಲದೆ ನಿರಂತರ... ಮೇಯುತ್ತಿದ್ದಾಳೆ. ಇದಕ್ಕೆ ಒತ್ತಾಸೆಯಾಗಿರುವುದು ಪರಿ... ನಾಗಪ್ಪ.

ಮಾದೇಶ್ವರನ 'ಮಹಿಮೆ'ಗಳು ನಾಡಿನಾದ್ಯಂತ ಪ್ರ... ಆದರೆ ತನ್ನ ಪರಿಸರದಲ್ಲೇ ಇಷ್ಟೆಲ್ಲಾ ದಂಧೆ ನಡೆಯುತ್ತಿ... ಈ ಮಹಿಮೆಗಳು ಯಾಕೆ ವರ್ಕೌಟ್ ಆಗುತ್ತಿಲ್ಲವೆಂ... ಪ್ರಮುಖ ಪ್ರಶ್ನೆ. ವಿಜಯಾಳ ಭ್ರಷ್ಟ ತಾಂಡವದಿ... ಬೆಟ್ಟದ ಹೆಸರಿಗೇ ಕಳಂಕ ಬರುವ ಮುನ್ನ ಸಂಬಂಧಿಸಿ... ಎಚ್ಚೆತ್ತುಕೊಳ್ಳಬೇಕಿದೆ.

• ಕೊಳ್ಳೇಗಾಲ ಚಿಕ್ಕಮಾ...

ಮೊದಲು ಮೇಯ್ದವಳು ಕಮಲಮ್ಮ

ಬೆಟ್ಟದ ಸಂಪತ್ತು ಲಾಗಾಯ್ತಿನಿಂದಲೂ ಲೂಟಿಯಾಗುತ್ತಿದೆ. ಇಲ್ಲಿನ ಆಡಳಿತ ಮಂಡಳಿಯ ಸಾ... ವಹಿಸಿಕೊಳ್ಳುವ ಅನೇಕರು ಹಣ ಹೊಡೆಯುವ ಘನ ಉದ್ದೇಶದಿಂದಲೇ ವಕ್ಕರಿಸುತ್ತಾ ಬಂದಿದ್ದಾರೆ.

ವಿಜಯಾಗಿಂತ ಮೊದಲು ಇ.ಓ. ಆಗಿದ್ದ ಕಮಲಮ್ಮ ಕೂಡಾ ಇದಕ್ಕೆ ಹೊರತಾಗಿಲ್ಲ. ಬರಿಗೈಲಿ ಬ... ಕಮಲಮ್ಮ ತುಂಬಿದ ಸೂಟ್‌ಕೇಸುಗಳೊಂದಿಗೆ ವಾಪಾಸಾಗಿದ್ದನ್ನು ಜನರಿನ್ನೂ ಮರೆತಿಲ್ಲ. ಈಕೆಯ ಅವಧಿಯ... ಬೆಟ್ಟದಲ್ಲಿ ನಡೆಯಬಾರದ್ದೆಲ್ಲ ನಡೆದುಹೋಗಿದೆ. ಪ್ರತಿಯೊಂದರಲ್ಲೂ ಲಂಚಕ್ಕಾಗಿ ಕೈಚಾಚುತ್ತಿದ್ದ ಕಮಲ... ಆದಾಗಲೇ ಆಡಳಿತ ಮಂಡಳಿಯನ್ನು ಗಬ್ಬೆಬ್ಬಿಸಿ ಹೋಗಿದ್ದಾಳೆ.

ಇಂಥ ಕಮಲಮ್ಮ ಇ.ಓ. ಸ್ಥಾನದಿಂದ ಇಳಿದುಹೋಗುತ್ತಲೇ ಬೆಟ್ಟದ ನಿಜ ಭಕ್ತರು ಇನ್ನಾದರೂ ಸರಿಯಾದಿ... ಅಂತ ಖುಷಿಯಾಗಿದ್ದರು. ಆದರೆ ಪರಿಮಳಾರ ಕೃಪೆಯಿಂದ ಕಮಲಮ್ಮನನ್ನೇ ನಿವಾಳಿಸಿ ಬಿಸಾಡುವಂಥ ವಿಜ... ಬಂದು ಕುಳಿತಿದ್ದಾಳೆ.

ಸದ್ಯ ಬೆಟ್ಟದ ಪರಿಸ್ಥಿತಿ ನೆಟ್ಟಗಾಗುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ.

ಕೊಪ್ಪಳ: ಸ್ಯಾಡಿಸ್ಟ್ ಮಲ್ಲಿಯ ಕಾಮಕಾಂಡ

ಕೊಪ್ಪಳ ಜಿಲ್ಲೆಯಲ್ಲೀಗ ಮತ್ತೊಂದು ಸೆಕ್ಸ್ ರಾದ್ಧಾಂತ ಸುದ್ದಿಯಾಗಿದೆ. ಈ ಸಲವೂ ಅದು ಶಿಕ್ಷಣರಂಗಕ್ಕೆ ಸಂಬಂಧಿಸಿದವನೊಬ್ಬನ ಭಾನಗಡಿಯಾಗಿರುವುದರಿಂದ ಮಾನವಂತ ಶಿಕ್ಷಕರು ಮುಜುಗರಪಡುವಂತಾಗಿದೆ.


ಸದ್ಯ ಅಧ್ವಾನ ಎಬ್ಬಿಸಿದವ ಮಲ್ಲಿಕಾರ್ಜುನ ಹೊಸಮನಿ ಎಂಬ ಘಟಿಂಗ. ಈತ ಖಾಸಗಿ ಶಾಲೆಯೊಂದರ ಮಾಲೀಕನಾಗಿದ್ದು, ತಾನು ಲಾಡ್ಜ್‌ವೊಂದರಲ್ಲಿ ಸ್ತ್ರೀಯೊಬ್ಬರೊಂದಿಗೆ ಮಲಗಿದ ಫೋಟೋಗಳನ್ನು ಮೊಬೈಲ್ ಮೂಲಕ ಹಂಚುತ್ತ ಹೊರಟಿದ್ದಾನೆ. ಹೀಗಾಗಿ ಈಗ ಜಿಲ್ಲೆಯ ಪಡ್ಡೆಗಳ, ಕಾಲೇಜ್ ಹುಡುಗರ ಮೊಬೈಲ್‌ಗಳಲ್ಲಿ ಮಲ್ಲಿಕಾರ್ಜುನನ ಸೆಕ್ಸ್ ಫೋಟೋಗಳದ್ದೇ ಭರ್ಜರಿ ಷೋ ಆಗಿಬಿಟ್ಟಿದೆ. ಇವನ ಈ ವಿಕೃತಿಗೆ ಸಿಲುಕಿದ ಹೆಣ್ಮಗಳು ವಿಲಿವಿಲಿ ಒದ್ದಾಡುವಂತಾಗಿದೆ.

ಈ ಹಿಂದೆ ಒಂದಿಬ್ಬರು ಲೋಫರ್ ಶಿಕ್ಷಕರಿಂದಾಗಿ ಕೊಪ್ಪಳದ ಸರ್ಕಾರಿ ಶಾಲೆಗಳ ಬಗ್ಗೆ ಜನರಲ್ಲಿ ಅಸಹ್ಯ ಮೂಡಿತ್ತು. ಶಂಕ್ರಪ್ಪ ಹಳ್ಳಿಗುಡಿ ಎಂಬ ಬಿ.ಆರ್.ಸಿ. ಅಧಿಕಾರಿ ಶಿಕ್ಷಕಿಯೊಬ್ಬರನ್ನು ಕಾಡಿ ಕಾಡಿ ಸಾಕಾಗದೇ ಅಶ್ಲೀಲ ಮೆಸೇಜ್ ಮಾಡಿ ಪರಾರಿಯಾಗಿದ್ದ. ಕೂಕನಪಳ್ಳಿಯ ದೇವಪ್ಪ ಎಂಬ ಮಾಸ್ತರನ ಲೈಂಗಿಕ ಕಿರುಕುಳ ತಾಳಲಾರದೇ ಶಿಕ್ಷಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಹಾಗೆಯೇ ಬನ್ನಿಕೊಪ್ಪ ಶಾಲೆಯ ಶಿಕ್ಷಕಿಯೊಬ್ಬರು ಇಂತಹ ಲೈಂಗಿಕ ಕಾಟ ತಾಳಲಾರದೇ ಶಾಲೆಗೆ ಹೋಗುವುದನ್ನು ಬಿಟ್ಟು ವರ್ಷವೇ ಉರುಳಿದೆ. ಕೆಲವೇ ಕೆಲವು ಇಂತಹ ಲೋಫರ್ ಶಿಕ್ಷಕರ ಕಾಟವೇನೋ ಈಗ ಕಡಿಮೆಯಾಗಿದೆ. ಹಾಗೆಯೇ ಅತ್ಯುತ್ಸಾಹದ ಯುವ ಶಿಕ್ಷಕರ ಕಾರಣದಿಂದಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ, ಹಾಜರಾತಿಯೂ ಹೆಚ್ಚಾಗಿದೆ.

ಆದರೀಗ ಖಾಸಗಿ ಶಾಲೆಯ ಮಾಲೀಕ ಹೊಸಮನಿ ಮಲ್ಲನೀಗ ತನ್ನ ಖಾಸಗಿ 'ಮಲ್ಲಯುದ್ಧ' ಪ್ರಸಂಗಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುತ್ತ ಪಡ್ಡೆಗಳಲ್ಲಿ ರೋಮಾಂಚನವನ್ನು, ಜನರಲ್ಲಿ ಹೇಸಿಗೆಯನ್ನೂ ಮೂಡಿಸುತ್ತಿದ್ದಾನೆ. ಇವನ ವಿರುದ್ಧ ರೈತಸಂಘ ದೂರಿತ್ತರೂ ಎಸ್ಪಿ ಈಶ್ವರಚಂದ್ರ ವಿದ್ಯಾಸಾಗರ್ ಮಾತ್ರ ಸುಮ್ಮನೇ ಇದ್ದಾರೆ.

ಕಾಮಾರ್ಜುನನ ಸೆಕ್ಸಾವಳಿ

ಈ ವರದಿಯ ವಿಲನ್ ಮಲ್ಲಿಕಾರ್ಜುನ ಹೊಸಮನಿ ಮೂಲತಃ ಧನದಾಹಿ, ಹೆಣ್ಣುಬಾಕ. ಈತ ಕಾಂಗ್ರೆಸ್ಸು, ಜೆಡಿಎಸ್ಸು, ಮುತಾಲಿಕನ ಸೇನೆ, ಜಯ ಕರ್ನಾಟಕ ಎಲ್ಲಾದರೂ ಇರಬಲ್ಲ. ಆ 'ಬಲ'ದಿಂದಲೇ ತನ್ನ ಕಾಮಕಾಂಡಗಳನ್ನು ಜೀರ್ಣಿಸಿಕೊಳ್ಳಬಲ್ಲ. ಇವನ ವಿಕೃತಿಯೆಂದರೆ ಗ್ರಾಮೀಣ ಪ್ರದೇಶದ ಮುಗ್ಧ ಮಹಿಳೆಯರನ್ನು ಪುಸಲಾಯಿಸಿ ಕರೆದೊಯ್ದು ಚಕ್ಕಂದವಾಡುವುದು, ಅದನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಸಿ ಮೊಬೈಲ್ ಮೂಲಕ ಹಂಚುವುದು! ಈಗ ಗಂಗಾವತಿಯ ಸಿದ್ಧಾಪುರ ಕ್ಯಾಂಪ್‌ನ ವಿಧವೆಯೊಬ್ಬರ ಜೊತೆ ತೆಗೆಸಿಕೊಂಡ ಅಶ್ಲೀಲ ಫೋಟೋಗಳನ್ನು ರಾತ್ರಿಯ ನಶೆಯಲ್ಲಿ ಎಂ.ಎಂ.ಎಸ್. ಮೂಲಕ ತನ್ನ ಪರಿಚಯದವರಿಗೆ ಕಳಿಸಿ, ತನ್ನ ಪರಾಕ್ರಮ ಮೆರೆದಿದ್ದಾನೆ. ಈ ಹಿಂದೆ ಈತನ ಕಾಮುಕ ಮಿತ್ರಮಂಡಳಿಗಷ್ಟೇ ತಲುಪುತ್ತಿದ್ದ ಅಶ್ಲೀಲ ಫೋಟೋಗಳು ಈ ಸಲ ಸಾರ್ವಜನಿಕವಾಗಿ 'ಪ್ರದರ್ಶನ'ಗೊಳ್ಳಲೂ ಈತನೇ ಕಾರಣ.



ಗಂಗಾವತಿ ತಾಲ್ಲೂಕು ಸಿದ್ದಾಪುರ ವನಾದ ಈ ಮನೆಹಾಳ ಮಲ್ಲಿಕಾರ್ಜುನ ಕೆಲಕಾಲ ಕಾಂಗ್ರೆಸ್ ಪಾರ್ಟಿಯ ಪಾರ್ಟ್ ಟೈಮ್ ರಾಜಕಾರಣಿಯಾಗಿದ್ದ. ಒಂದಿಷ್ಟು ಕಾಲ ಪತ್ರಕರ್ತನೂ ಆಗಿದ್ದ ಈ ಪಾಪಿ. ಆಮೇಲೆ ಪುಡಿಪುಡಿ ಸಂಘಟನೆ ಹೆಸರಲ್ಲಿ ಬ್ಲ್ಯಾಕ್‌ಮೇಲ್ ಮಾಡಿ ಕೆ... ಸಿಕ್ಕುಬಿದ್ದು ಪರಾರಿಯಾಗಿದ್ದ. ಮುಂದೆ ಪಟ್ ಅ... ಸಂಘಪರಿವಾರಿಯಾಗಿಬಿಟ್ಟ. ನೆನಪಿರಲಿ, ಈ ಎಲ್ಲ ಅಡ್ಡ... ಹಿಡಿಬಿಟ್ಟ ಕೆಲಸಗಳ ನೆರವಿನಿಂದಲೇ ಇವನು ಕಲ್ಲೆ... ಪ್ರಾಥಮಿಕ ಶಾಲೆಯನ್ನು ತೆರೆದು 'ಶಿಕ್ಷಣೋದ್ಯಮಿ'... ಆಗಿಬಿಟ್ಟ. ಇದರ ದುಷ್ಪರಿಣಾಮವೆಂದರೆ, ಈ ಗಟಿ... ಈತ ಶಿಕ್ಷಕಿಯಾಗಲು ಬರುವ ಹೆಣ್ಮಕ್ಕಳನ್ನು ಬಳಸಿಕೊ...

'ವಿಧಾನಸೌಧದ ಪಾವಿತ್ರ್ಯವೆ ಹಾಳು ಮಾಡಿದರಲ್ರೀ'


ಯಡಿಯೂರಪ್ಪನ ಯಡವಟ್ಟು ಸರಕಾರ ಗುಂಡೂರಾಯನ ಸರಕಾರವನ್ನು ನೆನಪಿಗೆ ತರುತ್ತಿದೆಯಂತಲ್ಲಾ, ಇಂತಹ ಸರಕಾರವೊಂದನ್ನು ಕಷ್ಟಪಟ್ಟು ತಂದು ಕೂರಿಸಿದ ಮಾನ್ಯ ದೇವೇಗೌಡರು, ಗಣಿಗಾರರ ವಿರುದ್ಧ ತೊಡೆತಟ್ಟಿದ ಸಿದ್ದರಾಮಯ್ಯನನ್ನು ಹುಡುಕಿಕೊಂಡು ಹೋಗಿ ಕೈ ಕುಲುಕೇಬಿಟ್ಟರಂತಲ್ಲಾ, ಇದನ್ನು ಕಣ್ಣಾರೆ ಕಂಡ ಮಳವಳ್ಳಿಯ ಅನ್ನದಾನಿ ದನಿ ಎತ್ತರಿಸಿ "ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡನಾ ಹಾಯಾಗಿ ಮಣ್ಣಾ ತುಣಿದಾನ" ಎಂದು ಹಾಡತೊಡಗಿದನಂತಲ್ಲಾ, ಅನ್ನದಾನಿ ಕುಣಿಯುವುದನ್ನು ನೋಡಿ ಮುಜುಗುರಕ್ಕೆ ಒಳಗಾದ ಮಂಡ್ಯದ ಶ್ರೀನಿವಾಸ್ "ಇದ್ಯಾವ ಸೀಮೆ ಹಾಡಲೆ ನಿಂದು?" ಎಂದು ಕೇಳಲಾಗಿ "ಇದು ಫೇಮಸ್ ಜನಪದ ಹಾಡು. ಗೌಡರನ್ನ ನೋಡಿದಾಗೆಲ್ಲಾ ನೆನಪಿಗೆ ಬರುತ್ತೆ. ಅವರ ಕುಣಿತಕ್ಕೆ ಸಿಕ್ಕ ಲೀಡರುಗಳೆಲ್ಲಾ ಮಣ್ಣಾಗಿ ಹೋದ್ರು. ಈಗ ಉಳಿದಿರೋನು ಒಬ್ಬನೇ ಒಬ್ಬ ಸಿದ್ದು. ಅದಕ್ಕೆ ನನಗೆ ಆ ಹಾಡು ನೆನಪಿಗೆ ಬಂತು" ಎಂದು ಕೂಡಲೇ ಹಾಡನ್ನು ಬದಲಿಸಿಕೊಂಡು "ಯಾತಕ್ಕೆ ಸೋತು ಹೋದೆನೋ ಶಿವಶಿವ ಊರೇ ತಲ್ಲಣಿಸುತಾದೊ" ಎಂದರಂತಲ್ಲಾ, ಥೂತ್ತೇರಿ!

* * * * * * * *

ಸದ್ಯದ ಸನ್ನಿವೇಶದಿಂದ ತುಂಬಾ ಜವಾಬ್ದಾರಿಯುತವಾಗಿ ಮಾತನಾಡುತ್ತಿರುವ ಪಂಜರಾಪೋಲು ಪತ್ರಕರ್ತರು ತಮ್ಮ ಎಂದಿನ ಉಪದೇಶಕ್ಕೆ ಎಂಜಲು ಪದ ಬಳಸಿಕೊಂಡು "ಇದುಬೇಕಿತ್ತಾ, ಅದುಬೇಕಿತ್ತಾ, ಇದೆಲ್ಲಾ ಯಾಕೆ ಬೇಕಿತ್ತು" ಎಂದು ಕೆರೆಯುತ್ತ ಕುಳಿತಿದ್ದಾರಂತಲ್ಲಾ, ಅತ್ತ ಸುವರ್ಣ ಮುಖಿ ಚಾನಲ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ಮಿಸ್ಟರ್ ಗರಗಸ, ತನ್ನ ಹುಸುವೇ ಚೀಲದಿಂದ ಏನನೋ ತೆಗೆದು ದಾಖಲಿಸುವವನಂತೆ ಆಡುತ್ತಿರಬೇಕಾದರೆ, ಅವನೆದುರು ಲಲಿತ ಮಾತ್ರೆ ಮಾರುವ ಗಿರಾಕಿಯೊಬ್ಬ "ಗಣಿ ರೆಡ್ಡಿಗಳು ರಾಜೀನಾಮೆ ಕೊಟ್ಟುಬಿಟ್ಟರೆ ವ್ಯವಸ್ಥೆ ಸರಿಯಾಗಿಬಿಡುತ್ತಾ?" ಎಂದು ಕಂಡಕಂಡವರಲ್ಲಿ ಕೇಳುತ್ತಿದ್ದಾನಂತಲ್ಲಾ, ಇತ್ತ ಸಂಯುಕ್ತ ಕರ್ನಾಟಕದ ಕರ್ಮಾಚಾರಿಗಳು ವಿಧಾನಸೌಧದಲ್ಲಿ ಹಬ್ಬಿರುವ ಬಿರಿಯಾನಿ ವಾಸನೆ ಇಲ್ಲದಂತಾಗಬೇಕಾದರೆ ಅರಬ್ಬೀ ದೇಶದ ಸುಗಂಧ ದ್ರವ್ಯವನ್ನೇ ತಂದು ಸಿಂಪಡಿಸಬೇಕು" ಎಂದು ಮೂಗುಮುಚ್ಚಿಕೊಂಡವಂತಲ್ಲಾ, ಥೂತ್ತೇರಿ!

* * * * * * * *

ಗಣಿ ಕಳ್ಳರಿಗೆ ಸರಿಯಾಗಿ ಬುದ್ಧಿ ಕಲಿಸಲೆಂದು ವಿರೋಧ ಪಕ್ಷಗಳೆಲ್ಲಾ "ಬೆಂಗಳೂರಿನಿಂದ ಬಳ್ಳಾರಿಯವರೆಗೂ ಪಾದಯಾತ್ರೆ ಮಾಡಿ ಸಭೆ ಮಾಡುತ್ತೇವೆ" ಎಂದ ಕೂಡಲೇ, ಶ್ರೀರಾಮುಲು ಎಂಬ ಕಾಯಿಲೆ ಮನುಷ್ಯ "ನಾವೂ ಕೂಡ ಬಳ್ಳಾರಿಯಿಂದ ಚಾಮುಂಡಿ ಬೆಟ್ಟದವರೆಗೂ ನಡಕೊಂಡೇ ಪಾದಯಾತ್ರೆ ಮಾಡುತ್ತೇವೆ" ಎಂದನಂತಲ್ಲಾ, ಇದನ್ನು ಕೇಳಿಸಿಕೊಂಡ ರಾಮನಗರದ ಜನ "ರಾಮುಲು ಬಂದರೆ ಸರಿಯಾದ ಸನ್ಮಾನ ಮಾಡಿ ಕಳಿಸುತ್ತೇವೆ. ಇಲ್ಲಿ ಶುರುವಾದ ಸನ್ಮಾನದ ಹಾವಳಿಯಿಂದ ಮತ್ತೆ ಬಳ್ಳಾರಿ ತಲುಪಬೇಕಾಗುತ್ತೆ" ಎಂದು ತಯಾರಾಗುತ್ತಿದ್ದಾರಂತಲ್ಲಾ, ಗಣಿ ಕಳ್ಳರ ವಿಷಯದಲ್ಲಿ ವಿರೋಧ ಪಕ್ಷದವರಷ್ಟೇ ತಲೆ ಕೆಡಿಸಿಕೊಂಡು ದೆಹಲಿ ತಲುಪಿರುವ ಭಾರದ್ವಾಜರನ್ನು ನೋಡಿದ ಮಾಜಿ ರಾಜ್ಯಪಾಲರೂ ಹಾಗೂ ಹಾಲಿ ಮನುಧರ್ಮ ಶಾಸ್ತ್ರದ ಪುನರುತ್ಥಾನ ಪ್ರಭೃತಿಗಳೂ ಆದ ರಾಮಾ ಜೋಯ್ಸರು "ರಾಜ್ಯಪಾಲರು ಚುರುಕಾಗಿ ಕೆಲಸ ಮಾಡುತ್ತಿದ್ದಾರೆ" ಎಂಬ ಕಿಡಿಗೇಡಿ ಹೇಳಿಕೆ ಕೊಟ್ಟರಂತಲ್ಲಾ, ಥೂತ್ತೇರಿ!



* * * * * * * *

ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಮೆಚ್ಚಿನ ಮುಖ್ಯಮಂತ್ರಿಗಳಾದ ಎಡೂರಪ್ಪನನ್ನು ಮಾತನಾಡಿಸಿ ನಾಲ್ಕು ಸಾಂತ್ವನ ಮಾತನಾಡಿದರೆ ಹೇಗೆ ಎಂಬ ಆಲೋಚನೆ ಬಂದುಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಇದು ಯಾರು ಬರೆದ ಕತೆಯೊ, ನನಗಾಗಿ ಬಂದ ವ್ಯಥೆಯೊ, ಕೊನೆ ಹೇಗೊ ಅರಿಯೇ...."

"ಹಲೋ ಯಾರು?"

"ನಾನು ಸಾರ್ ಯಾಹು."

"ಏನೇಳ್ರಿ ಯಾಹು ಅವ್ರುರೆ?"

"ಏನ್ಸಾರ್ ವಿರೋಧ ಪಕ್ಷದೋರು ಈ ತರ ಆಡ್ತರೆ?"

"ನೀವೇ ನೋಡಿ ಯಾಹೂ ಅವರೆ, ನಮ್ಮದೇನು ತಪ್ಪಿದೆ ಇದ್ರಲ್ಲಿ ವಿಧಾನಸೌಧದ ಪಾವಿತ್ರ್ಯವನ್ನೆ ಹಾಳು ಮಾಡಿದರಲ್ಲಾ."

"ಏನಾಳು ಮಾಡಿದ್ರು ಸಾರ್?"

"ಅವುನ್ಯಾರೋ ರೋಷನ್ ಬೇಗ್ ತಂದುಕೊಟ್ಟ ಅಂತ ಬಿರಿಯಾನಿನೆ ವಿಧಾನಸಭೆ ವಳಗಡೆ ತಿಂದವರಲ್ಲ, ಇದರಿಂದ ವಿಧಾನಸಭೆ ಪವಿತ್ರತೆನೆ ಹಾಳಾಯ್ತಲ್ರೀ."

"ವಿಧಾನಸೌಧದ ಪವಿತ್ರತೆ ಹಾಳಾಗಿ ಭಾಳ ದಿನ ಆಗಿದೆ ಸಾರ್. ಜಾತ್ಯತೀತ ಪರಿಕಲ್ಪನೆ ಪುತ್ಥಳಿ ಅದು. ಅದುರೊಳಗಡೆ ರೋಗಗ್ರಸ್ತ ಪುರೋಹಿತರು ಸೇರಿಕೊಂಡು ಯಾವತ್ತು ಪೂಜೆ, ಹೋಮ ಮಾಡಿದ್ರೊ ಅವತ್ತೆ ಅದರ ಪವಿತ್ರತೆ ಹಾಳಾಯ್ತು, ಅದರ ಮುಂದುವರಿದ ಕತೆನೆ ಬಿರಿಯಾನಿ ಸಾರ್."

"ಹೋಗ್ಲಿ, ಅವನು ತಂದುಕೊಟ್ಟ ಬಿರಿಯಾನಿ ಯಾತರದು ಅಂತ ಪರಿಶೀಲಿಸಿದರೇನ್ರಿ? ನಾವಿಲ್ಲಿ ಗೋಹತ್ಯೆ ನಿಷೇಧದ ಚರ್ಚೆ ಶುರು ಮಾಡೋ ಟೈಮಿಗೆ ಇವರು ಬಿರಿಯಾನಿ ತಿಂತರಲ್ರೀ?"

"ಸಾರ್, ರೋಷನ್ ಬೇಗ್ ತಂದುಕೊಟ್ಟಿರೊ ಬಿರಿಯಾನಿ ಬಗ್ಗೆ ನನಗೂ ಡವುಟಿದೆ. ಬಿಜೆಪಿ ಶಾಸಕರೆ ಅದರ ವಾಸನೆ ಹಿಡದು ಮೂಗರಳಿಸಿ ಮಾತಾಡ್ತ ಇದಾರೆ. ಒಂದಂತು ತಿಳಕಳಿ, ಗೋಮಾಂಸದ ಬಿರಿಯಾನಿ ತಿಂದಿರೊ ಜನ ಗೋವಿನಷ್ಟೇ ಒಳ್ಳೆಯವರು. ಅವರನ್ನು ವಿನಾಕಾರಣ ಎದುರಾಕಿಕೊಳ್ಳದೆ ಗಣಿ ಕಳ್ಳರನ್ನು ಸಿಬಿಐಗೆ ಒಪ್ಪಿಸಿ ಸುಮ್ಮನಾಗಿ ಸಾರ್."

"ಸಿಬಿಐಗೆ ಒಪ್ಪಸದೂ, ನಾನು ತಲೆ ಒಪ್ಪಸದೂ ಒಂದೇ ಕಂಡ್ರೀ."


"ಮತ್ತೆ ಜನಗಳೆದ್ರಿಗೆ ಹೋಗ್ತಿನಿ ಅಂದಿದಿರಿ?"

"ಅದು ಸುಮ್ಮನೆ ಹೇಳಿದ ಮಾತು ಕಂಡ್ರೀ!"

"ಯಾಕ್ ಸಾರ್ ಆ ತರ ಸುಮ್ಮಸುಮ್ಮನೆ ಹೇಳಿ ಸಿಗಾಯ್ಕತ್ತಿರಿ? ಗಣಿ ಲೂಟಿಯಾಗ್ತ ಅದೆ ಅಂತ ನೀವೇ ಹೇಳ್ತೀರಿ. ತಡಿಯಕ್ಕಾಗಲ್ಲ ಅಂತ್ಲೂ ಹೇಳ್ತೀರಿ. ಲೋಕಾಯುಕ್ತರಿಗೆ ಅರ್ಧ ಅಧಿಕಾರ ಕೊಡ್ತಿರಿ. ಅವರ್ಲೂ ಗಣಿ ಕಳ್ಳ ತನಿಖೆ ಮಾಡಂಗಿಲ್ಲ, ಅತ್ತ ಸಿಬಿಐಗೂ ಕೊಡಲ್ಲ ಅಂತಿರಿ. ಯಾಕಿಂತ ರಗಳೆ ಮಾಡಿಕಂಡಿದ್ದೀರಿ?"

"ಹೌದು ಕಂಡ್ರಿ, ಒಂದೊಂದು ಸಾರಿ ಶೋಬನ ಜೊತೆ ಎಲ್ಲಾದ್ರು ಹೋಗಿಬಿಡಣ ಅನ್ನುತ್ತೆ."

"ಥೂತ್ತೇರಿ!!!"



...ಗಣಿಸತೊಡಗಿದ.

...ಕೆಲಕಾಲ ಮುತಾಲಿಕ್‌ನ ಮಂಗಸೇನೆಯ ...ನವಾಗಿದ್ದ ಇವನೀಗ ಜಯ ಕರ್ನಾಟಕದ ...ಸ್ಯನಷ್ಟೇ ಅಲ್ಲ, ಅದರ ಜಿಲ್ಲಾ ಕಾರ್ಯಾಧ್ಯಕ್ಷ ...ಸಾ. ಒಂದು ಮೂಲದ ...ಾರ ಈ ಕ್ರಿಮಿಯನ್ನು ಜಯ ...ಾಟಕ ಸಂಘಟನೆಗೆ ಸೇರಿಸಿದ್ದು ...ಗೇರಿಯ ಸ್ವಾಮಿಗಳು. ...ಬೆಗಷ್ಟೇ ಸಾಮೂಹಿಕ ...ಾಹದ ಮೂಲಕ ...ಪ್ರಿಯರಾಗಿರುವ ಈ ...ುಗಳು ಇಂತಹ ಲಫಂಗ ...ಲ್ಲಿಕಾರ್ಜುನನನ್ನು ಬೆಂಬಲಿಸಿದ್ದು ...ತ್ರ ಅಕ್ಷಮ್ಯವೇ ಸರಿ.

...ಕ್ಸ್ ಅಂಡ್ ಪಾಲಿಟಿಕ್ಸ್


...ಈತನಿಗೆ ಪಾಲಿಟಿಕಲ್ ಲಿಂಕ್ ...ುವುದರಿಂದಲೇ ಪ್ರತಿಬಾರಿ ...ಕಾಂಡ ನಡೆಸಿದಾಗಲೂ ಪಾರಾಗುತ್ತಿದ್ದಾನೆ. ಜಯ ...ಾಟಕದ 'ಫೋರ್ಸ್' ಮೂಲಕ ಕನಕಗಿರಿಯ ಬಿಜೆಪಿ ...ಕ್ಷ ಶೇಷಗಿರಿರಾವ್‌ಗೆ ಅಮರಿಕೊಂಡ ಈತ ...ಗಿರಿರಾವ್‌ನಿಂದ ಮಂತ್ಲಿ 20 ಸಾವಿರ ಕ್ಯಾಷ್, ...ಗೆ ಬೇಡಿಕೆಯಿಟ್ಟು ಬೆದರಿಕೆ ಹಾಕಿ, ರಾವ್‌ನಿಂದ ...ಪ ಜಡಿಸಿಕೊಂಡ. ಈ ರಾವ್ ಕೂಡಾ ಕಡಿಮೆ ...ಗಿದೇನಲ್ಲ, ಕಂಟ್ರಾಕ್ಟ್ ಕಾಳ ರೆಡ್ಡಿಪೀರಣ್ಣ



ಟ್ರೈಂಪಾಸ್‌ಗಾಗಿ ಮರ್ಲಾನಹಳ್ಳಿಯ ಬಳಿ ಕಟ್ಟಿರುವ ಶಾಲೆಯ ಸಕಲ ಜವಾಬ್ದಾರಿಯನ್ನು ಈ ರಾವ್‌ಗೆ ವಹಿಸಲಾಗಿದೆ. ಈ ರಾವ್‌ನ ಅದ್ಯಾವ ವೀಕ್‌ನೆಸ್ ಅನ್ನು ಮಲ್ಲಿಕಾರ್ಜುನ ಪತ್ತೆಹಚ್ಚಿದನೋ ಗೊತ್ತಿಲ್ಲ, ಬ್ಲಾಕ್‌ಮೇಲ್ ಮಾಡಲು ಹೋಗಿ, ಅದು ಕೇಸಾಗಿ, ಬೆಂಗಳೂರಿಗೆ ಪರಾರಿಯಾಗಿ ಬೇಲ್ ತೆಗೆದುಕೊಂಡ. ಅಂದಂತೆ ಈ ಕಾಮುಕ ಮಲ್ಲಿಕಾರ್ಜುನನ ಮೇಲೆ ಸಿಪಿಐ ಶಾಂತಕುಮಾರ್ ಕೂಡಾ ಕೇಸು ಜಡಿಯಲು ಹಿಂಜರಿದಿದ್ದರು. ಕೊನೆಗೆ ಸಕ್ಕರೆ ಮಂತ್ರಿ ತಂಗಡಗಿ ಒತ್ತಡ ಹಾಕಿದ ಮೇಲಷ್ಟೇ ಇವನ ಮೇಲೆ ಕೇಸ್ ಜಡಿಯಲಾಯಿತು ಎಂದರೆ ಈ ಪಡಪೋಶಿ ಮಲ್ಲನ ಕರಾಮತ್ತು ಎಂಥದಿರಬೇಡ?

ಇಂತಹ ಕ್ರಿಮಿನಲ್ ಈಗ ಸಿದ್ದಾಪುರ ಬಳಿಯ ಸ್ತ್ರೀಯೊಬ್ಬರ ಜೊತೆ ತಾನು ನಡೆಸಿದ ಲೈಂಗಿಕ ಚಟುವಟಿಕೆಗಳ ಫೋಟೋಗಳನ್ನು ಎಂ.ಎಂ.ಎಸ್. ಮಾಡಿ ವಿಕೃತ ಖುಷಿ ಅನುಭವಿಸುತ್ತಿದ್ದಾನೆ. ಅಸಹ್ಯಪಟ್ಟ ಜನ ಕಂಪ್ಲೇಂಟ್ ಕೊಟ್ಟರೂ ಪೊಲೀಸ್ ಇಲಾಖೆ ನಿದ್ದೆಯಲ್ಲಿದೆ. ಅಥವಾ ಇಲಾಖೆ ಇವನ ಜೊತೆ ಮಿಂಗಲ್ ಆಗಿದೆಯಾ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ.

• ಹುರುಳಿಕುಪ್ಪಿ ವಿನಯ್





'ಶಾಕ್ ಟ್ರೀಟ್ಮೆಂಟ್ ವಿಮರ್ಶೆ' ನನಗೆ ಸಮ್ಮತವಲ್ಲ

'ದೇಶಕಾಲ' ಕುರಿತು 'ಲಂಕೇಶ್'ನಲ್ಲಿ ನಡೆಯುತ್ತಿರುವ ಚರ್ಚೆ ರಾಜ್ಯದ ಸಾಹಿತ್ಯಿಕ ವಲಯದಲ್ಲಿ ಇತ್ತೀಚಿನ ಯಾವ ವಿದ್ಯಮಾನವೂ ಹುಟ್ಟಿಸದಂತಹ ಆಸಕ್ತಿ ಮತ್ತು ಜಿಜ್ಞಾಸೆಯನ್ನು ಕೆರಳಿಸಿದೆ. ಆದರೆ ಇದು ವಾಗ್ವಾದ, ಭಾವಾವೇಶ, ಬರಹದ ಶೈಲಿ ಸುತ್ತ ನಡೆಯದೆ ಈ ಚರ್ಚೆಯು ಎತ್ತುತ್ತಿರುವ ಸಾಂಸ ತಿಕ ಹಾಗೂ ಸಾಹಿತ್ಯಿಕ ಪ್ರಶ್ನೆಗಳತ್ತ ಇನ್ನೂ ಹೆಚ್ಚಿನ ಗಮನ ಹರಿಸಿದರೆ ಕನ್ನಡ ಸಾಂಸ್ಕೃತಿಕ ಲೋಕ ಇನ್ನಷ್ಟು ಶ್ರೀಮಂತವಾಗುತ್ತದೆ ಎಂಬುದು 'ಲಂಕೇಶ್' ತಂಡದ ಆಶಯ.

ಭಾಗ 4

ಪ್ರಿಯ ಕ್ಯಾಪ್ಟನ್,

ನಾವು ಟೀಕೆ-ವಿಮರ್ಶೆಗಳಿಗೆ ಒಳಪಡಿಸಲು ನಮ್ಮ ಮುಂದೆ ಇಟ್ಟುಕೊಂಡಿರುವ ಕೃತಿಗಳ ಬಗ್ಗೆ 'ವಸ್ತುನಿಷ್ಠ'ವಾಗಿರಬೇಕು. ಹಾಗಾದಾಗ ಮಾತ್ರ ನಮ್ಮ ಟೀಕೆಗಳಿಗೆ ತಕ್ಕುದಾದ ಭಾಷೆಯ ದರ್ದು ಗೊತ್ತಾಗುತ್ತದೆ; ಕೃತಿಯ ಬಗೆಗಿನ ನಮ್ಮ ತಕರಾರುಗಳು ಭಾಷೆಯಲ್ಲಿ ಮಾತ್ರವೇ ಸಾಕಾರವಾಗಬೇಕಾದ್ದರಿಂದ ನಮ್ಮ 'ವಸ್ತುನಿಷ್ಠತೆ' ಮತ್ತು 'ವೈಚಾರಿಕ ಸ್ಪಷ್ಟತೆ'ಗಳನ್ನು ನಮ್ಮ ಭಾಷೆಯೇ ತೋರಿಸಿಬಿಡುತ್ತದೆ. ಇದು, 'ಭಾಷೆಯೇ ದೈವ'ವೆಂಬ ಲಂಕೇಶರ ನಿಷ್ಠೂರ ತಿಳಿವಳಿಕೆ. ಅವರು ಸಕಾರಣವಾಗಿಯೇ ಓರ್ವೆಲನ 'ಪಾಲಿಟಿಕ್ಸ್ ಅಂಡ್ ಇಂಗ್ಲಿಷ್ ಲ್ಯಾಂಗ್ವೇಜ್' ಪ್ರಬಂಧವನ್ನು ಕಾಲಕಾಲಕ್ಕೆ ತಮ್ಮ ಅಂಕಣದಲ್ಲಿ ಪ್ರಸ್ತಾಪಿಸುತ್ತಿದ್ದರು. ಜುಲೈ 21 ರ ಪತ್ರಿಕೆಯಲ್ಲಿ ಪ್ರಕಟವಾಗಿರುವ ಚಂದ್ರಶೇಖರ್ ಐಜೂರ್ ಮತ್ತು ಮಂಜುನಾಥ್ ಲತಾ ನಮ್ಮ ಪ್ರತಿಕ್ರಿಯೆಗಳಿಗೆ ಬರೆದ ಉತ್ತರ ನೋಡಿ, ವಿಷಾದದಿಂದ ಇದೆಲ್ಲವನ್ನು ಮತ್ತೆ ನೆನಪಿಸಿಕೊಳ್ಳುತ್ತಿದ್ದೆ; ಹಾಗೆಯೇ ಇದೇ ಸಂಚಿಕೆಯಲ್ಲಿ ಜುಲೈ 10, 1983ರಲ್ಲಿ ಪ್ರಕಟವಾದ ಲಂಕೇಶರ 'ಮರೆಯುವ ಮುನ್ನ' ಅಂಕಣದ 'ಅಭಿಪ್ರಾಯ ಕೇಳಿದಾಗ' ಬರಹ ನೋಡಿ ಒಂಚೂರು ಗೆಲುವಾಯಿತು.

• ಕೆ.ಫಣಿರಾಜ್

ಐಜೂರ್ ಹಾಗು ಲತಾ ಅವರ ಭಾಷಾಕೋಶವೇ ಹೆದರಿಕೆ ಹುಟ್ಟಿಸುತ್ತದೆ: 'ಆಘಾತವಾಗಿದೆ' ಎಂದರೆ 'ಶಾಕ್ ಟ್ರೀಟ್ಮೆಂಟ್ ಕೊಟ್ಟಿದ್ದೇವೆ' ಎಂದು ಬೀಗುತ್ತಾರೆ; ಅವರ ವಾದದ ಕ್ರಮ ಏಕೆ 'ವಿಕೃತ'ವಾಗಿದೆ ಎಂದು ವಿವರಿಸಲು ಪ್ರಯತ್ನಿಸಿದರೆ 'ವಿಕೃತ' ಎಂಬುದು 'ಸುಸಂಸ್ಕೃತ'ದ ವಿರುದ್ಧ ಪದ ಎನ್ನುತ್ತಾರೆ; 'ಬಹುಭಾಷೆ ಬಹುಸಂಸ್ಕೃತಿಗಳ ದೇಶ'ವೆಂಬುದು ಅವರ ಪ್ರಕಾರ ತಮ್ಮ 'ಶಾಕ್ ಟ್ರೀಟ್ಮೆಂಟ್ ಭಾಷೆ'ಗೆ ಸಂವಿಧಾನದ ಎಂಟನೇ ಷೆಡ್ಯೂಲ್‌ನಲ್ಲಿ ಸ್ಥಾನ ಕಲ್ಪಿಸುವುದು. ಜುಲೈ 7ರ ಮೊದಲ 'ಶಾಕ್ ಟ್ರೀಟ್ಮೆಂಟ್'ನಲ್ಲಿ ಅನಂತಮೂರ್ತಿ ಲೇಖಕರ ಕಣ್ಣಿನಲ್ಲಿ 'ಮಣ್ಣಿನ ಕಷ್ಟಸುಖ'ದ ಬಗ್ಗೆ ಬದ್ಧತೆ ಇರುವ ಮನುಷ್ಯರಾಗಿದ್ದರೆ, ಎರಡನೇ 'ಶಾಕ್ ಟ್ರೀಟ್ಮೆಂಟ್'ನಲ್ಲಿ ಜಾತಿವಾದಿಯಾಗಿಬಿಡುತ್ತಾರೆ! ತಮ್ಮ ಉತ್ತರದಲ್ಲಿ ಲೇಖಕರು 'ಮೋಚಿ' ಕತೆ ಬರೆದವರ ಹೆಸರನ್ನು 'ಭಾರತೀಪ್ರಿಯ' ಎಂದು ನಮೂದಿಸಿದ್ದನ್ನು, ಅವಸರದಲ್ಲಿ ಆದ ಸಣ್ಣ ತಪ್ಪು ಎಂದು ಓದುಗರು ಸರಿಪಡಿಸಿಕೊಂಡು ಓದಬಹುದು. ಆದರೆ, ಇವರ 'ಶಾಕ್ ಟ್ರೀಟ್ಮೆಂಟ್' ನಿಲುವನ್ನು ವಿರೋಧಿಸಿ ಬರೆದ ಜಿ.ರಾಜಶೇಖರರ ವಿಮರ್ಶಾ ಪ್ರಜ್ಞೆಯನ್ನು ಕೀಳಾಗಿ ತೋರಿಸಲು, ರಾಜಶೇಖರ್ 'ಪಾಪಿಗಳ ಲೋಕ'ವನ್ನು 'ಅನನ್ಯವೆಂದು ಕೊಂಡಾಡಿ'ದ್ದಾರೆ ಎಂಬ ಹಸಿ ಸುಳ್ಳನ್ನು ಹೇಳುವ ಇವರ ಭಂಡತನಕ್ಕೆ ಖಂಡಿತ ಅವಸರ ಕಾರಣವಲ್ಲ. ಈ ಪ್ರವೀಣರು ಹಾಗು ನಾನೂ ಬರೆಯುತ್ತಿರುವುದು 'ಲಂಕೇಶ'ರ ಹೆಸರಿರುವ ಪತ್ರಿಕೆಗೆ. ಆ ಹೆಸರಿನ ಘನತೆಯ ಬಗ್ಗೆ ಒಂದಿಷ್ಟಾದರೂ ಗೌರವವಿದ್ದಲ್ಲಿ ಕನ್ನಡ ಭಾಷೆಯನ್ನು ಕ್ರಾಂತಿಕಾರವಾಗಿ ಬದಲಾಯಿಸಲು ಪಣ ತೊಟ್ಟಿರುವ ಈ ವೀರರು ತಮ್ಮ ಆರೋಪದ ಬಗ್ಗೆ ಮೂರು ಸಂಗತಿಗಳನ್ನು ಸ್ಪಷ್ಟಪಡಿಸಬೇಕಿತ್ತು-(1) 'ಪಾಪಿಗಳ ಲೋಕ' ಎನ್ನುವುದು ಒಂದು ಪುಸ್ತಕವೋ, ಲೇಖನವೋ, ಕತೆಯೋ ಅಥವ ಅಂಕಣವೋ? (2) ಅದು ಎಲ್ಲಿ, ಯಾವಾಗ, ಯಾರ ಹೆಸರಿನಲ್ಲಿ ಪ್ರಕಟವಾಗಿದೆ/ಆಗುತ್ತಿದೆ? (3) ಜಿ.ರಾಜಶೇಖರ್ ಅದನ್ನು 'ಅನನ್ಯವೆಂದು ಕೊಂಡಾಡಿ'ದ್ದು ಯಾವಾಗ, ಯಾಕೆ, ಎಲ್ಲಿ? ಕ್ಯಾಪ್ಟನ್, ಖಂಡಿತ ನನಗೆ ಈ ಪ್ರವೀಣದ್ವಯರ ಜ್ಞಾನಪರೀಕ್ಷೆ ಮಾಡುವ ಉತ್ಸಾಹವಿಲ್ಲ, ಆದರೆ ಅವರು ಕನ್ನಡದ ಒಬ್ಬ ನಿಷ್ಠೂರ ಬರಹಗಾರನ ಪ್ರಜ್ಞೆಯನ್ನು, ಚಿಟಿಕೆ ಹೊಡೆದ ಹಾಗೆ, ಚಿಲ್ಲರೆಗೊಳಿಸುತ್ತಿದ್ದಾರೆ. ಉಡುಪಿಯಲ್ಲಿ ನಡೆಯುವ, ವಾರ್ಷಿಕ ಸರಾಸರಿ ಹತ್ತು ಪ್ರತಿಭಟನಾ ಸಭೆಗಳಿಗೆ ಕರಪತ್ರವನ್ನು ತನ್ನ ಜವಾಬ್ದಾರಿ ಎಂದು ಬರೆಯುವ ರಾಜಶೇಖರ್, ಕರಪತ್ರದ ಭಾಷೆಯಲ್ಲೂ ಲಂಕೇಶರಷ್ಟೇ ನಿಷ್ಠೂರರಾಗಿರುವ ಮನುಷ್ಯ- ಇದು ಉಡುಪಿಯ ಚಳವಳಿಗಾರರಿಗೆ ಮಾತ್ರ ತಿಳಿದಿರುವ ವಿಷಯ- ಬೇರೆಯವರಿಗೆ ತಿಳಿದಿರಬೇಕು ಎಂದು ನಾನು ಭಾವಿಸುವುದಿಲ್ಲ, ಆದರೆ, ಜಿ.ರಾಜಶೇಖರ್ ಕಳೆದ ಮೂರು ದಶಕಗಳಿಂದ ಬರೆಯುತ್ತಿದ್ದಾರೆ; ಕಾರಂತ, ಅನಂತಮೂರ್ತಿ, ಲಂಕೇಶರಿಂದ ಹಿಡಿದು ನನ್ನಂಥ ಚಿಲ್ಟುಗಳ ಜೊತೆ ವಾಗ್ವಾದದಲ್ಲೂ ಅವರು ತಮ್ಮ ವೈಚಾರಿಕ ಪ್ರಾಮಾಣಿಕತೆಯನ್ನು ಬಿಟ್ಟುಕೊಟ್ಟವರಲ್ಲ. 'ಹಾಗಂಥ ಏನ್ರೀ? ಅವರ ಪೂಜೆ ಮಾಡಬೇಕೋ' ಎಂದು ನಮ್ಮ 'ಬಹುಸಂಸ್ಕೃತಿ ವಕ್ತಾರರು' ಖಂಡಿತ ಕೇಳುತ್ತಾರೆ ಎಂದು ನನಗೆ ಗೊತ್ತು. ತಾವು ಬರೆಯುತ್ತಿರುವ ಸಾಲುಗಳ ಸತ್ಯಾಂಶಗಳನ್ನು ತಿಳಿದುಕೊಂಡು ಬರೆಯುವ ತಾಳ್ಮೆ-ಜವಾಬ್ದಾರಿಗಳು ತಮ್ಮ 'ಬಹುಸಂಸ್ಕೃತಿಗೆ' ಸಲ್ಲದು ಎಂದು ಈ 'ಬಹುಭಾಷಾ' ಪಂಡಿತರು ಭಾವಿಸಿದ್ದಾರೆ. ಒಬ್ಬ ರೈತ, ಗಾರೆ ಕೆಲಸದವ, ಆಟೋರಿಕ್ಷಾ ಚಾಲಕರು ಹೇಗೆ 'ದೈಹಿಕ ಶ್ರಮಿಕ'ರೋ ಹಾಗೆ ತಾವು 'ಶ್ರಮಿಕ ಬರಹಗಾರರು' ಎಂದು ಇವರು ನಂಬಿದ್ದಾರೆ. ಒಳ್ಳೆಯದು. ಆದರೆ ಅವರು ಪೇಟೆಂಟ್ ಪಡೆದುಕೊಂಡಂತೆ ಆಡುತ್ತಿರುವ 'ಶ್ರಮಿಕರ' ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ರೈತ, ಗಾರೆ ಕೆಲಸದವ ಮುಂತಾದವರು ತಮ್ಮ ಕಸುಬನ್ನು ಶ್ರದ್ಧೆಯಿಂದ ನಿರ್ವಹಿಸಿದಾಗ ಮಾತ್ರ ಅದಕ್ಕೊಂದು ಮೌಲ್ಯವಿರುತ್ತದೆ; ಬೇಕಾಬಿಟ್ಟಿ ಕೆಲಸ ಮಾಡುವ ಆಟೋಚಾಲಕ/ಗಾರೆ ಕೆಲಸದವನನ್ನು ಯಾರೂ ಕಸುಬುದಾರ ಎನ್ನುವುದಿಲ್ಲ. ಹಾಗೇ 'ಶ್ರಮಿಕ ಬರಹಗಾರ'ರೆಂದು ಹೇಳಿಕೊಳ್ಳುವ ಜೋಡಿ ಲೇಖಕರು ತಮ್ಮ ಬರಹದ ಕಸುಬನ್ನು ಶ್ರದ್ಧೆಯಿಂದ ನಿರ್ವಹಿಸಿದಾಗ ಮಾತ್ರ ಅವರ ಕಸುಬಿಗೂ ಗೌರವ. ಅಡ್ಡಾದಿಡ್ಡಿ ಕಲ್ಲಿಟ್ಟು ಕಂಡವರ ಮೇಲೆ ಗೋಡೆ ಕೆಡವಬಲ್ಲ ಗಾರೆಯವನನ್ನು ಮಾದರಿಯಾಗಿಟ್ಟುಕೊಂಡ ಹಾಗೆ ಬರಹದಲ್ಲಿ ತೊಡಗಿರುವ 'ಶ್ರಮಿಕ ಬರಹಗಾರ'ರ ಜೊತೆ ಖಂಡಿತ ವಾಗ್ವಾದ ಸಾಧ್ಯವಿಲ್ಲ ಕ್ಯಾಪ್ಟನ್.

ಗೆಳೆಯರಾದ ವಸಂತ ಬನ್ನಾಡಿಯವರು ನನ್ನ ಬಗ್ಗೆ ಕೆಲವು ಆರೋಪಗಳನ್ನು ಮಾಡಿದ್ದಾರೆ: (1) 'ಐಜೂರ್-ಲತಾ ಲೇಖನದಿಂದ ನನಗೆ ಆಘಾತವಾಗಿದೆ' ಎಂದು ನಾನು ಹೇಳಿರುವುದು ಕೂಡ ನನಗೆ 'ಬೇಕಾದವರ ಬಗೆಗಿನ ಭಾವಾವೇಶ'ವಾಗಿದೆ (2) 'ವಾಗ್ವಾದ ಪರಂಪರೆ'ಯ ಬಗ್ಗೆ ದೀರ್ಘವಾಗಿ ಮಾತನಾಡುವ ನೆಪದಲ್ಲಿ ನಾನು ಎಲ್ಲರ 'ಮಾತುಗಳನ್ನು ಹತ್ತಿಕ್ಕುತ್ತಿದ್ದೇನೆ'. (3) 'ಶ್ರೇಷ್ಠತೆಯ ವ್ಯಸನ'ದ ಕುರಿತ ವಾಗ್ವಾದವನ್ನೂ, ತೇಜಸ್ವಿ ಮತ್ತು ಲಂಕೇಶರ ಸಾಂಸ್ಕೃತಿಕ ಕಾಳಜಿಗಳ ಬಗ್ಗೆ ಮಾತನಾಡುವುದನ್ನು ಬಿಟ್ಟು ನಾನು ವಾಗ್ವಾದ ಪರಂಪರೆಯ ಬಗ್ಗೆ ದೀರ್ಘವಾಗಿ ಪ್ರಸ್ತಾಪಿಸುತ್ತೇನೆ (4) ನಾನು ಪ್ರಸ್ತಾಪಿಸಿರುವ ಕುವೆಂಪು-ಮಾಸ್ತಿ ಅನಂತಮೂರ್ತಿ-ತೇಜಸ್ವಿ ವಾಗ್ವಾದಗಳಲ್ಲಿ ನಾನು ತಾತ್ವಿಕವಾಗಿ ಯಾರ ಪರ ಎಂದು ಹೇಳಿಕೊಂಡಿಲ್ಲ (5) ನನ್ನ ಬರಹದ ಕೊನೆಯಲ್ಲಿ 'ದೇಶಕಾಲ'ದ ಬಗ್ಗೆ ನನ್ನ ಉತ್ತರದಾಯಿತ್ವವನ್ನು ಹೇಳಿಕೊಂಡಿರುವುದು ನನ್ನ ಭಾವನಾತ್ಮಕ ನಿಲುವು ಮತ್ತು (6) 'ದೇಶಕಾಲ'ದ ಪರ ಮತ್ತು ಐಜೂರ್-ಲತಾ ಬರಹದ ವಿರುದ್ಧ ನಾನು ತೆಗೆದುಕೊಂಡಿರುವ ನಿಲುವು ಕೇವಲ ಸರಳ ತೀರ್ಮಾನವಾಗಿದ್ದು, ಇಂತಹ ವಿಷಯಗಳಲ್ಲಿ ತೇಜಸ್ವಿ ಮತ್ತು ಲಂಕೇಶರ ಸೂಕ್ಷ್ಮತೆ ನನಗೆ ಅರ್ಥವಾಗಿಲ್ಲ. ಮೊದಲ ಎರಡು ಆರೋಪಗಳಿಗೆ ನನ್ನ ಉತ್ತರವಿಷ್ಟೇ: ನನಗಾದ 'ಆಘಾತ'ಕ್ಕೂ, 'ವಾಗ್ವಾದ ಪರಂಪರೆಯ' ಪ್ರಸ್ತಾವನೆಗೂ ಸ್ಪಷ್ಟವಾದ ಕಾರಣಗಳನ್ನು ನನ್ನ ಬರಹದಲ್ಲಿಯೇ ನೀಡಿದ್ದೇನೆ; 'ದೇಶಕಾಲ'ದ ಬಗೆಗಿನ/ವಿರುದ್ಧದ ಟೀಕೆಗಳು ಯಾವ ಸ್ವರೂಪದಲ್ಲಿದ್ದರೂ ಸ್ವೀಕರಿಸಬೇಕು ಎಂಬ ನಿಲುವು ಬನ್ನಾಡಿಯವರ ಸ್ವಂತದ್ದು, ಅದಕ್ಕೆ ನನ್ನ ಸಹಮತವಿಲ್ಲ. ಹಾಗೆಯೇ, ಕುವೆಂಪು-ಮಾಸ್ತಿ, ಅನಂತಮೂರ್ತಿ-ತೇಜಸ್ವಿ ವಾಗ್ವಾದಗಳು ಹುಟ್ಟುಹಾಕಿರುವ ಸಂವಾದಕ್ರಮದಿಂದ ನಾವು ಕಲಿಯಬೇಕಾದದ್ದು ತುಂಬಾ ಇದೆ-ಅದು ಮುಖ್ಯ; ಯಾರ ಪರ ನಿಲುವು ತೆಗೆದುಕೊಂಡರೂ, ಸಂವಾದದ ಸಭ್ಯತೆ ಬಗ್ಗೆ ಗೌರವ ಕಡಿಮೆಯಾಗದು ಎನ್ನುವುದು ನನ್ನ ನಿಲುವು. ಬನ್ನಾಡಿಯವರಿಗೆ 'ದೇಶಕಾಲ'ದ ಬಗ್ಗೆ ಸಮಾಧಾನವಿಲ್ಲ; ಹಾಗಾಗಿ ಅದರ ವಿರುದ್ಧ ಯಾರೇ ಟೀಕೆ ಮಾಡಿದರೂ ಸರಿ, ಆ ಟೀಕೆಗಳ ಸ್ವರೂಪ ಹೇಗಿದ್ದರೂ ಸರಿ, ಅಂಥ ಟೀಕೆಗಳ ಬಗ್ಗೆ ಸಹಾನುಭೂತಿ ಇಟ್ಟುಕೊಳ್ಳಬೇಕು ಎಂಬುದು ಅವರ 'ಪಾರ್ಟಿಸಾನ್ ನಿಲುವು'; ಹೀಗಾಗಿ ಬನ್ನಾಡಿಯವರಿಗೆ ತೇಜಸ್ವಿ-ಲಂಕೇಶರ ವಿಮರ್ಶೆಗೂ ಐಜೂರ್-ಲತಾರ ದಾಳಿಗೂ ವ್ಯತ್ಯಾಸವೇ ಕಾಣುವುದಿಲ್ಲ. ಬನ್ನಾಡಿ ವಿಚಿತ್ರವಾದ ಪ್ರಶ್ನೆಗಳನ್ನೊಡ್ಡುತ್ತಾರೆ. ಐಜೂರ್-ಲತಾರ ಬರಹಕ್ಕೆ ಆಘಾತಗೊಳ್ಳುವವರು, ನರಹಳ್ಳಿ ಸುಬ್ರಹ್ಮಣ್ಯ ಮೇ 2, 2010ರ 'ಪ್ರಜಾವಾಣಿ'ಯಲ್ಲಿ 'ದೇಶಕಾಲ ವಿಶೇಷಾಂಕ'ದ ಕುರಿತು ಬರೆದ ವಿಮರ್ಶೆಗೆ ಯಾಕೆ ಪ್ರತಿಕ್ರಿಯಿಸಲಿಲ್ಲ ಎಂದು ಕೇಳುತ್ತಾರೆ. ಅವರೇ ಹೇಳುವ ಪ್ರಕಾರ ಎರಡೂ ಬರಹಗಳಲ್ಲೂ 'ದೇಶಕಾಲ' ವಿಶೇಷಾಂಕದ ಕುರಿತ ಟೀಕೆಗಳಾಗಿವೆ. ಮೊದಲನೆಯದಕ್ಕೆ ಪ್ರತಿಕ್ರಿಯಿಸಿದರೆ 'ಮಾತುಗಳನ್ನು ಹತ್ತಿಕ್ಕುವುದು', ಎರಡನೆಯದಕ್ಕೆ ಪ್ರತಿಕ್ರಿಯಿಸದೇ ಇರುವುದು 'ಯಾವ ವಾಗ್ವಾದಗಳಿಗೂ ತೆರೆದುಕೊಳ್ಳದ ಬರಹುತನ'! ಎಂದು ವಸಂತ್ ತೀರ್ಮಾನಿಸಿದ್ದಾರೆ. ವಸಂತರಿಗೆ ಐಜೂರ್-ಲತಾರ

▶▶ 16

ಕ್ಷುದ್ರ ವಿಚಾರಗಳತ್ತ ಗಮನಹರಿಸೋಣವೇ?

ದೇಶಕಾಲ ಚರ್ಚೆ

'ದೇಶಕಾಲ' ಕುರಿತ ಚರ್ಚೆ ನೋಡಿದೆ. ಇಂಟರೆಸ್ಟಿಂಗ್ ಆಗಿದೆ!

ಐಜೂರ್-ಲತಾ ಎರಡನೇ ಪತ್ರ ಕೊಂಚ ಸರಿ ಇದೆ. ಆದರೆ ಮೊದಲನೇ ಪತ್ರದ, ಗುಂಡು ಇಲ್ಲದೇ ಟ್ರಿಗ್ಗರ್ ಒತ್ತಿದ ಬೇಜವಾಬ್ದಾರಿತನಕ್ಕೆ ಅದು ಸಮರ್ಥನೆಯಾಗುವುದಿಲ್ಲ!! ಈಗಲೂ ಅಷ್ಟೆ, 'ದೇಶಕಾಲ'ದ ಸಮಸ್ಯೆ ಏನು ಅನ್ನುವುದನ್ನು ಸ್ಪಷ್ಟವಾಗಿ ಹೇಳದೇ ಕೆ. ಫಣಿರಾಜ್, ಜಿ.ರಾಜಶೇಖರ್‌ಗೆ ಪ್ರತಿಕ್ರಿಯಿಸುವುದೇ ಆದ್ಯತೆಯಾದರೆ, ಈ ಗುದ್ದಾಟದ ರೋಚಕ ಚಪಲದಲ್ಲಿ ಮುಖ್ಯ ವಿಚಾರ ತೆರೆಗೆ ಸರಿಯಬಹುದು.

ಜಿ.ಆರ್ ಮೊದಲ ಬಾರಿಗೆ ಒಂದು ವಿಚಾರದ ಬಗ್ಗೆ ಸಾಮಾಜಿಕ, ಸಾಂಸ್ಕೃತಿಕ ದೊಡ್ಡ ಕ್ಯಾನವಾಸಿನ ಹಿನ್ನೆಲೆಯಲ್ಲಿ ಚರ್ಚಿಸದೇ, ಅದನ್ನೊಂದು ಪ್ರಾಡಕ್ಟ್ ಅನ್ನೋ ಥರ ಪ್ರತಿಕ್ರಿಯಿಸಿದ್ದು ಆಶ್ಚರ್ಯ. ಸಾಮಾನ್ಯವಾಗಿ ಅವರು ಈ ರೀತಿಯ ಎರರ್ ಮಾಡುವುದಿಲ್ಲ!! ಐಜೂರ್-ಲತಾ ಅವರ ಪಡ್ಡೆ ಪದರ್ಸಯ ಭಾಷೆಗೆ ರೇಗುವ ಭರದಲ್ಲಿ ಜಿ.ಆರ್. 'ದೇಶಕಾಲ' ವಿಮರ್ಶಾತೀತ ಪೆಸ್ಸುವಂಥಾ ಇಂಪ್ರೆಸನ್ ಕೊಟ್ಟಿದ್ದಾರೆ.

ಮೂಲತಃ 'ದೇಶಕಾಲ'ದ ಸಮಸ್ಯೆಯನ್ನು ಯಾರೂ ನಿಖರವಾಗಿ ಹೇಳುತ್ತಿಲ್ಲ ಎನ್ನುವುದೇ ಈ ಚರ್ಚೆಯ ಕೊರತೆ.

'ದೇಶಕಾಲ'ದ ಸಮಸ್ಯೆ ಇರುವುದು ಅದಕ್ಕಿರುವ ಕಾಣ್ಕೆಯ ಅಭಾವದಲ್ಲಿ. ಒಂದು ಪತ್ರಿಕೆ (ಒಂದು ಸಾರ್ವಜನಿಕ ಕ್ರಿಯೆ) ಚಾರಿತ್ರಿಕವಾಗಿ ತಾನು ಯಾಕೆ ಹುಟ್ಟಿಕೊಂಡೆ ಎಂಬ ಬಗ್ಗೆ ಜಾಗೃತವಾಗಿರುತ್ತದೆ. ಅವಲೋಕನ, ಪುನರಾವಲೋಕನ, ಆತ್ಮಾವಲೋಕನದ ಸೂಕ್ಷ್ಮತೆ ಈ ಪತ್ರಿಕೆಯನ್ನು ರೆಲೆವೆಂಟ್ ಆಗಿಸುತ್ತೆ. ಎಲ್ಲಾ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಸಾಕ್ಷಿ, ಸಂಕ್ರಮಣ, ರುಜುವಾತು, ಶೂದ್ರದಂಥಾ ಪತ್ರಿಕೆಗಳು ಇದನ್ನು ಮಾಡಿದ್ದವು. 'ದೇಶಕಾಲ' ಇಂಥಾ ಛಾಪನ್ನು ರಿಜಿಸ್ಟರ್ ಮಾಡಿಲ್ಲದಿರುವುದಕ್ಕೆ ಕಾರಣ ಅದರ ಆದ್ಯತೆ ಮತ್ತು ಗುರಿಗಳ ಬಗ್ಗೆ ಸ್ಪಷ್ಟತೆ ಇಲ್ಲದಿರುವುದೇ ಆಗಿದೆ. ಸಮಯ ಪರೀಕ್ಷೆಯಂಥಾ ವೇದಿಕೆಯಲ್ಲಿ ಕೆಲವು ವಿಷಯಗಳು ಚರ್ಚಿತವಾಗಿದ್ದರೂ, ಅದು ವಿಸ್ತೃತ 'ದೇಶಕಾಲ' ದಲ್ಲಿ ಹರಡಿಕೊಳ್ಳಲಿಲ್ಲ.

'ದೇಶಕಾಲ'ದ ಎರಡನೇ ಸಮಸ್ಯೆ: ಅದು ಒಂದು ಗ್ರಹಿತ ಉತ್ಕೃಷ್ಟತೆಯ ಮಾದರಿಯನ್ನು ಕಲ್ಪಿಸಿಕೊಂಡು ರೂಪು ಪಡೆಯಲೆತ್ನಿಸುತ್ತಿರುವಂತಿದೆ. ಹೀಗಾದಾಗ ಚೆಂದದ ಭೌತಿಕ ಉತ್ಪನ್ನ ಬರುತ್ತದೇ ಹೊರತು ಬೌದ್ಧಿಕ ಹುಡುಕಾಟದ ಉದ್ದೀಪನವೇ ಇರುವುದಿಲ್ಲ. ಪದೇಪದೆ ಸುಂದರ ಸಂಚಿಕೆ ಬಂದಾಗಲೂ ಅದಕ್ಕೊಂದು ಕೇಂದ್ರ ಧ್ಯಾನವಿದೆಯೆಂದು ಅನ್ನಿಸದಿರುವುದು ಈ ಕಾರಣಕ್ಕೆ. ವಿವೇಕರ ಸಂಪಾದಕೀಯವನ್ನು ರುಜುವಾತಿನ ಮೇಷ್ಟ್ರ ಸಂಪಾದಕೀಯಗಳಿಗೆ ಹೋಲಿಸಿದರೆ ಇದು ಸ್ಪಷ್ಟವಾದೀತು.

ವಿಶೇಷಾಂಕದಲ್ಲೇ ಈ ಲಕ್ಷಣಗಳು ಇವೆ. ಅಲ್ಲಿನ ಕತೆ ಕವನಗಳೆಲ್ಲ ಒಂದು ವಿಶಿಷ್ಟ ಸಾಂಸ್ಕೃತಿಕ ಉದ್ದಿಶ್ಯದಿಂದ ಸಂಗ್ರಹವಾದಂತೆ ತೋರುವುದಿಲ್ಲ. 21ನೇ ಶತಮಾನದ ಪ್ರತಿಭಾ ಮಾಲಿಕೆ(!)ಯಲ್ಲೂ ಇದು ಢಾಳಾಗಿ ಕಾಣುತ್ತದೆ. ಈ ಲೇಖಕರ ಬಗೆಗಿನ ಲೇಖನಗಳು ಸಂಡೇ ರಿವ್ಯೂನಷ್ಟೇ ಕ್ಯಾಸುವಲ್ ಆಗಿವೆ. ಈ ಲೇಖಕರು ಯಾಕೆ ಮುಖ್ಯರಾಗುತ್ತಾರೆ ಎಂದು ಯಾರೂ ಹೇಳುವುದೇ ಇಲ್ಲ.

ಒಂದು ಪತ್ರಿಕೆ ತನ್ನ ರೆಗ್ಯುಲಾರಿಟಿಯ ಶಿಸ್ತಿಗಾಗಿ ಕೆಲವರನ್ನು ನೆಚ್ಚಿಕೊಳ್ಳುವುದು ಅನಿವಾರ್ಯ. ಆದರೆ ಈ ಆಯ್ಕೆಗೆ ಒಂದು ಬೌದ್ಧಿಕ ಕಾಣ್ಕೆಯ ಬುನಾದಿ ಬೇಕಲ್ಲ! 'ದೇಶಕಾಲ'ದಲ್ಲಿ ಪದೇಪದೆ ಕಾಣಿಸಿಕೊಂಡ ಲೇಖಕರು ನಮಗೆ ಬೇರೆಲ್ಲೂ ಸಿಗದ ವಿಶಿಷ್ಟವಾದ ಏನನ್ನಾದರೂ ನೀಡಿದ್ದಾರೆ ಎನ್ನಿಸುವುದೇ ಇಲ್ಲ (ಅಕ್ಷರ ಅವರ ಕೆಲವು ಪ್ರಯತ್ನ ಬಿಟ್ಟರೆ). 'ದೇಶಕಾಲ'ದಲ್ಲಿ ಪ್ರಕಟಗೊಂಡಿರುವ ಕತೆ ಕವನ, ಅನುವಾದಗಳು ಬೇರೆಲ್ಲಾದರೂ ಪ್ರಕಟಗೊಳ್ಳಬಹುದಾಗಿದ್ದ ಕೃತಿಗಳೇ. 'ದೇಶಕಾಲ'ದಲ್ಲೇ ಏಕೆ ಎಂಬುದಕ್ಕೆ ಕಾರಣಗಳು ಕಾಣಿಸುವುದಿಲ್ಲ.

ಈ ಹಿಂದೆ ಕನ್ನಡದ ಮಾಸಿಕವೊಂದು ತಿರಸ್ಕರಿಸಿದ್ದ ಕವನವೊಂದನ್ನು ಅಡಿಗರು ಸಾಕ್ಷಿಯಲ್ಲಿ ಪ್ರಕಟಿಸಿದ್ದರು, ತನ್ಮೂಲಕ ತನ್ನ ಕಾಲದ ಸಾಹಿತ್ಯದ ಓದಿನ ಕ್ರಮವನ್ನು ತೋರಿಸಿಕೊಟ್ಟಿದ್ದರು.

ಸ್ವಪ್ರತಿಷ್ಠೆಯೋ ಕೀಳರಿಮೆಯೋ?

ಪ್ರಿಯರೇ

'ದೇಶಕಾಲ' ಕುರಿತ ನನ್ನ ಬರಹಕ್ಕೆ ಬಂದ ಪ್ರತಿಕ್ರಿಯೆಗಳನ್ನು ಓದಿದೆ. ಆ ಪತ್ರಿಕೆಯ ...ಗೆ ನಾನು ನಿಲ್ಲುವ ಅಗತ್ಯವಿಲ್ಲವಾದರೂ, ನನ್ನ ನಿಲುವನ್ನು ನಾನು ಸಮರ್ಥಿಸಿಕೊಳ್ಳಬೇಕಿದೆ. 'ದೇಶಕಾಲ'ದ ಪರ ವಕಾಲತ್ತು ಅಥವಾ ಪ್ರೆಸ್‌ನೋಟ್‌ನಂತೆ ಓದುಗರಿಗೆ ...ವಾದರೆ ಅವರು ಅದನ್ನು ಹಾಗೆಂದೇ ಭಾವಿಸಬಹುದು.

'ದೇಶಕಾಲ' ಯಾವ ಬಗೆಯ ಪ್ರಕಟಣೆ ಎಂಬುದರ ಬಗ್ಗೆ ಸರಿಯಾದ ಗ್ರಹಿಕೆ ...ರುವುದೇ, ಅದರ ಕುರಿತು ಅನಗತ್ಯವಾದ ವಿವಾದಕ್ಕೆ ಕಾರಣವಾಗಿದೆ. ಶಾಲೆ ...ಜುಗಳ ಪಠ್ಯಪುಸ್ತಕ ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳ ಪ್ರಕಟಣೆಗಳ ...ಕ/ಸಂಪಾದಕರಿಗೆ ಇರುವ ಉತ್ತರದಾಯಿತ್ವ 'ದೇಶಕಾಲ'ದಂತಹ ನಿಯತಕಾಲಿಕಗಳಿಗೆ ... ಕನ್ನಡದ ಈ ಬಗೆಯ ಎಲ್ಲ ಪತ್ರಿಕೆಗಳೂ ಆಯಾ ಸಂಪಾದಕರ ಸಂಕಲ್ಪ ಮತ್ತು ...ಗಳನ್ನು ಮಾತ್ರ ನೆಚ್ಚಿಕೊಂಡು ನಡೆಯುತ್ತಿರುವಂತಹವು. 'ದೇಶಕಾಲ' ಯಾರ ...ಕೆ ಅಥವಾ ವಿನಂತಿಯ ಮೇರೆಗೂ ಪ್ರಾರಂಭವಾದದ್ದಲ್ಲ, ಅದು ಸಂಪಾದಕರು ...ಕೊಂಡ ಹರಕೆಯೂ ಅಲ್ಲ, ಮುಂದೊಂದು ದಿನ, ಈ ಪತ್ರಿಕೆ ನಡೆಸುವ ರಗಳೆ ...ೀ ಸಾಕು ಅನ್ನಿಸಿ, ಸಂಪಾದಕರು ಅದನ್ನು ಬರ್ಖಾಸ್ತುಗೊಳಿಸಿದರೆ, ಯಾಕೆ ಎಂದು ...ಪ ಪೋಲಾಂಡ ನಾಯಕನೂ ಪ್ರಶ್ನೆ ಮಾಡುವಂತಿಲ್ಲ, ಆದರೆ ಅರುಣ್ ಜೋಳದಕೂಡ್ಲಿಗಿ ...ಹದ್ದೊಂದು ಸಾಧ್ಯತೆಯನ್ನು ಊಹಿಸಿ (ಅವರ ಊಹೆ ಸುಳ್ಳಾಗಲಿ) ಅಡ್ವಾನ್ಸಾಗಿ ...ಕಾಲ'ದ ಸಂಪಾದಕರನ್ನು ಹಂಗಿಸಿದ್ದಾರೆ. ಇದು ಅಲ್ಪತನ.

ಪಠ್ಯಪುಸ್ತಕಗಳನ್ನು ಓದುವುದು ವಿದ್ಯಾರ್ಥಿಗಳಿಗೆ ಕಡ್ಡಾಯ. ಸಂಘ, ಸಂಸ್ಥೆ, ಪ್ರತಿಷ್ಠಾನ, ... ಇತ್ಯಾದಿಗಳ ಪ್ರಕಟಣೆಗಳನ್ನು ಓದುವುದಕ್ಕೂ ಒಂದು ಒತ್ತಾಯವಿರುತ್ತದೆ. ಆದರೆ ...ಕಾಲ'ದಂತಹ ಪತ್ರಿಕೆಗಳ ಓದು, ಇಂತಹ ಯಾವುದೇ ಒತ್ತಾಯ, ಒತ್ತಡಗಳಿಂದ ...ಯುವಂತಹದ್ದಲ್ಲ, ಸಂಪಾದಕರ ಅಭಿರುಚಿ, ವಿವೇಚನೆಗಳಲ್ಲಿ ನಂಬಿಕೆ ಇರುವವರು ... ಇಂತಹ ಪತ್ರಿಕೆಗಳನ್ನು ಓದುವುದು. ಓದುಗರಿಗೆ ಸಂಪಾದಕರ ಮೇಲೆ ...ವಿರುವಷ್ಟು ಕಾಲ ಸಂಪಾದಕರೂ, ಓದುಗರ ಪ್ರಶ್ನೆ, ಅನುಮಾನಗಳಿಗೆ ಉತ್ತರಿಸುವುದಕ್ಕೆ ...ರು. ಲತಾ ಮತ್ತು ಐಜೂರ್ ಅವರಿಗೆ 'ದೇಶಕಾಲ'ದ ಸಂಪಾದಕರ ಅಭಿರುಚಿ ... ನ್ಯಾಯಪರತೆಯ ಬಗ್ಗೆ ಚೂರೂ ವಿಶ್ವಾಸವಿಲ್ಲ, ಆ ಪತ್ರಿಕೆಯ ಪ್ರಕಟಣೆಯೇ ...ದು ಘೋರ ಅಪರಾಧ ಎಂಬಂತೆ ಅವರು ಬರೆಯುತ್ತಾರೆ. 'ದೇಶಕಾಲ' ವಿಶೇಷಾಂಕ ...ವಲ ನೋಟಕ್ಕೇನೆ-ಓದಿಗೆ ಕೂಡ ಅಲ್ಲ- ಅವರಿಗೆ ತಾಲ್ಲೂಕು ಆಫೀಸಿನಲ್ಲಿ ...ಯುತ್ತಿರುವ ನೆರೆಪರಿಹಾರದ ಕಡತಗಳ ಹಾಗೆ ಕಂಡಿದೆ. ಅದರ ಬಗ್ಗೆ ಆಡಬಾರದ ...ತುಗಳನ್ನೆಲ್ಲ ಆಡಿ, ಈಗ ತಮ್ಮದು ಶಾಕ್ ಟ್ರೀಟ್‌ಮೆಂಟ್ ಎಂದು ಅವರು ...ರ್ಥಿಸಿಕೊಳ್ಳುತ್ತಾರೆ! ಶಾಕ್ ಟ್ರೀಟ್‌ಮೆಂಟ್‌ನಂತಹ ಬರ್ಬರ ಚಿಕಿತ್ಸೆಯನ್ನು ...ೋಗಿಸುವುದು ಮನೋರೋಗಿಗಳ ಮೇಲೆ. 'ದೇಶಕಾಲ'ದ ಬಗ್ಗೆ ಇಂತಹ ಅಭಿಪ್ರಾಯ ...ಂದಿರುವವರ ಜೊತೆ ಸಂವಾದ ಸಾಧ್ಯವೆ?

ಲತಾ-ಐಜೂರ್ 'ರೈತರ ಆತ್ಮಹತ್ಯೆಯಿಂದ ಹಿಡಿದು ಮತಾಂತರ ನಿಷೇಧದ ...ಯವರೆಗೆ 13 ಸಮಸ್ಯೆಗಳನ್ನು ಹೆಸರಿಸಿ, ಈ ಪಟ್ಟಿ ಇನ್ನೂ ದೊಡ್ಡದಿದೆ ಎಂಬುದುನ್ನೂ ...ಸೂಚಿಸಿ, 'ದೇಶಕಾಲ' ಈ ಯಾವ ಸಮಸ್ಯೆಯ ಬಗ್ಗೆಯೂ ಮಾತಾಡಿಲ್ಲ ಎಂದು ...ದಿಸಿದ್ದಾರೆ. ಇಂತಹ ತಲೆ ತಿರುಕತನದ ಆರೋಪಗಳಿಗೆ ಉತ್ತರಿಸುವ ಜರೂರು ...ವಾದರೂ ಈ ಲೇಖಕದ್ವಯರು 'ದೇಶಕಾಲ'ದ ಕಳೆದ ಐದು ವರ್ಷಗಳ ಎಲ್ಲ ...ಚಿಕೆಗಳೂ ಹಾಗೂ ವಿಶೇಷಾಂಕವನ್ನು ಗಮನ ಕೊಟ್ಟು ಓದಬೇಕಾಗಿ ಅರಿಕೆ ...ಡಿಕೊಳ್ಳುತ್ತೇನೆ. ಇವರು ಹೆಸರಿಸಿದ ಮತ್ತು ಇವರ ಪಟ್ಟಿಯಲ್ಲಿ ನಮೂದಾಗದ ...ವು ಸಮಸ್ಯೆಗಳ ಬಗ್ಗೆ ಈ ಸಂಚಿಕೆಗಳಲ್ಲಿ ಬರೆಯಲಾಗಿದೆ. ಕರ್ನಾಟಕದ ...ಬುದುಮ್ಮಾನಗಳಿಗೆ, ಇಂತಹ ಯಾವುದೇ ನಿಯತಕಾಲಿಕಕ್ಕಿಂತಲೂ ಹೆಚ್ಚು ತುರ್ತಿನಲ್ಲಿ ...ಶಕಾಲ' ಸ್ಪಂದಿಸಿದೆ. ಇದನ್ನು ಮನವರಿಕೆ ಮಾಡಿಕೊಳ್ಳಲಾದರೂ ಲತಾ-ಐಜೂರ್ ...ಶಕಾಲ'ವನ್ನು ಆಮೂಲಾಗ್ರವಾಗಿ ಓದಬೇಕು. "ಕುರಿತೋದದೆಯೂ ಕಾವ್ಯ ಪ್ರಯೋಗ ...ಣತಮತಿ"ಗಳಾಬಹುದೋ ಏನೋ. ಆದರೆ ವಿಮರ್ಶಕರಾಗುವುದು ಬಿಲ್ಕುಲ್ ...ವಿಲ್ಲ. ಇಷ್ಟು ಹೇಳಿದ ಮೇಲೆ, ಲತಾ-ಐಜೂರ್ ಪಟ್ಟಿ ಮಾಡಿರುವ ಸಮಸ್ಯೆಗಳ ... ಮಾತಾಡಬೇಕಾದ ಆದ್ಯಕರ್ತವ್ಯವಿರುವುದು ಅಧಿಕಾರಸ್ಥ ರಾಜಕಾರಣಿಗಳಿಗೆ ಎಂಬುದು ... ಇಲ್ಲಿ ಕಾಣಿಸಬೇಕು. 'ದೇಶಕಾಲ'ದ ಸಂಪಾದಕ ರಾಜಕಾರಣಿಯಲ್ಲ, ಈಗೀಗ ...ತಾರಸ್ಥರ ದರ್ಬಾರಿನಲ್ಲಿ ಆಸ್ಥಾನ ಕವಿ ಹಾಗೂ ವಿದೂಷಕರ ಜೊತೆ ಜನಪರ ...ತುಗಳನ್ನು ಆಡುವ ಕ್ರಾಂತಿಕಾರಿಗಳೂ ಹಾಜರಿರುತ್ತಾರೆ. ದುರದೃಷ್ಟವಶಾತ್ 'ದೇಶಕಾಲ'ದ ಸಂಪಾದಕರು ಆಸ್ಥಾನ ಕ್ರಾಂತಿಕಾರಿಯೂ ಅಲ್ಲ, ವಿಧಾನಸಭೆಯಲ್ಲಿ ಮೊದಲು ಕೇಳಬೇಕಾದ ಇವರು ಯಾಕೆ ಉತ್ತರಿಸಬೇಕು?

ಲತಾ-ಐಜೂರ್ ಅವರಲ್ಲಿ ನಾನು ಮೆಚ್ಚಿಕೊಂಡ ಒಂದು ಸಂಗತಿಯ ಬಗ್ಗೆ ಹೇಳಲೇಬೇಕು. ಶ್ರೀಯುತರಿಗೆ ಭಾರತೀಸುತ, ಕೊರಡಲ್ ಶ್ರೀನಿವಾಸರಾಯರು ಮತ್ತು ಮಾಸ್ತಿಯವರ ಬಗ್ಗೆ ಗೌರವವಿರುವುದಾಗಿ ಅವರ ಲೇಖನದಿಂದ ತಿಳಿಯಿತು. ಇದರಿಂದ ನನಗೆ ಶಾನೇ ಸಂತೋಷವಾಗಿದೆ.

'ದೇಶಕಾಲ'ವನ್ನು ವಹಿಸಿಕೊಂಡು ನಾನು ಬರೆದದ್ದರಿಂದ ಅರುಣ್ ಜೋಳದ ಕೂಡ್ಲಿಗಿಯವರಿಗೆ ಪೆಚ್ಚಾಗಿದೆಯಂತೆ. ಈಗಾಗಲೇ ಆರೋಪ ಸಾಬೀತಾಗಿರುವ ಅಪರಾಧಿ ಒಬ್ಬನನ್ನು ನಾನು ಸಮರ್ಥಿಸುತ್ತಿದ್ದೇನೆ ಎಂಬ ರೀತಿಯಲ್ಲಿ ಅವರು ಬರೆದಿದ್ದಾರೆ. 'ದೇಶಕಾಲ'ದ ಸಂಪಾದಕದಿಂದ ಅರುಣ್ ಹಾಗೂ ವಿಕ್ರಮ್ ವಿಸಾಜಿಯವರಿಗೆ ಮುಜುಗರವಾಗಿದ್ದು ಇವರ ಪ್ರಕಾರ ಅದೇ ಕರ್ನಾಟಕದ ಈ ಹೊತ್ತಿನ ಬಹುದೊಡ್ಡ ಸಾಂಸ್ಕೃತಿಕ ಸಮಸ್ಯೆ. 'ದೇಶಕಾಲ' ವಿಶೇಷಾಂಕದ 21 ನೆಯ ಶತಮಾನದ ಲೇಖಕರ ಪಟ್ಟಿಯಲ್ಲಿ ವಿಕ್ರಮ್ ವಿಸಾಜಿಯವರು ಕಾಣಿಸಿಕೊಳ್ಳದೆ ಇರುವುದಕ್ಕೆ ಒಂದು ತಾಂತ್ರಿಕ ತೊಡಕು ಹೊರತಾಗಿ ಬೇರೆ ಯಾವ ಕಾರಣವೂ ಇಲ್ಲ, ಅದನ್ನು ವಿಶೇಷಾಂಕದಲ್ಲಿ ಸಂಪಾದಕರೇ ಸ್ಪಷ್ಟಪಡಿಸಿದ್ದಾರೆ. ಅರುಣ್ ಅವರಿಗೆ ಈ ಪಟ್ಟಿಯಲ್ಲಿ ವಿಕ್ರಮ್ ವಿಸಾಜಿ ಇಲ್ಲವೆಂದು ಸಿಟ್ಟು; ಹಾಗೆಯೇ ತಮ್ಮ ಹೆಸರು ಇದೆ ಎಂದೂ ಸಿಟ್ಟು. ಅದಕ್ಕೆ ಅವರು ಕೊಟ್ಟಿರುವ ಕಾರಣವಂತೂ ಹಾಸ್ಯಾಸ್ಪದವಾಗಿದೆ. ಅವರಿಗಿಂತ ಚೆನ್ನಾಗಿ ಬರೆಯುವ ಹಲವರ ಹೆಸರು ಆ ಪಟ್ಟಿಯಲ್ಲಿ ಬಿಟ್ಟು ಹೋಗಿದೆಯಂತೆ! ಅವರ ಕವಿತೆ ಪ್ರಕಟಿಸುವುದಾಗಿ ಸಂಪಾದಕರು ಮಾತು ಕೊಟ್ಟು ನಂತರ ತಮ್ಮ ಮಾತು ಉಳಿಸಿಕೊಂಡಿಲ್ಲವಂತೆ. ಹಾಗಾಗಿ ಅರುಣ್ ಅವರಿಗೆ ತಮ್ಮನ್ನು 'ದೇಶಕಾಲ' ವಿಶೇಷಾಂಕದಲ್ಲಿ ಬ್ರಾಹ್ಮಣರಿಗೆ ಮೀಸಲಾಗಿರುವ ಪಡಸಾಲೆಯಲ್ಲಿ ಕೂರಿಸದೆ ಜಗಲಿಯಲ್ಲಿ ಇರಿಸಿದಂತೆ ಅನ್ನಿಸಿ ಅವಮಾನವಾಗಿದೆ. ಅಷ್ಟು ಮಾತ್ರವಲ್ಲ ತಮ್ಮ ಕವಿತೆ ಪ್ರಕಟವಾಗದೆ ಇರುವುದು 'ದೇಶಕಾಲ'ದ ಜಾತಿ ಪಕ್ಷಪಾತಕ್ಕೆ ಒಂದು ನಿರ್ದೇಶನವಾಗಿ ಅವರಿಗೆ ಕಂಡಿದೆ. ಇಷ್ಟು ಕ್ಷುಲ್ಲಕ ಹಾಗೂ ಕೇವಲ ಸಾಂದರ್ಭಿಕವಾದ ಸಾಕ್ಷ್ಯವನ್ನು ಮುಂದೆ ಮಾಡಿ ಅವರು ಆ ಪತ್ರಿಕೆಯ ವಿರುದ್ಧ ಅಲ್ಪಾಯುಷ್ಯದ ತೀರ್ಪನ್ನೂ ಕೊಟ್ಟಿದ್ದಾರೆ. ಅರುಣ್ ಅವರದ್ದು ಅತಿಯಾದ ಸ್ವಪ್ರತಿಷ್ಠೆಯೋ ಅಥವಾ ಅತೀವ ಕೀಳರಿಮೆಯೋ ಎಂದು ನನಗೆ ತಿಳಿಯದಾಗಿದೆ. ಅದು ಏನಿದ್ದರೂ ಅವರ ಉದ್ಗಾರಗಳನ್ನು ಗಂಭೀರವಾಗಿ ಪರಿಗಣಿಸುವುದಂತೂ ಸಾಧ್ಯವಿಲ್ಲ.

ಸಾಹಿತ್ಯ ನಿಯತಕಾಲಿಕವೊಂದರ ಸಂಪಾದಕ, ತನ್ನ ಪತ್ರಿಕೆಗೆ ಸಂಬಂಧಿಸಿದ ಪತ್ರ ವ್ಯವಹಾರ ಮಾತ್ರ ಮಾಡುವ ಗುಮಾಸ್ತನಲ್ಲ. (ಅದೇನೂ ಕಡಿಮೆ ಶ್ರಮದ ಕೆಲಸವಲ್ಲ). ತನ್ನ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳನ್ನು ಆಯ್ದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಆತನಿಗೆ ಇದೆ. ಲಕ್ಷಾಂತರ ಓದುಗರು ಹಣ ಕೊಟ್ಟು ಓದುವ ಹಾಗೂ ಸಮಾಜದ ಶಾಂತಿಯ ಬಗ್ಗೆ ಹೆಚ್ಚು ಜವಾಬ್ದಾರಿ ಇರುವ ದಿನ/ವಾರಪತ್ರಿಕೆಗಳಲ್ಲಿ ಕೂಡ, ಎಲ್ಲ ವಿಷಯಗಳಲ್ಲೂ ಸಂಪಾದಕರದ್ದೇ ಅಂತಿಮ ತೀರ್ಮಾನ. ಹಾಗಿರುತ್ತ ಸಾಹಿತ್ಯ ನಿಯತಕಾಲಿಕಗಳ ಸಂಪಾದಕರಿಗೆ ಆ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸುವಂತಿಲ್ಲ. 'ದೇಶಕಾಲ'ವನ್ನು ವಿಮರ್ಶೆಗೆ ಒಳಪಡಿಸಲೇಬಾರದು ಎಂಬುದು ಖಂಡಿತ ನನ್ನ ನಿಲುವಲ್ಲ. ಯಾವುದೇ ಪ್ರಕಟಣೆಯ ವಿಮರ್ಶೆ, ಅದರ ಪಠ್ಯವನ್ನು ಆಧರಿಸಿರಬೇಕು ಎಂದು ಮಾತ್ರ ನನ್ನ ಆಗ್ರಹ. 'ದೇಶಕಾಲ'ವನ್ನು ಸಮರ್ಥಿಸುವ ನಾನು ವಿಜಯ ಕರ್ನಾಟಕವನ್ನು ಯಾಕೆ ಟೀಕಿಸುತ್ತೇನೆ ಎಂದು ಪ್ರಭು ಪಾಟೀಲ ಪ್ರಶ್ನಿಸಿದ್ದಾರೆ. ವಿ.ಕ.ದ ಕುರಿತು ನಾನು ಬರೆದ ಲೇಖನಗಳು ಮತ್ತು 'ದೇಶಕಾಲ'ದ ಬಗ್ಗೆ ಲತಾ-ಐಜೂರ್ ಬರೆದ ಲೇಖನಗಳ ನಡುವೆ ಇರುವ ವ್ಯತ್ಯಾಸವನ್ನು ಪಾಟೀಲರಿಗೆ ವಿವರಿಸಿ ಹೇಳುವ ವ್ಯವಧಾನ ನನಗೆ ಇಲ್ಲ, ಜನಪ್ರಿಯ ದಿನಪತ್ರಿಕೆ ಮತ್ತು ಸಾಹಿತ್ಯದ ನಿಯತ ಕಾಲಿಕಗಳ ನಡುವಣ ವ್ಯತ್ಯಾಸಗಳ ಕುರಿತು ಅವರಿಗೆ ಕ್ಲಾಸು ತೆಗೆದುಕೊಳ್ಳುವ ಇರಾದೆಯೂ ನನಗೆ ಇಲ್ಲ, ವಯಸ್ಕರ ಶಿಕ್ಷಣ ನನ್ನ ಜವಾಬ್ದಾರಿಯಲ್ಲ.

• ಜಿ. ರಾಜಶೇಖರ

ದೇಶಕಾಲ ಚರ್ಚೆ

ದೇಶಕಾಲಕ್ಕೆ ಸ್ಪಂದಿಸದ 'ದೇಶಕಾಲ'

'ದೇಶಕಾಲ' ಪತ್ರಿಕೆ ಕುರಿತು ನಡೆಯುತ್ತಿರುವ ಈ ಚರ್ಚೆ ಸಾಂಸ್ಕೃತಿಕ ಸಂದರ್ಭದ ಒಂದು ಮುಖ್ಯ ಬೋಧನೆಯಾಗಿ ಕಾಣುತ್ತಾ ನನಗೂ ಪ್ರತಿಕ್ರಿಯಿಸಬೇಕೆನಿಸುತ್ತಿದೆ. 'ದೇಶಕಾಲ' ಒಂದು ಒಳ್ಳೆಯ ಪತ್ರಿಕೆ. ಅದನ್ನು ತರುತ್ತಿರುವವರು ಕನ್ನಡದ ಒಳ್ಳೆಯ ಕಥೆಗಾರರಲ್ಲಿ ಒಬ್ಬರಾದ ವಿವೇಕ ಶಾನಭಾಗರೂ ಒಳ್ಳೆಯವರು. ಈ ಬಗ್ಗೆ ಎರಡು ಮಾತು ಇಲ್ಲವೇ ಇಲ್ಲ. ಐದು ವರ್ಷಗಳಿಂದ ನಾನೂ ಈ ಪತ್ರಿಕೆಯ ಚಂದಾದಾರಳಾಗಿ ಸರಿಯಾದ ಸಮಯಕ್ಕೆ ಈ ಪತ್ರಿಕೆ ತನ್ನ ಸುಂದರ ಮುಖಪುಟ-ಉತ್ತಮ ಗುಣಮಟ್ಟದ [illegible] ದೊಡನೆ ಬಂದು ಕೈ ಸೇರುವುದನ್ನು [illegible]

ಇತ್ತೀಚೆಗೆ ವಿವೇಕರು ಬೆಂಗಳೂರಿನಲ್ಲಿ ಭೇಟಿಯಾದಾಗಲೂ ಸಹ ಹಿಂದಿನ ದಿನ ತಾನು ಕೊರಿಯರ್‌ನಲ್ಲಿ [illegible] 'ದೇಶ ಕಾಲ ವಿಶೇಷ'ದ ಪುಟ ತಿರುವಿ ನೋಡಿದ್ದ ನಾನು ಇಷ್ಟದ ಲೇಖಕರ ಕೆಲವು ಬರಹಗಳನ್ನು ಅದರಲ್ಲಿ ಗಮನಿಸಿದ್ದರಿಂದ—ಇಡೀ ಬೃಹತ್ ಗಾತ್ರದ ದೇಶಕಾಲದ ಸಂಪುಟ 'ಅಮರಚಿತ್ರ ಕಥಾ ಸಂಪುಟ'ದಂತೆ great ಎಂದೇ ಅನ್ನಿಸಿದ್ದರಿಂದ 'ತುಂಬಾ ಚನ್ನಾಗಿದೆ' ಎಂದೇ ಹೇಳಿದ್ದೆ. ಆದರೆ ನನ್ನ ಪ್ರತಿಕ್ರಿಯೆಯ ಬಗ್ಗೆ ಒಂದು [illegible] ಅಳುಕು ಚುಚ್ಚುತ್ತಲೇ ಇತ್ತು. ಆ ಅಳುಕನ್ನು ಒಳಹೊಕ್ಕು ಚಿಂತಿಸುತ್ತಾ ಹೋದಾಗ ನನಗೆ ಅನ್ನಿಸಿದ್ದಿಷ್ಟು: 'ದೇಶಕಾಲ' ಪತ್ರಿಕೆ down to earth ಆಗಿಲ್ಲ ಎಂಬುದು. ಇದನ್ನು ವಿವೇಕರ ಬಳಿ ನೇರವಾಗಿ ಹೇಳಲಾಗದ ದಾಕ್ಷಿಣ್ಯದಿಂದ ಸುಮ್ಮನಿದ್ದುದಕ್ಕೂ ನನಗೆ ಬೇಸರವಿದೆ. ಆದರೆ ಮಂಜುನಾಥ ಲತಾ ಹಾಗೂ ಚಂದ್ರಶೇಖರ ಐಜೂರರ ಈ ಸಿಟ್ಟಿನ ಮುಖಾಮುಖಿಯ ಚರ್ಚೆ ನನ್ನಿಂದ ಈ ಮಾತನ್ನು ಹೊರಗೆ ಬರಿಸಲು ಕಾರಣವಾಯಿತಲ್ಲ ಎಂಬ ಸಮಾಧಾನವೂ ಈಗ ಇದೆ. 'ದೇಶ ಕಾಲ' ಹೆಸರಿಗೆ [illegible] ಒಳಗೊಂಡಿಲ್ಲ ಎಂಬುದನ್ನು [illegible] '21' [illegible] ವ್ಯಸನದ ಮೌಲ್ಯಮಾಪನ ಇಲ್ಲಿ [illegible] ಕಾಣುತ್ತಿಲ್ಲ.

• ಜ್ಯೋತಿ ಗುರುಪ್ರಸಾದ್

...ಅನುವಾದಗಳ ಬಗ್ಗೆ ಹೇಳುವುದಾದರೆ, ದಿವಾಕರ ಮಲ್ಲಿಗೆಯಲ್ಲಿ ಕಟ್ಟಿದ ಪರಂಪರೆಗಿಂತ ಉತ್ತಮವಾದದ್ದೇನೂ ...ಶಕಾಲ' ಕೊಟ್ಟಿಲ್ಲ, (ಕೆಲವು ಅನುವಾದಗಳಂತೂ ಪೂರಾ ಕೆಟ್ಟದಾಗಿದೆ; ಜಿ. ಆರ್. ರೇಗದಂತೆ, ಹೆಸರು ಹೇಳುವೆ! ...ಲಿ, ವಿಶಾಲ, ಪಿ.ವಿ.ರಾಮಚಂದ್ರ ಅವರ ಅನುವಾದಗಳು ಸಂಪಾದಕರ ಕನಿಷ್ಠ ಶಿಸ್ತಿಗೂ ಒಳಪಟ್ಟಂತಿಲ್ಲ, ಮಯೂರ, ...ಗಳು ಮಾಸಿಕಗಳ ಶ್ರಮ ನೆನಪಿಸಿಕೊಳ್ಳಿ, ಇದು ಅರ್ಥವಾಗುತ್ತದೆ.)

...ವಿಶೇಷಾಂಕದ ಕತೆಗಳಿಗೆ ಜಯಂತ ಬರೆದ ಇಂಟ್ರೋಗಳು ಹೈಸ್ಕೂಲು ಆಟೋಗ್ರಾಫ್ ಥರ ಇದೆ ಎಂದು ಗೆಳೆಯ ...ೋಷ್ ಕೌಲಗಿ ಹೇಳಿದ್ದು ನೂರಕ್ಕೆ ನೂರು ನಿಜ. ಈ ರೀತಿಯ ಆತ್ಮೀಯತೆಯ ಪುನರಾವರ್ತನೆ ಸದರದ ನಟನೆಯ ...ನಂತೆ ಭಾಸವಾಗುತ್ತದೇ ಹೊರತು, ಒಂದು ಸಾಂಸ್ಕೃತಿಕ ಕಾಲದ ಅವಲೋಕನವಾಗಿ ಕಾಣುವುದಿಲ್ಲ.

...ಅಂದರೆ 'ದೇಶಕಾಲ'ದ ಲೇಖನಗಳೆಲ್ಲಾ 'ಹಾಗೇ ಸುಮ್ಮನೆ...' ಅಲ್ಲಿವೆ ಅಷ್ಟೇ. ಪ್ರಜ್ಞಾಪೂರ್ವಕ ಹೆಣಿಗೆಯೇನೂ ...ಸುವುದಿಲ್ಲ, ಇಂಥಾ ಆಕಸ್ಮಿಕಗಳಿಂದ ಒಂದು ವಕ್ತಾರ ನಿಲುಮೆಯ ಪತ್ರಿಕೆ ಸಾಂಸ್ಕೃತಿಕ ಅಡಿಗೆರೆಯಾಗಿ ನಿಲ್ಲಲಾರದು. ...ಒಂದು ಅ-ಐಡಿಯಾಲಾಜಿಕಲ್, ಅ-ಪೊಲಿಟಿಕಲ್ ನೆಲೆಯನ್ನೇ 'ದೇಶಕಾಲ' ಆತುಕೊಂಡಂತಿದೆ. ಇದಕ್ಕೊಂದು ಸಮ್ಯಕ್ ... ಇಲ್ಲದಿದ್ದೆ, ಈ ನೆಲೆ ತೀರಾ ಪೊದ್ದು ಸಜ್ಜನಿಕೆಯಾಗಿ, ಕ್ರಮೇಣ ಅಸಂಗತವಾಗುತ್ತದೆ. ಸೃಜನಶೀಲ ಮೀಡಿಯೋಕ್ರಿಟಿಯನ್ನು ...ರಿವಿಲ್ಲದಂತೆ ಪೋಷಿಸುತ್ತದೆ. ಕ್ಯಾಷುವಲ್ ಆದ ವ್ಯಾಖ್ಯಾನ; ಮಾನದಂಡದ ಅಭಾವಗಳೆಲ್ಲಾ ಈ ಫಜೀತಿಯಿಂದ ...ಟ್ಟಿಕೊಳ್ಳುತ್ತದೆ. ಅಂದರೆ, ಇದು ಬ್ರಾಹ್ಮಣ್ಯವೂ ಅಲ್ಲ; ಎಲೈಟೂ ಅಲ್ಲ, ಗ್ರಹಿಕೆಯ ಗೊಂದಲದ ಸರಳ ಸಜ್ಜನ ಮನಸ್ಸಿನ ...ಮ ಸಂಪಾದನೆ ಅಷ್ಟೇ. ಅಂಗಿಕದ ಮೂಲಕ ಇಂಪ್ರೆಸ್ ಮಾಡುವ ಹದಿಹರೆಯದ ಹಂಬಲಕ್ಕಿಂತ ಹೆಚ್ಚೇನೂ ನನಗೆ ಆ ...ಸೆಯಲ್ಲಿ ಕಾಣಿಸಲಿಲ್ಲ, ಎಸೆಂಶಲಿ ಅದೊಂದು ವಿಶೇಷಾಂಕ. ಉಳಿದೆಲ್ಲಾ ಪತ್ರಿಕೆಗಳಂತೆ!!

...ಶ್...!! ಯಾರನ್ನು ಸೇರಿಸಬೇಕು, ಯಾರಿಲ್ಲ ಎಂಬುದರ ಮೂಲಕ ಪತ್ರಿಕೆಯನ್ನು ಜಡ್ಜ್ ಮಾಡಲು ಸಾಧ್ಯವಿಲ್ಲ. ...ಿಂದಲೇ ಬನ್ನಾಡಿಯಾಗಲೀ ಐಜೂರ್ ಆಗಲೀ 'ದೇಶಕಾಲ'ದ ಮಿತಿಗಳ ಬಗ್ಗೆ ಹೇಳುವಾಗ 'ಹಾಗೇ ಸುಮ್ಮನೆ' ಒಂದು ...ಸಾಸ ಓದುಗರಲ್ಲೂ ಮೂಡಿದರೆ ಆಶ್ಚರ್ಯವಿಲ್ಲ!!

...ಇರಲಿ, ಈಗಾಗಲೇ ಹಲವರ ಹೆಸರು ಹೇಳಿ ಸಿಹಪ್ಪೂರ್ರ ಕಟ್ಟಿಕೊಂಡದ್ದು ಸಾಕು!!

...ನಾಹೀಗ 'ದೇಶಕಾಲ'ದಂಥಾ ಚಾರಿತ್ರಿಕ ಘಟನೆಯನ್ನು ಚರ್ಚಿಸುವ ಬದಲು, ತೀರಾ ಕ್ಷುದ್ರ ವಿಚಾರಗಳಾದ ಆದಿವಾಸಿ ...ಸ್ಯೆ, ರೈತ, ಸಮಸ್ಯೆ, ಕೋಮುವಾದದ ಬಗ್ಗೆ ಚರ್ಚಿಸೋದು ಒಳ್ಳೆಯದು...

• ಕೆ.ಪಿ.ಸುರೇಶ, ಬೆಂಗಳೂರು

ಚರ್ಚಿಸಬಹುದಾದ ವಿಸ್ತೃತ ವಿಚಾರಗಳು

'ದೇಶಕಾಲ' ವಿಶೇಷಾಂಕ ಕುರಿತು ನಡೆಯುತ್ತಿರುವ ಚರ್ಚೆಯ ಸಂದರ್ಭದಲ್ಲಿ ಜಿ.ರಾಜಶೇಖರ್ ಅವರ ಸಮರ್ಥನೆ ಕೊಂಚ ಡಿಸ್ಟರ್ಬ್ ಮಾಡಿದೆ. ಆ ಹಿನ್ನೆಲೆಯಲ್ಲಿ;

1) ಚಂದ್ರಶೇಖರ್ ಐಜೂರ್- ಮಂಜುನಾಥ್ ಲತಾ ಅವರ ಆರೋಪಗಳೆಲ್ಲವನ್ನೂ, ಅವರ ಅನ್-ಪಾರ್ಲಿಮೆಂಟರಿ ಭಾಷೆಯೊಂದಿಗೆ ಅವರ ಮುಖ್ಯ ಪ್ರಶ್ನೆಯಾದ 'ದೇಶಕಾಲ' ಪತ್ರಿಕೆಯು ಈ ಮಣ್ಣಿನ ಈ ಕಾಲದ ಸಂಕಟಗಳನ್ನು ಪ್ರತಿನಿಧಿಸುವ ಪ್ರಯತ್ನ ಮಾಡಿದೆಯೆ ಎಂಬುದನ್ನೂ ಹೊಸಕಿ ಬಿಡಲು ಆಗುತ್ತದೆಯೆ??

2) 'ದೇಶಕಾಲ' ಪತ್ರಿಕೆಗೆ ತನ್ನದೇ ಆದ ಸ್ಪಷ್ಟವಾದ ಒಂದು ದೃಷ್ಟಿಕೋನ. ಒಂದು ವಿಷನ್ ಇದೆಯೆ?

3) ಕುಶಲಕರ್ಮಿಗಳ ಸೃಜನಶೀಲತೆಯನ್ನು ಒಂದು ನಿಯತಕಾಲಿಕಕ್ಕೆ ಹೋಲಿಸುವುದು ಸಾಧ್ಯವೇ?

4) ಸಂಪಾದಕೀಯ ಧೋರಣೆ ಮತ್ತು ಆಯ್ಕೆಯೆಂಬುದು ಒಂದು ಆಯ್ಕೆಯ ರಾಜಕಾರಣವೇ ಅಲ್ಲವೇ? ಹೌದಾದಲ್ಲಿ, 'ದೇಶಕಾಲ' ಪ್ರತಿನಿಧಿಸುವ ರಾಜಕಾರಣ ಮತ್ತು ಮೌಲ್ಯಗಳ ಲಕ್ಷಣವೇನು?

ಇವು ಪ್ರಶ್ನೆಗಳಷ್ಟೇ ಅಲ್ಲ, ನಾವು ಚರ್ಚಿಸಬಹುದಾದ ವಿಸ್ತೃತ ವಿಚಾರಗಳ ಸೂಚಿಯೂ ಆಗಲಿ ಎಂದು ಆಶಿಸುವೆ.

• ಸುಮಾ ಎಂಬಾರ್, ಮೈಸೂರು

14

ಶೈಲಿಯನ್ನು ಒಪ್ಪಿಕೊಳ್ಳುವುದಕ್ಕೆ ಮುಜುಗರ. ಆದರೆ 'ದೇಶಕಾಲ'ದ ವಿರುದ್ಧವಾಗಿ ರುವುದರಿಂದ ಸುಮ್ಮನೆ ತಡೆದುಕೊಳ್ಳುವುದೊಳ್ಳೆಯದು ಎಂಬ ಕಾತುರ. ಅದೇ ನರಹಳ್ಳಿಯವರ ವಿಮರ್ಶೆ ಕೊಂಚ ಭದ್ರವಾದ ಸಾಹಿತ್ಯಿಕ ನೆಲೆಯಲ್ಲಿ 'ದೇಶಕಾಲ'ವನ್ನು ಕುಟ್ಟುತ್ತಿದೆ ಎನ್ನುವಾಗ ಅದರ ಬಗ್ಗೆ ಎಲ್ಲರೂ ಮಾತನಾಡಬೇಕೆಂಬ ಆತುರ. ಹಾಗಾಗಿ ನರಹಳ್ಳಿ ಸುಬ್ರಹ್ಮಣ್ಯ ಸಂಪೂರ್ಣವಾಗಿ ಏನನ್ನು ಬರೆದಿದ್ದಾರೆ ಎನ್ನುವುದನ್ನು ವಿವರಿಸದೆ, ತಾನು ಅದರ ಅರ್ಥ ಏನು ಎಂದು ವಿವರಿಸುತ್ತೇನೋ ಅದನ್ನು ಸತ್ಯ ಎಂದು ನಂಬಬೇಕು ಎಂಬ ಆಗ್ರಹದೊಡನೆ ವಾದಿಸುವುದು ಬನ್ನಾಡಿಯವರ 'ಪಾರ್ಟಿಸಾನ್‌ಶಿಪ್'. ದಯವಿಟ್ಟು ಓದುಗರು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿರುವ ಡಾ.ನರಹಳ್ಳಿ ಸುಬ್ರಹ್ಮಣ್ಯರ ವಿಮರ್ಶೆಯನ್ನು ಓದಿ ಪರಾಂಬರಿಸುವುದು. ಈ ಬರಹದಲ್ಲಿ ನರಹಳ್ಳಿ ಸುಬ್ರಹ್ಮಣ್ಯ ಮುಕ್ಕಾಲು ಭಾಗ ಸಂಚಿಕೆಯನ್ನು ಮೆಚ್ಚಿದ್ದಾರೆ; ಕೊನೆಯಲ್ಲಿ ಕೆಲವು ಅನುಮಾನಗಳನ್ನು ಎತ್ತಿದ್ದಾರೆ. ದೊಡ್ಡ ಸಮಸ್ಯೆ ಎಂದರೆ, ತಮಗೆ ಮೆಚ್ಚುಗೆಯಾದದ್ದನ್ನು ಸೋದಾಹರಣವಾಗಿ ವಿವರಿಸುವ ವಿಮರ್ಶಕರು, ತಮ್ಮ ಅನುಮಾನಗಳನ್ನು ತೇಲಿಸಿ ಬಿಡುತ್ತಾರೆ. ಅದನ್ನು ಒಪ್ಪುತ್ತೇನೆ. ಯಾಕೆಂದರೆ ಅವರಿಗೆ ತಮ್ಮ 'ಅನುಮಾನ'ಗಳನ್ನು ಸದ್ಯದ ತುರ್ತಿಗೆ ಶೋಧಿಸಿ ತೋರಿಸುವುದು ಕಷ್ಟ ಎಂದು ತಿಳಿದಿದೆ. 'ಅನುಮಾನ' ಎಂದು ವಿಶೇಷವಾಗಿ ಹೇಳುತ್ತಿರುವುದಕ್ಕೆ ಕಾರಣವಿದೆ. ಕೆ.ವಿ.ಸುಬ್ಬಣ್ಣ 'ಜಾಗೃತ ಸಾಹಿತ್ಯ ಸಮ್ಮೇಳನ'ದಲ್ಲಿ ಮಾಡಿದ ಭಾಷಣವಾದ 'ಶ್ರೇಷ್ಠತೆಯ ವ್ಯಸನ'ವನ್ನು ಲಂಕೇಶ್ ವಿವರಿಸುವುದು ಹೀಗೆ: "ಸಾಹಿತ್ಯದಲ್ಲಿ ಶ್ರೇಷ್ಠತೆ' ಎಂಬುದನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡ ಸಮಾವೇಶದಲ್ಲಿ ಅನೇಕಸಲ ಗೊಂದಲಗಳೆದ್ದದ್ದು ನಿಜ. ಕೆ.ವಿ.ಸುಬ್ಬಣ್ಣ ಅತ್ಯಂತ ತಿಕ್ಕಲು ನಿಲುವು ತೆಗೆದುಕೊಂಡು ಉತ್ತಮ, ಅಧಮ ಎಂಬ ಕಲ್ಪನೆ ಬೇಡ ಅಂದರಂತೆ.... ಬರುಬರುತ್ತಾ ಕೆಲವರ ತಲೆ ಮೆದುವಾಗಿ ಹೋಗುತ್ತೆ ಎಂಬುದಕ್ಕೆ ಸುಬ್ಬಣ್ಣನವರಂಥವರು ನಿದರ್ಶನ. ನಾವ್ಯಾರೂ ಅಡಿಗರಂತೆಯೋ ಇನ್ನೊಬ್ಬರಂತೆಯೋ ಬರೆಯಿರಿ ಎಂದು ಹೇಳುತ್ತಿಲ್ಲ, ಬೇರೆ ಬೇರೆ ರೀತಿಯಲ್ಲಿ ಬರೆದರೂ ಉತ್ತಮ, ಸಾಮಾನ್ಯ ಸಾಹಿತ್ಯವೇ ಅಲ್ಲದ್ದು- ಎಂಬುದರ ಬಗ್ಗೆ ಎಚ್ಚರಿಕೆ ಇರುವುದು ಸಾಧ್ಯವಿದೆ. ಇದನ್ನು ಮಧ್ಯ ಪ್ರವೇಶಿಸಿ ಮಾತನಾಡಿದ ಯು.ಆರ್. ಅನಂತಮೂರ್ತಿ ಚೆನ್ನಾಗಿ ಹೇಳಿದರು. ಆದರೆ ಇವರಿಗಿಂತ ಪರಿಣಾಮಕಾರಿಯಾಗಿ ಹೇಳಿದವರು ಇಬ್ಬರು- ಲಕ್ಷ್ಮೀಶ ತೋಳ್ಪಾಡಿ ಮತ್ತು ಕಿ.ರಂ.ನಾಗರಾಜ...' (ಟೀಕೆ-ಟಿಪ್ಪಣಿ ಸಂಪುಟ-1, "ನನಗಂತೂ ಜೀವನ್ಮರಣದ ಪ್ರಶ್ನೆ", ಪು. 431, ಪತ್ರಿಕೆ ಪ್ರಕಾಶನ, 1997). ಸುಬ್ಬಣ್ಣ ತಮ್ಮ ಭಾಷಣವನ್ನು, ತಮಗೆ ತಾವು ಸಮಜಾಯಿಷಿ ಕೊಟ್ಟುಕೊಳ್ಳುವ ಅವರ ಎಂದಿನ ಸ್ವಗತಶೈಲಿಯಲ್ಲಿ 'ಶ್ರೇಷ್ಠತೆ ಸಾಹಿತ್ಯದ ಕಸುಬಿನಲ್ಲಿ ಸಹಜವಾಗಿ ಮೂಡಿಬರುವುದು ಅಪೇಕ್ಷಣೀಯ. ಆದರೆ, ಶ್ರೇಷ್ಠತೆ ಸಾಧಿಸಬೇಕು ಎನ್ನುವುದು ವ್ಯಸನವಾಗುವುದು ನಿಜಕ್ಕೂ ಅವಶ್ಯಕವೋ?' ಎಂದು ಕೇಳಿಕೊಂಡಿದ್ದರು ('ಶ್ರೇಷ್ಠತೆಯ ವ್ಯಸನ', ಅರೆಶತಮಾನದ ಅಲೆ ಬರಹಗಳು, ಅಕ್ಷರ ಪ್ರಕಾಶನ, 2004). ಸುಬ್ಬಣ್ಣ ತಮ್ಮ ನೀನಾಸಂ ರಂಗಶಿಕ್ಷಣ ಕೇಂದ್ರದ ಮೂಲಕ ಸೂಕ್ಷ್ಮವಾದದ್ದು-'ಶ್ರೇಷ್ಠ'ವಾದದ್ದನ್ನು ಮಾತ್ರ ಪ್ರದರ್ಶಿಸುತ್ತಾರೆ; ಲಂಕೇಶ್ ತಮ್ಮ 'ಪತ್ರಿಕೆ' ಹಾಗು ಸಾಹಿತ್ಯದ ಮೂಲಕ ಜನಸಾಮಾನ್ಯರಿಗೆ 'ಸಾಧಾರಣ ಸಾಧ್ಯವಾದದ್ದನ್ನು' ಮಾತ್ರ ಎತ್ತಿ ಹಿಡಿಯುತ್ತಾರೆ ಎನ್ನುವುದು ಸಾಮಾನ್ಯ ಗ್ರಹಿಕೆ. ಆದರೆ, ಈ ಇಬ್ಬರು ನಮ್ಮ ಸಾಮಾನ್ಯ ಗ್ರಹಿಕೆ ಬುಡಮೇಲಾಗುವ ಹಾಗೆ ಚಿಂತಿಸುತ್ತಾರೆ! ಇದು ಕೂಡ ಕನ್ನಡದ 'ವಾಗ್ವಾದ ಪರಂಪರೆ'ಯ ವಿಶೇಷವೇ ಸರಿ. ಆದರೆ ಬನ್ನಾಡಿಯವರು ಮಾತ್ರ 'ಶ್ರೇಷ್ಠತೆಯ ವ್ಯಸನ' ಎನ್ನುವುದು ನಮ್ಮ ಸಾಹಿತ್ಯ-ಸಾಂಸ್ಕ?ತಿಕ ಸನ್ನಿವೇಶದಲ್ಲಿ ಈಗಾಗಲೇ ಸಿದ್ಧವಾಗಿಬಿಟ್ಟಿರುವ 'ಪ್ರತಿಗಾಮಿ ಮೌಲ್ಯ' ಎನ್ನುವಂತೆ ಬಾವುಟ ಹಾರಿಸುತ್ತಾರೆ-ಅದು ಲಂಕೇಶರ ಹೆಸರನ್ನೆತ್ತಿ! ಹಾಗೆಯೇ ಫ್ಯೂಕೊನ 'ರಾಜಕೀಯ ಅಧಿಕಾರ ಕೇಂದ್ರಗಳು ರೂಪುಗೊಳ್ಳುವ ಕ್ರಮ' ಎಂಬ ಬನ್ನಾಡಿಯವರ ಬಾವುಟ. ಫ್ಯೂಕೊನಿಗೆ ಪ್ರತಿಯೊಂದು 'ಸಂಸ್ಥೆ'ಯೂ ಅಧಿಕಾರಸ್ಥವೇ-ಅದರಲ್ಲಿ ಎಡ-ಬಲ ಎಂಬುದಿಲ್ಲ, 'ಬರಹ ಮತ್ತು ಬರಹಗಾರ' ಎಂಬ ಪರಿಕಲ್ಪನೆಯೇ ಆಧುನಿಕ ಯುಗದಲ್ಲಿ ಹೇಗೆ ಅಧಿಕಾರಸ್ಥ ಪರಿಕಲ್ಪನೆಯಾಗಬಲ್ಲುದು ಎಂದು ವಿವೇಚಿಸುವ 'ವಾಟ್ ಇಸ್ ಯೂನ್ ಆಥರ್' ಎಂಬ ಬರಹವಿದೆ- ಇಲ್ಲೂ ಆತನಿಗೆ ಎಡ-ಬಲ ಬರಹಗಾರರೆಂಬ ವ್ಯತ್ಯಾಸವಿಲ್ಲ. 'ಸಕಲ ಅಧಿಕಾರ ವಿರೋಧಿ' (ಅನಾರ್ಕಿಸ್ಟ್) ಚಿಂತಕ ನೋಮ್ ಚೋಮ್‌ಸ್ಕಿ ಜೊತೆಗೆ ಫ್ಯೂಕೊ ನಡೆಸಿದ ಪ್ರಖ್ಯಾತ ವಾಗ್ವಾದ ಒಂದಿದೆ. ಅದರಲ್ಲಿ ಚೋಮ್‌ಸ್ಕಿ ಮನುಷ್ಯನಲ್ಲಿ ಮೂಲಭೂತವಾದ ಕೆಲವು ಒಳ್ಳೆಯ ಗುಣಗಳಿವೆ; ಅದನ್ನು ಅಧಿಕಾರಸ್ಥರು ದಬ್ಬಾಳಿಕೆಯ ಸಂಸ್ಥೆಗಳ ಮೂಲಕ ನಾಶಮಾಡುತ್ತಾರೆ; ಮನುಷ್ಯರ ಮೂಲಭೂತ ಒಳ್ಳೆಯ ಗುಣಗಳನ್ನು ಅಧಿಕಾರ ವಿರೋಧಿ ಚಳವಳಿಯಾಗಿ ನಿರೂಪಿಸುವುದು ಸಾಧ್ಯವಾಗಬೇಕು ಎನ್ನುತ್ತಾನೆ. ಅದಕ್ಕೆ ಫ್ಯೂಕೊ, ಮನುಷ್ಯರು ಮೂಲಭೂತವಾಗಿ ಒಳ್ಳೆಯವರು ಎನ್ನುವುದು ನಿನ್ನ ಭ್ರಮೆ ಮಾತ್ರ; ಮನುಷ್ಯರು ಯಾವತ್ತೂ ಸಾಮಾಜಿಕ-ಹಾಗಾಗಿಯೇ ಸಾಂಸ್ಥಿಕ-ಜೀವಿಗಳು; ಸಾಂಸ್ಥೀಕರಣವೇ ಒಂದು ಅಧಿಕಾರಸ್ಥ ನಿರೂಪಣೆಯ ಕಾರ್ಯ; ಹಾಗಾಗಿ ನಿಮ್ಮ ಅನಾರ್ಕಿಸ್ಟ್ ರಾಜಕೀಯವೂ ಒಂದು ಅಧಿಕಾರಸ್ಥ ರಾಜಕೀಯ ಎಂಬ ಎಚ್ಚರವಿಟ್ಟುಕೊಂಡು ಮಾತನಾಡುವುದು ಒಳ್ಳೆಯದು ಎಂದು ವಾದಿಸುತ್ತಾನೆ. ಐಜೂರ್-ಲತಾರಾಗಲಿ, ಗೆಳೆಯ ಬನ್ನಾಡಿಯವರಾಗಲಿ, ನಾನಾಗಲಿ- ನಾವು 'ಅಧಿಕಾರಸ್ಥ'-'ಯಜಮಾನ' ರಾಜಕೀಯ-ಸಂಸ್ಥೆ-ಸಮಾಜ-ಸಂಸ್ಕೃತಿಗಳನ್ನು ವಿಮರ್ಶಿಸುವ ಉತ್ಸಾಹ ತೋರಿದಾಗ, ಉಡಾಫೆ ಮಾಡದೆ, ಬಹಳ ಪರಿಶ್ರಮದಿಂದ ವಿಮರ್ಶೆಯ ಪರಿಕಲ್ಪನೆಗಳನ್ನು ರೂಢಿಸಬೇಕಾಗುತ್ತದೆ. ಅದು ಜೀವಮಾನದ ಕಸುಬು. ಈಗ ಇದ್ದದ್ದು ನಾಳೆ ತನ್ನ ಸ್ವರೂಪ ಬದಲಾಯಿಸುವ ಚಾರಿತ್ರಿಕ ಕ್ರಮದಲ್ಲಿ ಯಾವುದು ಒಂದು ಕಾಲಕ್ಕೆ ಮುಗಿದುಹೋಗುವುದಿಲ್ಲ, ಆದರೆ ಬನ್ನಾಡಿಯವರ ಹತಾಶೆಯ ಪ್ರಕಾರ ಈಗ ಅಧಿಕಾರ ಪೂರ್ಣ ಸ್ವರೂಪದಲ್ಲಿ ಪ್ರಕಟವಾಗಿಬಿಟ್ಟಿದೆ; ಅದನ್ನು ಹಾಸಿಗೆಯ ಹತ್ತಿ ಬಡೆಯುವ ಹಾಗೆ ಬಡಿದು ಸಮಾ ಮಾಡಬೇಕು. ವಸಂತರ ಅಮರರ ಉತ್ಸಾಹ ಕಂಡು ನನಗೆ ಆಶ್ಚರ್ಯವಾಗುತ್ತಿದೆ; ಅವರು ಟಿ.ಪಿ.ಅಶೋಕರಂಥ ವಿಮರ್ಶಕರು ಕವಿ ಶಿವಪ್ರಕಾಶರನ್ನು ಕಡೆಗಣಿಸಿದ್ದಾರೆ ಎಂದು ಆರೋಪಿಸುವ ಹೊತ್ತಿನಲ್ಲೇ ಅಶೋಕ್ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಬರೆಯುತ್ತಿರುವ 'ಅಂತರ್ಯ' ಎಂಬ ಅಂಕಣದಲ್ಲಿ ಶಿವಪ್ರಕಾಶರ 'ಸಮಗಾರ ಭೀಮವ್ವ' ಹೇಗೆ ಕನ್ನಡದ ಅತ್ಯುತ್ತಮ ಪದ್ಯಗಳಲ್ಲಿ ಒಂದು ಎಂದು ನಿರೂಪಿಸಿದ್ದಾರೆ. 'ದೇಶಕಾಲ' ಪತ್ರಿಕೆಯನ್ನು ಖಂಡಿತ ವಿಮರ್ಶೆಗೆ ಗುರಿಪಡಿಸಬಹುದು. ಅದು ಒಂದು ಅಧಿಕಾರಸ್ಥ ಸಂಸ್ಥೆ ಎಂದು ಸಾಬೀತುಮಾಡಲು ಹೊರಡಬಹುದು; ಅದಕ್ಕೆ ಶ್ರದ್ಧೆ ಶ್ರಮ, ವಸ್ತುನಿಷ್ಠತೆ ಮತ್ತು ಸಾವಧಾನ ಅಗತ್ಯ. 'ಶಾಕ್ ಟ್ರೀಟ್ಮೆಂಟ್'ನ ನವೀನ ಮಾರ್ಗ ಒಂದಿದೆ ಎಂದು ಐಜೂರ್-ಲತಾ ಹೇಳುತ್ತಿದ್ದಾರೆ; ಬನ್ನಾಡಿ ಅನುಮೋದಿಸುತ್ತಿದ್ದಾರೆ. ಅದು ನನಗೆ ಸಮ್ಮತವಲ್ಲ ಎಂದು ಮಾತ್ರ ನಾನು ಹೇಳುತ್ತಿದ್ದೇನೆ.

• ಕೆ. ಫಣಿರಾಜ್

ಸಾಮಾಜಿಕ ಬಹಿಷ್ಕಾರ ಪದ್ಧತಿಯನ್ನು ಸಾಹಿತ್ಯಕ್ಕೆ ವಿಸ್ತರಿಸದಿರಿ

'ಹುಟ್ಟು ಪೋಕರಿ, ಕೇಳು, ಬಿಟ್ಟುಬಿಡು ದೊಡ್ಡಸ್ತಿಕೆಯ
ಕೋಳಿ ಕತ್ತಿನ ಸೊಕ್ಕು, ಅಕ್ಷರದ ದೌಲತ್ತ'

-ಪಿ.ಲಂಕೇಶ್ 'ನಮ್ಮ ಕಡೆಯ ಜನ' ಎಂಬ ಕವಿತೆಯಲ್ಲಿ ಹೇಳಿರುವ ಈ ಕವಿಮಾತು 'ದೇಶಕಾಲ ವಿಶೇಷ' ರೂಪಿಸುವ ಮೂಲಕ ಅಕ್ಷರದ ದೌಲತ್ತು ಪ್ರದರ್ಶಿಸಿರುವ ವಿವೇಕ ಶಾನಭಾಗ ಹಾಗೂ ಜಯಂತ ಕಾಯ್ಕಿಣಿಯವರ 'ಬೌದ್ಧಿಕ ಸೊಕ್ಕು' ಮತ್ತು 'ಸಾಹಿತ್ಯದ ದೊಡ್ಡಸ್ತಿಕೆ'ಗೆ ಚೆನ್ನಾಗಿ ಅನ್ವಯವಾಗುತ್ತದೆ.

ಮಂಜುನಾಥ್ ಹಾಗೂ ಐಜೂರ್ ಅವರು 'ದೇಶ'ವಿದೇನಹಾ, 'ಕಾಲ'ವಿದೇನಹಾ! ಎಂಬ ತಮ್ಮ ಲೇಖನದಲ್ಲಿ ವೈಚಾರಿಕ ವಾಗ್ವಾದಕ್ಕೆ ತಕ್ಕುದಾದ ಭಾಷೆಯನ್ನು ಬಳಸದೆ, ಮರ್ಯಾದೆಯ ಎಲ್ಲೆಯನ್ನು ಮೀರಿದ ವಿಕೃತ ವಿಶ್ಲೇಷಣೆಯಿಂದ ಆಘಾತಗೊಂಡಿರುವ ಕೆ.ಫಣಿರಾಜ್ "ಈ ಇಬ್ಬರು ನ್ಯಾಯಾಧೀಶರ ಮಾರ್ಗದರ್ಶನದ ಅವಶ್ಯಕತೆ ಇಲ್ಲ" ಎಂದು ತೀರ್ಪು ಘೋಷಿಸುವ ಮೂಲಕ ತಾನೂ ನ್ಯಾಯಾಧೀಶನ ಸ್ಥಾನವನ್ನು ಅಲಂಕರಿಸಿ 'ವಾಗ್ವಾದ ಭಂಜಕರು' ಎಂದು ತೀರ್ಪು ನೀಡಿದ್ದಾರೆ.

ಇದರ ಜೊತೆಗೆ 'ದೇಶಕಾಲ ವಿಶೇಷ' ಸಂಪಾದಕರು ಶ್ರೇಷ್ಠತೆಯ ವ್ಯಸನವನ್ನು ಕೊಂಚ ಅಂಟಿಸಿಕೊಂಡಿರಬಹುದೇ? ಎಂಬ ಪ್ರಶ್ನಾತ್ಮಕ ಅನುಮಾನ ವ್ಯಕ್ತಪಡಿಸಿರುವ ನನ್ನ ಗುರುಗಳಾದ ಡಾ.ರಹಮತ್ ತರೀಕೆರೆಯವರೂ ಸಹ ಮಂಜುನಾಥ್ ಹಾಗೂ ಐಜೂರರನ್ನು 'ಶಿಕ್ಷೆ ಕೊಡುವ ಸ್ವಯಂಘೋಷಿತ ನ್ಯಾಯಾಧೀಶರ ಸ್ಥಾನದಲ್ಲಿ'ಯೇ ಕಂಡಿರುವುದರಿಂದ ಒಂದರ್ಥದಲ್ಲಿ ಕೆ. ಫಣಿರಾಜ್‌ರ ಮಾತುಗಳಿಗೆ ಅನುಮೋದನೆ ಪ್ರಾಪ್ತವಾಗಿದೆ.

ಡಾ.ರಹಮತ್ ತರೀಕೆರೆ ಮತ್ತು ಫಣಿರಾಜ್ ಅವರಿಗಿಂತ ಭಿನ್ನವಾಗಿ ಮತ್ತು ಅಷ್ಟೇ ಸೂಕ್ಷ್ಮವಾಗಿ ಆಲೋಚಿಸುವ ಪ್ರಗತಿಪರ ಚಳವಳಿಗಳ ಒಡನಾಡಿಯಾದ ಜಿ.ರಾಜಶೇಖರ್ ಅವರು 'ದೇಶಕಾಲ'ದ ಸಂಪಾದಕ ವಿವೇಕ ಶಾನಭಾಗ ಸ್ವತಃ ತಾನೇ ಹಾಕಿಕೊಂಡಿರುವ ಅಭಿರುಚಿ ಮತ್ತು ವಿವೇಚನೆಗಳ ಮಾನದಂಡ ಹೊರತುಪಡಿಸಿ ಆತ ತನ್ನ ಪತ್ರಿಕೆ ಬಗ್ಗೆ ಯಾರಿಗೂ ವಿವರಣೆ ನೀಡಬೇಕಾದ್ದಿಲ್ಲ, ಎಂದು ಹೇಳುವ ಮೂಲಕ 'ದೇಶಕಾಲ'ವನ್ನು ಒಂದು ಸೆಕ್ಟೇರಿಯನ್ ವಲಯಕ್ಕೆ ಸೇರಿದ ಏಕವ್ಯಕ್ತಿಯ ಖಾಸಗಿ ಆಸ್ತಿಯಾಗಿ ಓದುಗರು ಪರಿಗಣಿಸಬೇಕು; ಅದನ್ನು ಯಾರೂ ಪ್ರಶ್ನಿಸದೆ 'ಹಾಗೆ ಸುಮ್ಮನೆ' ಒಪ್ಪಿಕೊಂಡುಬಿಡಬೇಕೆಂದು ಸೂಚಿಸುತ್ತಿದ್ದಾರೆಯೇ? ಮಂಜುನಾಥ್ ಮತ್ತು ಐಜೂರ್ ಎತ್ತಿದ ಪ್ರಶ್ನೆಗಳು 'ಇದೇನಹಾ!' ಎಂಬ ಒರಟು ಪರಿಭಾಷೆಯಲ್ಲಿವೆ ಎಂಬ ಒಂದೇ ಕಾರಣಕ್ಕೆ ಈ ರೀತಿ ತಳ್ಳಿಹಾಕುತ್ತಿರುವುದು ಆಶ್ಚರ್ಯ ಮೂಡಿಸಿದೆ.

ದೇಶಕಾಲ ಚರ್ಚೆ

ಮಂಜುನಾಥ ಮತ್ತು ಐಜೂರ್ ಅವರು ತಮ್ಮ ಲೇಖನದಲ್ಲಿ ಬಳಸಿದ್ದಾರೆನ್ನುವ ರೂಕ್ಷ ಪರಿಭಾಷೆಗೆ ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ದೊಡ್ಡ ಪರಂಪರೆಯೇ ಇದೆ. ಕರ್ನಾಟಕದ ಅನೇಕ ಜನಪರ ಚಳವಳಿಗಳೊಂದಿಗೆ ತಮ್ಮ ದನಿಗೂಡಿಸುತ್ತಲೇ ಅತ್ಯಂತ ಪ್ರಾಮಾಣಿಕವಾಗಿ ಹೆಜ್ಜೆ ಹಾಕುತ್ತಿರುವ ಡಾ.ರಹಮತ್ ತರೀಕೆರೆ, ಧಾರ್ಮಿಕ ಸಾಮ್ರಾಜ್ಯಶಾಹಿಯನ್ನು ವಿರೋಧಿಸಿ ನಡೆಸಿದ ದೇಸಿ ಸಾಂಸ್ಕೃತಿಕ ದಂಗೆಗಳ ಅನೇಕ ಧಾರೆಗಳನ್ನು ಶೋಧಿಸಿದ ಸಂಶೋಧಕರ ಪೈಕಿ ಪ್ರಮುಖರಾದವರು. 'ಪಾವಿತ್ರ್ಯ ನಾಶವೂ ಪ್ರತಿಸಂಸ್ಕೃತಿ ನಿರ್ಮಾಣವೂ' ಎಂಬ ಅವರ ಮಹತ್ವದ ಲೇಖನದಲ್ಲಿ ಆಸಾದಿಗಳು ತಮ್ಮ ಸೃಜನಶೀಲ ಅಶ್ಲೀಲ ಬೈಗುಳಗಳ ಮೂಲಕ ಶಿಷ್ಟ ಜನವರ್ಗಗಳ ಧಾರ್ಮಿಕ ಯಾಜಮಾನ್ಯವನ್ನು ಪ್ರತಿರೋಧಿಸುತ್ತಾ ತಮ್ಮದೇ ಪ್ರತಿಸಂಸ್ಕೃತಿಯನ್ನು ಜೀವಂತವಾಗಿ ಕಾಪಾಡಿಕೊಂಡು ಬರುತ್ತಿರುವ ಬಗ್ಗೆ ಮೆಚ್ಚುಗೆಯಿಂದ ಮಾತನಾಡಿದ್ದಾರೆ. ಆಸಾದಿಗಳ ಹಾಡುಗಳು ಸಾಂಸ್ಕೃತಿಕ ವಿಮರ್ಶೆಯ ಹೊಸ ಪ್ರಸ್ತಾಪವನ್ನೇ ರೂಪಿಸಿವೆ.

ದಾಸನೂರು ಗುರುನಂಜಾರಾಧ್ಯ ಎಂಬ ಕವಿ 'ಭಾರತಮಾತೆ ಎಂಬ ಸೂಳೆ' ಎಂಬ ಕವಿತೆಯನ್ನು ಬರೆದಿದ್ದರೆ, ಪಿ.ಲಂಕೇಶರು 'ದೇಶಭಕ್ತ ಸೂಳೆಮಗನ ಗದ್ಯ ಗೀತೆ' ಎಂಬ ಕವಿತೆಯನ್ನು ಬರೆಯುವ ಮೂಲಕ ನಾಗರಿಕ ಸಂಸ್ಕೃತ ಶಿಷ್ಟಭಾಷಿಕರ ಗರ್ವಕ್ಕೆ ಪೆಟ್ಟು ನೀಡಿದ್ದಾರೆ. ಕವಿ ಸಾಹಿತಿ ವಿಮರ್ಶಕರಾದವರು ಅಕ್ಷರ ಕಲಿತ ಮಾತ್ರಕ್ಕೆ ನಾಗರಿಕ ಶಿಷ್ಟ ಸಮಾಜದ ಪರಿಭಾಷೆಯನ್ನು ರೂಢಿಸಿಕೊಂಡು ತಾವು ಹೀರಿ ಬೆಳೆದ ಪರಿಶಿಷ್ಟ ದೇಸಿ ಪರಿಭಾಷೆಯನ್ನು ನೀಗಿಸಿಕೊಳ್ಳಬೇಕೆಂಬ ಕಟ್ಟಳೆ ಎಲ್ಲಿಯೂ ಇಲ್ಲ.

ಚಾರ್ವಾಕ ಲೋಕಾಯತರ ಕಾಲದಿಂದ ಹಿಡಿದು ಇವತ್ತಿನ ಸಂದರ್ಭದವರೆಗೆ ಶಿಷ್ಟ ಜನರಿಗೆ ಆಘಾತ ಉಂಟುಮಾಡುವ ರೀತಿಯ ಅನೇಕ ಬೌದ್ಧಿಕ ವಾಗ್ವಾದಗಳು ನಮ್ಮ ಸಾಂಸ್ಕೃತಿಕ ಚರಿತ್ರೆಯ ಪುಟಗಳಲ್ಲಿ ಇಡುಕಿರಿದಿವೆ. ಇಂತಹ ಬಂಡುಕೋರ ವಾಗ್ವಾದ ಸಂಕಥನದ ಧಾರೆಗೆ 'ದೇಶ'ವಿದೇನಹಾ!, 'ಕಾಲ'ವಿದೇನಹಾ! ಲೇಖನ ಒಂದು ಹೊಸ ಸೇರ್ಪಡೆಯಷ್ಟೇ.

ಕ್ಷಮಿಸಿ, ಇನ್ನು ಮುಂದೆ ಬರೆವಣಿಗೆಗೆ ತೊಡಗುವವರು ಇಂತಹ ದಂಗೆಕೋರರ ಮಾರ್ಗವನ್ನು ಅನುಸರಿಸಿಯೇ ಬರೆಯಬೇಕೆಂದು ನಾನು ಬಯಸುವುದಿಲ್ಲ, ಈ ಮಾರ್ಗವೇ ಸರಿ ಎಂದು ಶಿಫಾರಸ್ಸಿನ ಸರ್ಟಿಫಿಕೇಟನ್ನೂ ನಾನು ಬರೆಯುವುದಿಲ್ಲ. ಆದರೆ ಈ ಮಾತಿನ ಮೂಲಕ ನಾನು ನಿಮ್ಮೊಡನೆ ಹಂಚಿಕೊಳ್ಳಲು ಇಚ್ಛಿಸುವ ಸಂಗತಿ ಏನೆಂದರೆ, ಆಳುವ ವರ್ಗಗಳ ಸ್ಥಾಪಿತ ಮೌಲ್ಯಗಳು ವಿಜೃಂಭಿಸತೊಡಗಿ ಏಕಾಧಿಪತ್ಯ ಸ್ಥಾಪಿಸಲು ಯತ್ನಿಸಿದಾಗ, ಕವಿ ಸಾಹಿತಿಗಳು ಎಚ್ಚರ ತಪ್ಪಿದಾಗ, ಸಂಸ್ಕೃತಿ-ಸಾಹಿತ್ಯ ವಿಮರ್ಶಕರ ಮನಸ್ಸುಗಳಿಗೆ ಮಂಕು ಕವಿದು ಅವರ ಆಯುಧಗಳು ಮೊಂಡಾದಾಗ, ಇಡೀ ಸಮಾಜ ಜಡ್ಡುಗಟ್ಟಿದಾಗ ದೇಸಿ ದನಿಗಳು ಜೀವಗೊಂಡು ಮಹತ್ವದ ಸಾಂಸ್ಕೃತಿಕ ಚಲನೆ ಮತ್ತು ಚಿಂತನೆಗಳಿಗೆ ದಾರಿ ಮಾಡಿಕೊಡುತ್ತವೆ. ಆಗ ಮಂಜುನಾಥ್ ಮತ್ತು ಐಜೂರ್‌ರಂತಹ ದೇಸಿ ದನಿಗಳು ಸುಸಂಸ್ಕೃತ ಶಿಷ್ಟ ನಾಗರಿಕ ಜೀವಿಗಳಿಗೆ ಕರ್ಕಶವಾಗಿ ಕೇಳಿಸುತ್ತವೆ; ವಿಕೃತವಾಗಿ ಕಾಣಿಸುತ್ತವೆ. ಡಾ.ರಹಮತ್ ತರೀಕೆರೆ ಹೇಳುವಂತೆ 'ಕುರುಡು ಜಾತಿ ಪೂರ್ವಾಗ್ರಹದ ಹುದಲದಲ್ಲಿ ಸಿಕ್ಕಿಕೊಳ್ಳದ ರೀತಿ' ಘನತರ ವೈಚಾರಿಕ ವಾಗ್ವಾದದ ಪರಿಭಾಷೆಯನ್ನು ರೂಪಿಸಿಕೊಳ್ಳಬೇಕೆಂಬ ವಿವೇಕ ಎಲ್ಲರಿಗೂ ಮಾದರಿಯಾಗುವಂತಹದ್ದು ನಿಜ. ಈ ನಡುವೆ 'ಇದೇನಹಾ!' ಮಾದರಿಯನ್ನೂ ಸಹ ಉಪೇಕ್ಷಿಸಲಾಗದು ಎಂಬುದನ್ನು ಮನಗಾಣೋಣ.

ಈ ಕಾಲದ 'ಬ್ರಾಹ್ಮಣ ಚೈತನ್ಯ' ಹಾಗು 'ಬ್ರಾಹ್ಮಣ ಉತ್ಸಾಹ'ಗಳನ್ನು ಮಾತ್ರ ಮುತುವರ್ಜಿಯಿಂದ ಹಿಡಿದಿಟ್ಟಿರುವ 'ದೇಶಕಾಲ ವಿಶೇಷ'ದಲ್ಲಿ ಇತರೆ ಸಾಮಾಜಿಕ ವಲಯಗಳ ಸಾಹಿತ್ಯ-ಕಲಾ ಚೈತನ್ಯಗಳನ್ನು ಕ್ಷೀಣವಾಗಿ, ಸಪ್ಪೆಯಾಗಿ, ಪೇಲವವಾಗಿ ದಾಖಲಿಸಿ ಅಂಚಿಗೆ ಸರಿಸಲಾಗಿದೆ. 'ದೇಶಕಾಲ ವಿಶೇಷ'ದಲ್ಲಿರುವ ಎಪ್ಪತ್ತು ಜನರ ಪೈಕಿ ಹೆಚ್ಚೂಕಮ್ಮಿ ಐವತ್ತು ಜನ ಬ್ರಾಹ್ಮಣ ಸಾಹಿತಿ-ಕಲಾವಿದರಿಗೆ ಅಗ್ರಪಟ್ಟ ದೊರಕಿರುವ ಪವಾಡ ಸಂಭವಿಸಿರುವುದು ಹೇಗೆ ಸಾಧ್ಯ? ಇಂತಹ ಜಾತಿ ಜಾಯಮಾನವನ್ನು ಟೀಕಿಸುವುದು ತಪ್ಪೇ?

ಹಿಂದೂಧರ್ಮ ಮತ್ತು ಗಾಂಧೀಜಿಯವರನ್ನು ಟೀಕಿಸಿದರೆಂಬ ಕಾರಣಕ್ಕಾಗಿಯೇ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಇದೇ ಶಿಷ್ಟ ಸಾಮಾಜಿಕ ವರ್ಗದ ಜನ ಹಂಗಿಸಿ ಅವಮಾನಗಳಿಗೆ ಗುರಿಪಡಿಸಿದ್ದರು. ಆದರೆ ಅಂಬೇಡ್ಕರ್‌ರಂತಹ ಅಪ್ರತಿಮ ಟೀಕಾಕಾರ ಎದುರಿಗಿದ್ದುದರಿಂದಲೇ ಗಾಂಧೀಜಿಯವರ ಪ್ರತಿಭೆ ಇನ್ನಷ್ಟು ಹೊಳಪಿನಿಂದ ಕಂಗೊಳಿಸಲು ಸಾಧ್ಯವಾಯಿತು. ದನಿಗಳು ಎಷ್ಟೇ ಕರ್ಕಶವಾಗಿ ಕೇಳಿಬರಲಿ, ಅವುಗಳಲ್ಲಿರುವ ನೋವಿಗೆ ಸ್ಪಂದಿಸುವಂತಾಗಬೇಕೇ ಹೊರತು ದನಿ ಎತ್ತುವ ಕೊರಳನ್ನೇ ಹಿಸುಕಿಬಿಡುವುದು ಮಾನವೀಯತೆಯ ಲಕ್ಷಣವಲ್ಲ. ನಮ್ಮ ನಡುವೆ ಭಿನ್ನ ದನಿಗಳಾಗಿ ಈಗ ಕೇಳಿಸುತ್ತಿರುವ ಮಂಜುನಾಥ್ ಮತ್ತು ಐಜೂರ್ ಅವರನ್ನು ಬೆಂಬಲಿಸಿ ಪ್ರೋತ್ಸಾಹಿಸಬೇಕಾದುದು ನಮ್ಮ ಜವಾಬ್ದಾರಿಯಾಗಬೇಕು. 'ದೇಶ' ಮತ್ತು 'ಕಾಲ'ದ ಆರೋಗ್ಯಕ್ಕೆ ಅಗತ್ಯವಾದ ಒಂದಿಷ್ಟು ಕಹಿ ಕಷಾಯ ಈ ದನಿಗಳಲ್ಲಿದೆ.

ಕವಿ ಡಾ.ಸಿದ್ದಲಿಂಗಯ್ಯನವರು 'ಹೊಲೆಮಾದಿಗರ ಹಾಡು' ಸಂಕಲನದಲ್ಲಿ 'ಇಕ್ಲರ್ಾ ವದಿಲರ್ಾ ಈ ನನ್ಮಕ್ಕಳ ಚಮ್ಡ ಎಬ್ಬುಲರ್ಾ" ಎಂದು ಶತಮಾನಗಳ ಶೋಷಣೆಯ ಸಿಟ್ಟನ್ನು ಕವಿತೆಯ ಮೂಲಕ ಹೊರಹಾಕಿದಾಗ 'ಕನ್ನಡ ಸಾರಸ್ವತಲೋಕ ಈ ರೀತಿಯ ಹೊಲಸು ಶಬ್ದಗಳನ್ನು ಕೇಳಿಸಿಕೊಳ್ಳಬೇಕಾಯಿತೇ ರಾಮಾ... ಗೋವಿಂದ... ವೆಂಕಟರಮಣಾ...' ಎಂದು ಇದೇ ಶಿಷ್ಟ ಸಾಮಾಜಿಕ ವರ್ಗದ ಜನ ಶ್ರೇಷ್ಠತೆಯ ವ್ಯಸನದಿಂದ ಹಲುಬುತ್ತಾ ಸಿದ್ದಲಿಂಗಯ್ಯನವರ ದನಿಯನ್ನು ಅಡಗಿಸಲು ಯತ್ನಿಸಿದ್ದರು. ಆದರೆ ದಲಿತ ಸಂಘರ್ಷ ಸಮಿತಿಯು ಅವರ ಬೆಂಬಲಕ್ಕೆ ನಿಂತು, ಅದು ತುಂಬಿದ ಸ್ವಾಭಿಮಾನ ಮತ್ತು ಕೆಚ್ಚಿನಿಂದಾಗಿ ಅಲಕ್ಷಿತ ಸಮುದಾಯಗಳಿಂದ ಅನೇಕ ಹೊಸದನಿಗಳು ಮೂಡಿಬಂದು ಕನ್ನಡದ ಸಾಹಿತ್ಯ ಕ್ಷಿತಿಜ ಮತ್ತಷ್ಟು ವಿಸ್ತರಣೆಯಾಯಿತು. ಸಿದ್ಧಲಿಂಗಯ್ಯನವರು ನೀಡಿದ ಕಹಿ ಕಷಾಯವನ್ನು ಅರಗಿಸಿಕೊಳ್ಳದೇ ಹೋಗಿದ್ದಿದ್ದರೆ ಕನ್ನಡ ಸಾಹಿತ್ಯ ಈ ಪರಿಯಾಗಿ ಅಗ್ರಹಾರಗಳನ್ನು ಬಿಟ್ಟು ಹೊರಬರಲಾಗುತ್ತಿರಲಿಲ್ಲ.

'ದೇಶ ಕಾಲ ವಿಶೇಷ' ಕುರಿತ ಚರ್ಚೆಯ ಇವತ್ತಿನ ಸಂದರ್ಭದಲ್ಲೂ ಅಷ್ಟೆ. ಆರೋಗ್ಯಕ್ಕೆ ಅವಶ್ಯಕವಾಗಿರುವ 'ಇದೇನಹಾ!' ಮತ್ತು ಅಂತಹ ಯಾವುದೇ ಕಷಾಯವನ್ನು ಎಷ್ಟೇ ಕಹಿಯಾಗಿದ್ದರೂ ಸೇವಿಸಬೇಕು. ಅದು ಬಿಟ್ಟು ಅಗ್ರಹಾರದ ಸಕ್ಕರೆ ಪಾನಕವೇ ಹಿತವೆಂದು ಭ್ರಮಿಸುವ ಫಣಿರಾಜ್ "ಈ ಇಬ್ಬರು ನ್ಯಾಯಾಧೀಶರ ಮಾರ್ಗದರ್ಶನದ ಅವಶ್ಯಕತೆ ಇಲ್ಲ" ಎಂದು ನ್ಯಾಯಾಧೀಶರಂತೆ ತೀರ್ಪು ಘೋಷಿಸುವ ಮೂಲಕ ಸಾಮಾಜಿಕ ಬಹಿಷ್ಕಾರ ಹಾಕುವ ಅನಿಷ್ಟ ಪದ್ಧತಿಯನ್ನು ಸಾಹಿತ್ಯ ಕ್ಷೇತ್ರಕ್ಕೂ ವಿಸ್ತರಿಸುತ್ತಾರಷ್ಟೇ.

• ವಡ್ಡಗೆರೆ ನಾಗರಾಜಯ್ಯ, ಬೆಂಗಳೂರು

ನಮಗೆ ಗೊತ್ತಿರುವುದು ಇಷ್ಟೇ ಶಿವಾ!

'ದೇಶಕಾಲ ವಿಶೇಷಾಂಕ'ದ ವಿವಾದದ ಹೊಗೆಯ ಬಗ್ಗೆ ನನ್ನ ಬಡಿಬಡಿ (ಒರಟಾದ) ಅನಿಸಿಕೆಗಳು...

1. ನಾನು ಐಜೂರ್ ಹಾಗೂ ಮಂಜುನಾಥ್ ಲತಾ ಅವರ ಪರವಾಗಿದ್ದೇನೆ (ಆದರೆ ಅವರ ಒರಟಾದ ಶಾಕಿಂಗ್ ಶೈಲಿ ಒಪ್ಪಿಲ್ಲ). ಈ ಸಾಹಿತ್ಯದ ವಾತಾವರಣದಲ್ಲಿ ಅಂತರ್ಗತವಾಗಿ ಪ್ರವಹಿಸುತ್ತಿರುವ ಈ ಬ್ರೇಮಿನ್ ನೀತಿಯನ್ನು ಒಡೆಯಬೇಕೆಂದರೆ ಈ ಮಟ್ಟದ ಟೀಕೆ ಟಿಪ್ಪಣಿ ಅಗತ್ಯ. ಇಲ್ಲದಿದ್ದರೆ ಈ hightech, All is well ಸಾಹಿತಿಗಳು ಈ ನಾಥರನ್ನು, ದೇಂದ್ರರನ್ನು, ನೆಲೆಗಳನ್ನು, ಪೈಗಳನ್ನು, ವಸ್ತಾರೆಗಳನ್ನು ಇತ್ಯಾದಿ.. ಇತ್ಯಾದಿಗಳನ್ನು ಕನ್ನಡ ಸಾಹಿತ್ಯದ ಮೇರು ಸಾಹಿತಿಗಳೆಂದು ಪ್ರತಿಷ್ಠಾಪಿಸುತ್ತಿದ್ದರು. ಅದನ್ನು ಆಗಗೊಡದೆ ಕನ್ನಡ ಸಾಹಿತ್ಯದಲ್ಲಿ ಆರೀಫ್ ರಾಜ, ಪೀರ್‌ಭಾಷಾ, ವೀರಣ್ಣ ಮಡಿವಾಳರ, ಐಜೂರ್, ವಿ.ಎಲ್.ಕಾರ್ಪೆಂಟರ್, ಸುಬ್ಬು ಹೊಲೆಯಾರ್ ಮುಂತಾದವರೂ ನಮ್ಮ ಸಾಹಿತ್ಯದ future ಎಂದು ನಾವು ಬಿಂಬಿಸಬೇಕಾಗಿದೆ.

ಇಲ್ಲದಿದ್ದರೆ ಕನ್ನಡ ಸಾಹಿತ್ಯದ ಹಾಗೂ ನಮ್ಮೆಲ್ಲರ ಸ್ಥಿತಿ ಓಂ ನಮಃ ಶಿವಾಯ....

2. ಜಿ.ರಾಜಶೇಖರ್ ಅವರ ಬರಹ ನಿಜಕ್ಕೂ ಶಾಕ್! ಜಿ.ಆರ್. ಇಷ್ಟು ಅಸೂಕ್ಷ್ಮವಾಗಿ ಬರೆದಿದ್ದು ಬಲು ದೊಡ್ಡ ಶಾಕ್!!
3. ಕೇವಲ ಭಾವನಾತ್ಮಕವಾಗಿ ಪ್ರತಿಕ್ರಿಯಿಸಿರುವ ಕೆ.ಫಣಿರಾಜ್‌ಗೆ ನಮ್ಮ ಪ್ರಶ್ನೆ-ಎಲ್ಲರೂ ಯಾವಾಗಲೂ ಅಂಟೋನಿಗ್ರೋಪಿ, ಸಾರ್ತೃ, ಸೈದ್, ಮಾರ್ಕ್ಸನನ್ನು Quote ಮಾಡಿ ವಾಗ್ವಾದ ಬರೆಯಬೇಕೆ?? ನಮಗೆ ಗೊತ್ತಿರುವುದು ಇಷ್ಟೇ ಶಿವಾ!!! (ದಯವಿಟ್ಟು ಬಂಡಾಯದ ದಿನಗಳನ್ನು ನೆನಪಿಸಿಕೊಳ್ಳಿ ಅಥವಾ ಬೂಸಾ ಚಳವಳಿಯನ್ನಾದರೂ)

• ಬಿ. ಶ್ರೀಪಾದ ಭಟ್, ಬೆಂಗಳೂರು

ಸಿಬಿಐಗೆ ಕೊಟ್ಟೇಟಿಗೆ ಎಡಿಯೂರಪ್ಪನೇ ಕಿಸಗೊಂಡು ಬಿಳ್ತನೆ!

ವಿಧಾನಸಭೆಯೊಳಗೆ ಸೇರಿಕೊಂಡವರು ಾಮಾರಿಗೆ ತಯಾರಾಗಿದ್ದರು ಎಂಬ ಸುದ್ದಿಯಿಂದ ಮಾವನಿಗೆ ಯಾವ ಅಚ್ಚರಿಯೂ ಆಗಲಿಲ್ಲ, ಇದೆಲ್ಲಾ ಮೂಲು ಎಂದುಕೊಂಡ. ಆದರೆ ಸೀರನಿಗೆ ಅಲ್ಲಿ ಕೆದಾಟ ನಡೆಯಲಿಲ್ಲ ಎಂದು ಬಹಳ ಬೇಸರವಾಗಿತ್ತು. ಅಂದ,

ಯ ಲು ಸೀ ಮೆ

ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

"ನೀನೇನೆ ಅನ್ನ ಅಂತದ್ದೊಂದು ನ್ಯಡಿಬೇಕಾಗಿತ್ತು" ಎಂದ.

"ಬುಟ್ಟಿದ್ರೆ ನ್ಯಡದೇ ನ್ಯಡಿಯದು ಕಣೊ. ಆ ಬಿಜೆಪಿ ದ ಗೆದ್ದು ಬಂದಿರೊ ಬಡ್ಡೆತ್ತವುಕೆ ವಿಧಾನಸಭೆನೂ ಕ್ಕಿಲ್ಲವಂತೆ. ಬುಟ್ಟಿದ್ರೆ ಕಾಂಗ್ರೆಸ್ಸಿನೋರಿಗೂ, ಬಸ್‌ನೋರಿಗೂ ಸೇದೆಬುಡೋರಂತೆ."

"ಅದೇ ಕಂಡ್ರ ನಾನೇಳಿದ್ದು. ಅಂತದ್ದೊಂದು ಹ್ವಡದಾಟ ಬೇಕಾಗಿತ್ತು, ಆಗ ಇರದು ತಮಾಸಿ."

"ತಮಾಸಿಯಲ್ಲ ಕಣೊ. ಅವುಮಾನಾಗದು. ಇಡೀ ದಲ್ಲೇ ನಮ್ಮ ಕರ್ನಾಟಕದ ವಿಧಾನಸಭೆ ವಳ್ಳೆ ಳಿಸಿಗಂಡು ಬಂದದಂತೆ. ಅಂತದ್ರಲ್ಲಿ ಹ್ವಡದಾಡಿದ್ರೆ ಯಾದಿ ನಮ್ಮದೆ ಹೋಯ್ತಿದ್ದುದು"

"ಬತ್ತ ಬತ್ತ ಇದಾನಸಭೆ ಪಂಚಾತಿ ಮೀಟಿಂಗಾಯ್ತಪ್ಪ" ಳು ಜುಮ್ಮಿ.

"ನಿಮ್ಮ ಪಂಚಾತಿಲಿ ಯಾವಾಗಾರ ಪಾಟಾಗ್ಯದೇನೆ?"

"ಅದ್ಯಾಕ್ವಡದಾಟಾದತ್ಲ? ನ್ಯರಮನೆ ಸುದ್ದಿಗೆ ಹ್ಯಗ್ಗಣ ಡಿದೊ ಅಂತ ಊರು ಸುದ್ದಿಗೆ ಯಾರು ವಡದಾಟ ಕ್ಯರೂ?" ಎಂದಳು ಜುಮ್ಮಿ.

"ಇದಾನಸಭೆವಳಗಡೆ ಜಗಳ್ಯಾಕತ್ತಿಗತ್ಲ?" ಎಂದ ಮಾವ.

"ಈ ಎಡೂರಪ್ಪ ಎಲ್ಲಿವರಿಗೂ ರೆಡ್ಡಿಗಳ ಜ್ವತೆ ಇರತನೊ ವರಿಗೂ ಇವನಿಗೆ ಕ್ಯಟ್ಟೆಸರು ತಪ್ಪಿದ್ದಲ್ಲ ಕಣಮಾವ."

"ಆ ನನಮಕ್ಕಳೇನು ಪಾಳ್ಯೆಗಾರ್ರೆ?"

"ಅಂಗೆ ಆಗ್ಯದೆ ಕಣಮಾವ. ಆ ಬಳ್ಳಾರಿಲಿ ಇಡೀ ರಿ ಯಂತ್ರ ಅವುರೇಳಿದಂಗೆ ನ್ಯಡಿತಾ ಅದಂತೆ. ಡಿಸಿಗಳು ಕೂಡ ರೆಡ್ಡಿಗಳ ಮನೆ ಮರಿದ್ದಂಗಿದ್ದರಂತೆ. ಆದ್ರಿಂದ ಅಲ್ಲಿ ನ್ಯಡಿತಾಯಿರೋ ಕಳ್ಳತನದ ಉಸ್ತುವಾರಿಯ ಈ ಅಧಿಕಾರಿಗಳು ಡಿಕತ್ತಯಿದ್ದರಂತೆ. ಅದ್ಯಲ್ಲ ವಿಧಾನಸಭೆಲಿ ಚರ್ಚೆಯಾಗಬೇಕು ಅಂತ ವಿರೋಧ ಪಕ್ಷದೋರು ಪಟ್ಟಿಡದದ್ದೇ ಬಂತು ನೋಡಪ್ಪ ಆ ರೆಡ್ಡಿ ಕಡಿಯೋರ್ಯಲ್ಲ ಮರಿನಾಯಿಗಳ ಹೇಲಿಗೆ ಬುಟ್ಟಂಗೆ ವಿರೋಧ ಪಕ್ಷದೋರ ಮ್ಯಾಲೆ ತೋಳೇರಿಸಿಗಂಡು ಬರದೇ?" ಎಂದ ಉಗ್ರಿ.

"ಅಲ್ಲಾ, ವಿಧಾನಸಭೆ ಅಂದಮ್ಯಾಲೆ ಅದು ಮಾತಿನ ಮನೆ. ಏನೇ ನ್ಯಡದ್ರೂ ಮಾತಿನ ಮುಖಾಂತ್ರ ಬಗೆಹರಿಸಿಕೋಬೇಕಪ್ಪ."

"ತಪ್ಪು ಮಾಡಿರೋ ನನಮಕ್ಳತ್ರ ಮಾತೆಲ್ಲಿದ್ದವು ಮಾವ. ತೋಳೆಮುಂದಲವೇ ಏನಂಗೆ ವಡಿಯಕ್ಕೆ ಬತ್ತರೆ. ಅವುರಿಗಿಂತ ಮದ್ಲು ಎಡೂರಪ್ಪನೆ ಕಾಲುಕ್ಯರದು ಗುಟುರಾಕಿದ. ಅದಿನ್ನೂ ತಪ್ಪಾಯ್ತು."

"ಆಗ್ಲೆ ಸಿದರಾಮಯ್ಯ ತೋಳು ತ್ವಡೆ ತಟ್ಟಿದ್ದು" ಎಂದ ಚಿಕ್ಕ.

"ನೋಡಪ್ಪ, ಸಿದರಾಮಯ್ಯ ತೊಡೆತಟ್ಟಿದ್ಮೆ ಚಿಕ್ಕಣ್ಣನಿಗೆ ಬಂದಿರೋ ಪೌರುಸವ" ಎಂದ ಉಗ್ರಿ.

"ಪೌರುಸಲ್ಲ, ನಾನೇ ವಿಧಾನಸೌಧದಲ್ಲಿ ಇದ್ರೆ ಆ ರೆಡಿ ನನಮಕ್ಕಳ ಯಕ್ಕತ್ತಿನ ಮ್ಯಾಲೆ ಮಿದ್ದು ಆಚೆಗಾಕ್ತಿದ್ದೆ" ಎಂದ ಚಿಕ್ಕ.

"ಏ, ದಳದೋರೇನು ಕಡಮೆ ಏನೊ? ಸುಮಾರು ಜನ ನಿನ್ನಂಗೆ ಅವುರೆ. ಅವರ ಹಿಡಿದಂಗೆ ಬುಟ್ರು ಸಾಕು, ರೆಡ್ಡಿಗಳ ಚೆಡ್ಡಿಯ ಕಿತ್ತಾಕಿ ಬುಡೋರು. ಏನು ಮಾಡ್ತಿ ಅವುಕಾಸಾಗಲಿಲ್ಲ."

"ನೀನೇನೇ ಅನ್ನ, ಎಡೂರಪ್ಪ ತಾಳ್ಮೆ ವಯಿಸಬೇಕಾಗಿತ್ತು."

"ನಿಜ ಕಣಮಾವ. ಅವುನಿನ್ನು ತಾನು ವಿರೋಧ ಪಕ್ಷದಲ್ಲಿದ್ದಿನಿ ಅಂತ್ಲೆ ತಿಳಕಂಡು ಮಾತಾಡ್ತನೆ. ಯಾವಾಗ ನಾನು ಮುಖ್ಯಮಂತ್ರಿ ಅಂತ ಗೊತ್ತಾಯ್ತದೊ ಆಗ ಸಮಾಧಾನವಾಗಿ ಮಾತಾಡಕ್ಕೋಗಿ ಹಲುಬುಟ್ಟು ಅಸಂಬದ್ಧವಾಗಿ ಕಾಣ್ತನೆ. ಸರಿ ವಿಧಾನಸೌಧದಲ್ಲಿ ಅಂಗಾರಾಡಿದ್ನೇನಪ್ಪ, ತಿರಗ ಹೋಗಿ ಸಿದರಾಮಯ್ಯನ ಯಗಲಮ್ಯಾಲೆ ಕೈಹಾಕಿ ತಪ್ಪಾಯ್ತು ಬನ್ನಿ ಅಂತ ಕರಿಯಕ್ಕೋಗ್ಯವುನೆ. ಇದಕೇನೇಳ್ತೀ?"

"ನೋಡು ಮತ್ತೆ, ದ್ವಣ್ಣಲ್ವಡದು ಅದ್ಯಾತ್ರಲ್ಲೊ ಮಂತ್ರಿಸಿದ್ರು ಅನ್ನಂಗೆ ಅಂಗೂ ಮಾಡಕ್ಕೋಗಿದ್ನೆ" ಎಂದ ಸೀರ.

"ಅಂತೂ ರೆಡ್ಡಿಗಳ ಜಗಳದಿಂದ ಸಿದರಾಮಯ್ಯ ದ್ಯಾವೇಗೌಡ ಒಂದಾದ್ರು ದ್ವಡಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಇದೇನ್ನ ಹಿಂಗಂತೀ?"

"ನಿಜವಾಗ್ಲು ದ್ವಡಪ್ಪ, ನಿಮ್ಮ ದ್ಯಾವೇಗೌಡ್ರು ವಿಧಾನಸಭೆಗೆ ಹೋಗಿ ಸಿದರಾಮಯ್ಯನ ಕೈಕುಲುಕಿ ಮಾತಾಡಿಸಿದ್ದೂ ಅಲ್ದೆ ಜ್ವತೆಲಿ ಕುಂತಿದ್ದೂ ಬಂದವುನೆ. ಅಂತೂ ಗಣಿ ರೆಡ್ಡಿಗಳಿಂದ ಇದೊಂದು ಪ್ರಾಬ್ಲಂ ಸಾಲು ಆಯ್ತು."

"ದ್ಯಾವೇಗೌಡ ಅಂಗೆ ಯಾರಮ್ಯಾಲೂ ಮಚ್ಚರ ಮಡಗದಿಲ್ಲ ಕಂಡ್ಯ. ಯಲ್ಲಾನು ಮರತೋಗಿ ಮಾತಾಡುಸ್ತನೆ" ಎಂದ ಕಾಳಮಾವ.

"ಅಂದ್ರೆ ಈಗಿನ ನಡವಳಕೇಲಿ ಏನೂ ಡವುಟಿಲ್ಲ ಅಂತಿಯಾ?"

"ನೋಡೋ ವಾಟಿಸ್ಸೆ, ದ್ಯಾವೇಗೌಡ್ರ ರಾಜಕಾರಣ ಒಂದೊಂದು ಸತಿ ತ್ಯವುಕಂಡು ಅತ್ರ ಬತ್ತದೆ. ಆಗ ಉಸಾರಾಗಿರಬೇಕು" ಎಂದ ಉಗ್ರಿ.

"ನಿಜ ಕಣೊ. ಗೌಡ್ರು ಕನಕಪುರದ ಯಲಕ್ಷನ್ನಿಗೆ ನಿಂತಾಗ ಹೆಗಡೆ ಹಾಸಗೆ ಹಿಡದಿದ್ರು. ಇಬ್ಬರೂ ಮಾತಾಡೋ ಸ್ಥಿತಿಯೇ ಇರಲಿಲ್ಲ, ಆದ್ರು ಹೋಗಿ ಯಗಡೆ ಮಾತಾಡ್ಸಿ, ಫೋಟಾ ತಗಿಸಿಗಂಡು ಬಂದ್ರು. ಅದು ಪೇಪ್ರಲ್ಯಲ್ಲ ಬಂತು. ಯಗಡೆ ದಳದೋರು ಓಟು ಮಾಡಿದ್ರು. ಅಮ್ಯಾಲೇನಾಯ್ತು ಅಂತ ಯಲ್ಲಾರಿಗೂ ಗೊತ್ತು. ಇಂತವ್ಯಲ್ಲ ಇನ್ನಿಡೆಂಟು ಇರುವಾಗ ಗೌಡ್ರ ಉಸಾರಾಗಿ ಹ್ಯಾಂಡ್ಲು ಮಾಡಬೇಕು."

"ಅಲ್ಲಾ ಕಂಡ್ಯ, ಗೌಡ ಹಗೆ ಸಾದುಸ್ತನೆ ಅಂತೀರಿ, ಮ್ಯಾಲುಬಿದ್ದು ಮಾತಾಡುಸ್ತನೆ ಅಂತೀರಿ, ನಿಮ್ಮ ಲ್ಯಕ್ಕದಲ್ಲಿ ಯಂಗಿರಬೇಕು?" ಎಂದ ಕಾಳಮಾವ.

"ದ್ವಡಪ್ಪ, ಈ ಟೈಮಲ್ಲಿ ದ್ಯಾವೇಗೌಡ್ರು ಮಾಡಿದ್ದು ಸರಿ. ಅವುರಿಂಗೆ ಮಾಡಿದ್ರಿಂದ ದಳದ ಒಕ್ಕಲಿಗ್ರೂ, ಕಾಂಗ್ರೆಸ್ ಕುರುಬ್ರು ಎಷ್ಟು ಖುಷಿಯಾಗ್ಯವರೇ ಅಂತಿ. ರಾಜಕಾರಣದಲ್ಲಿ ಇಂತ ಥ್ರಿಲ್‌ಗಳೆಲ್ಲ ಇರಬೇಕು. ಬಿಜೆಪಿಲಿ ಬ್ರಾಂಬ್ರು ಲಿಂಗಾಯಿತ್ರು ಒಟ್ಟಾಗಿರುವಾಗ, ಈ ಕಡೆ ಕುರುಬ್ರು ಒಕ್ಕಲಿಗ್ರೂ ಒಂದಾದ್ರೆ ಯಾರೇನು ಮಾಡಕ್ಯಾಗದಿಲ್ಲ, ಆಗೊಂತರ ಜಾತಿ ಸಮರ ಚನ್ನಾಗೇ ನ್ಯಡಿತದೆ" ಎಂದ ವಾಟಿಸ್ಸೆ.

"ಲೇ ವಾಟಿಸ್ಸೆ, ನಿನಿಗೆ ಕುಡುದು ತಲ್ಕಿಕೆಟ್ಟೊಗ್ಯದೆ ಕಣತೆ. ಕರ್ನಾಟಕದ ರಾಜಕಾರಣ ಯಾವತ್ತೂ ನೀನೇಳೊ ಜಾತಿ ಲ್ಯಕ್ಕಾಚಾರದಲ್ಲಿ ನ್ಯಡದಿಲ್ಲ, ನ್ಯಡಿಯದೂ ಇಲ್ಲ, ಯಲ್ಲಾ ಜಾತಿಯೋರು ಯಲ್ಲಾ ಪಾರ್ಟಿಲೂ ಇರತರೆ ಗೊತ್ತೆ" ಎಂದ ಉಗ್ರಿ.

"ಇರಬವುದು ಕಣೊ ಉಗ್ರಿ. ಈಗಿನ ಸಿಚುಯೇಶನ್ನಲ್ಲಿ ಬ್ರಾಂಬ್ರುಲಿಂಗಾಯಿತ್ರ ಒಂದಾಗ್ಯವುರೆ ಅನ್ನದ ಒಪ್ಪಿಗತಿಯಾ?"

"ಆದ್ರು, ಲಿಂಗಾಯಿತ್ರಿಗೆ ಎಡೂರಪ್ಪನಂಥೋನು ಲೀಡ್ರಾಗಬಾರದಿತ್ತು ಕಣೊ. ನಿಜವಾಗ್ಲು ಆ ಜನಾಂಗದ ಒಂದು ಗತಿಗ್ಯಟ್ಟ ಸ್ಥಿತಿ ಅಂದ್ರೆ ಇದೆಯಾ. ಇವತ್ತಿಗೂ ಎಡೂರಪ್ಪ ರೆಡ್ಡಿಗಳ ವಜ ಮಾಡ್ಡಿ, ತಿರಗ ಪವರಿಗೆ ಬತ್ತನೆ."

"ಬತ್ತನೊ ಬುಡತನೊ ರೆಡ್ಡಿಗಳ ಮುಟ್ಟಿದೇಟಿಗೆ ಮುಖ್ಯಮಂತ್ರಿಗಿರಿ ಹೋಯ್ತದೆ ಕಣೊ. ಅದ್ಕೆ ಪಾಪ ಯಲ್ಲಾನು ಸಹಿಂಸಿಗಂಡು ಕುಂತವುನೆ."

"ಅಂಗರೆ ರೆಡ್ಡಿಗಳ ತಗುದ್ರೆ ಹೋಯ್ತನೆ ಅಂತಿಯಾ?" ಎಂದ ಕಾಳಮಾವ.



"ಊ ದ್ವಡಪ್ಪ. ಅದ್ಕೆ ಸಿಬಿಐಗೆ ಕೊಡದಂಗೆ ಸಥಾಯಿಸ್ತಾ ಅವುನೆ."

"ಸಿಬಿಐ ಅಂದ್ರೇನ್ಲ?"

"ಸಿಬಿಐ ಕಣಕ್ಕ ಅದು ಕೇಂದ್ರದ ತನಿಖಾ ಸಮುಸ್ಥೆ. ಅದರಲ್ಲಿರೊ ಅಧಿಕಾರಿಗಳು ಯಾರಿಗೂ ಕೇರ್ ಮಾಡದಿಲ್ಲ. ಒಂಥರಾ ಬುಲ್ಡೋಜರ್ ಇದ್ದಂಗೆ. ರೆಡ್ಡಿಗಳ ಮ್ಯಾಲೆ ದಾಳಿ ಮಾಡಿದ್ರು ಅಂದ್ರೆ ಯಲ್ಲಾನು ಜಾಲಾಡಿ ಅವುರೇನು ಅಂತ ಹಿಡದು ಕೊಡ್ತರೆ. ಆಗ ಅಕ್ರಮ ಗಣಿಗಾರಿಕೆ ಮಾಡೋರ್ಯಲ್ಲ ಸಿಕ್ಕಿಬೀಳ್ತರೆ."

"ಅಂಗರೆ ಕೊಡಕ್ಕೇನಾಗ್ಯದೆ ಎಡೂರಪ್ಪನಿಗೆ?"


"ಕೊಟ್ಟೇಟಿಗೆ ಕಿಸಗಂಡು ಬೀಳ್ತನೆ ದ್ವಡಪ್ಪ. ಅದ್ಕೆ ಇದ್ದೊಟ್ಟು ದಿನ ಇಂತ ಭಂಡತನದಲ್ಲೇ ಕಾಲಹಾಕನ ಅಂತ ಯಲ್ಲಾರ ಕೈಲೂ ಅನ್ನಬಾರದನ್ನಿಸಿಗಂಡು ಆಡಳತ ಮಾಡ್ತ ಅವುನೆ."

"ಆ ರೆಡ್ಡಿನನ ಮಕ್ಕಳು ಯಾಕಿಂತ ಬದುಕ ಬದುಕ್ತಾ ಅವುರೆ?"

"ಅವುರು ಇರದೆ ಅಂಗೆ ದ್ವಡಪ್ಪ, ಕೋಟ್ಯಾಧಿಪತಿಗಳು, ಪ್ಯಾಕ್ಟರಿ ಓನರ್‌ಗಳು, ಎಮ್ಮೆಲ್ಲೆ ಆಗಬಾರ್ದು, ಮಿನಿಷ್ಟ್ರು ಆಗಬಾರ್ದು ಅದು ಸಂವಿಧಾನದ ವಿರೋಧಿ ಕ್ಯಲಸ ಅಂದ್ರೆ ಅದ್ಯಾಕಾಗಬಾರ್ದು ಅಂತರೆ. ಕೆಲವು ತಲಿಕೆಟ್ಟ ಬಿಜೆಪಿಗಳು ಅವುರ್ಗೆ ಸಪೋರ್ಟು ಮಾಡ್ತರೆ."

"ರೆಡ್ಡಿಗಳ ಸಪೋರ್ಟು ಮಾಡೋರ್ಯಲ್ಲ ಬುದ್ದಿ ಮಾಂದ್ಯರು ಕಣೋ" ಎಂದ ಉಗ್ರಿ. ●

ಸೊಪ್ಪು, ಸೊಪ್ಪು, ಸೊಪ್ಪು



ವೈದ್ಯರು ತಮ್ಮ ರೋಗಿಗಳನ್ನು ವಸ್ತುಗಳೆಂದು ತಿಳಿದಿರುತ್ತಾರೆ. ತಾವು ಹೇಳಿದಂತೆ ಮಾಡಿ ಸೂಚಿಸಿದ್ದನ್ನು ನುಂಗಿ ಚುಚ್ಚಿದಾಗ ನೋವು ಅನುಭವಿಸಿದರೆ ರೋಗಿ ಆರೋಗ್ಯವಂತನಾಗಿ ಸುಖ ಪುರುಷನಾಗಿ ಭೂಮಿಯಲ್ಲೇ ಸ್ವರ್ಗ ಕಾಣುತ್ತಾನೆ ಎಂದು ನಂಬಿರುತ್ತಾರೆ. ನನ್ನ ಪರಿಚಯದ ಾಲ್ಕೈದು ಜನ ವೈದ್ಯರಲ್ಲಿ ಒಬ್ಬರು ತುಂಬ ಪ್ರೀತಿಯವರು. ನಾನು ಸಿಗರೇಟ್ ಬಿಟ್ಟುಬಿಡಬೇಕೆಂದು ವರ್ಷಗಳಿಂದ ಹೇಳಿ, ಜುಲುಮೆ ಮಾಡಿ, ಆರ್ಡರ್ ಮಾಡಿ, ಸಿಗರೇಟಿನ ಅಪಾಯದ ಮೇಲೆ ಪುಸ್ತಕ, ಕರಪತ್ರ ಕೊಟ್ಟು ನಿರಾಶರಾಗಿದ್ದರು. ಈಚೆಗೆ ನಾನು ಸುಮ್ಮನೇ ಯಾವ ಗದ್ದಲವೂ ಇಲ್ಲದೆ ಬಿಟ್ಟುಬಿಟ್ಟಿದ್ದೇನೆ ಎಂದು ಕೇಳಿ ಓಡಿಬಂದರು. ಅವರು ಸಂತೋಷ ವ್ಯಕ್ತಪಡಿಸುವಷ್ಟರಲ್ಲಿ ಹೇಳಿದೆ, "ಅದು ಸರಿ ಡಾಕ್ಟರೆ, ಸಿಗರೇಟ್ ಬೇಡಪ್ಪ, ನನ್ನ ಮಿತ್ರರೊಬ್ಬರು ಗಾಂಜಾ ತುಂಬ ಒಳ್ಳೇದು ಅಂತಾರೆ, ಟ್ರೈ ಮಾಡಿ ನೋಡ್ಲಾ?" ಅಂದೆ.

ಶಾಕ್ ಹೊಡೆದಂತೆ ಕೂತ ವೈದ್ಯರು, "ಬೇಕಾದ್ರೆ ಸಿಗರೇಟನ್ನೇ ಸೇದಿ. ಗಾಂಜಾ, ಕೊಕೇನ್, ಹೆರಾಯಿನ್ ತಂಟೆಗೆ ಹೋಗಬೇಡಿ. ನಿಮ್ಮನ್ನು ನುಂಗಿಹಾಕಿ ಬಿಡುತ್ತದೆ" ಅಂದರು ಡಾಕ್ಟರ್. ನಾನು ದೊಡ್ಡದಾಗಿ ನಕ್ಕು "ಹೆದರಬೇಡಿ, ನನಗೆ ಅವೆಲ್ಲ ಬೇಕಿಲ್ಲ. ಕಾಫಿ ಕುಡಿಯೋಣ" ಅಂದೆ. ಡಾಕ್ಟರ್ ಬಿಯರ್ ಕುಡಿಯುತ್ತಾರೆ. ಆಮೇಲೆ ಬಿಯರ್ ಹೀರುತ್ತಾ ಮಾತಾಡುತ್ತಾ ಕೂತರು.

"ಡಾಕ್ಟರೆ, ನನಗೊಬ್ಬ ಸ್ನೇಹಿತನಿದ್ದ, ಅವನಿಗೆ ಏನಾಯ್ತು ಗೊತ್ತಾ?" ಅಂದೆ.

"ಏನಾಯ್ತು?"


"ಅವನಿಗೆ ಸ್ವಲ್ಪ ಡಯಾಬಟಿಸ್ ಇತ್ತು, ಅದಕ್ಕೆ ಮಾತ್ರೆ ತಗೋತಿದ್ದ, ಎಲ್ಲ ಕಂಟ್ರೋಲಿನಲ್ಲಿತ್ತು, ಬಹಳ ದಿನದಿಂದ ರಕ್ತದ ಒತ್ತಡ ನೋಡಿರಲಿಲ್ಲ, ಡಾಕ್ಟರ್ ನೋಡಿದ್ರೆ ರಕ್ತದ ಸ್ವಲ್ಪ ಹೆಚ್ಚಿತ್ತು, ಅದಕ್ಕೆ ಮಾತ್ರೆ ಕೊಟ್ಟರು. ಬ್ಲಡ್ ಪ್ರೆಶರ್ ಕಮ್ಮಿ ಆಯ್ತು ಡಯಾಬಿಟಿಸ್ ಜಾಸ್ತಿ ಆಯ್ತು. ರೋಗಿಯನ್ನ ಕೂರಿಸಿಕೊಂಡು ಡಾಕ್ಟರ್ ದೊಡ್ಡ ಲೆಕ್ಚರ್ ಕೊಟ್ಟರು. ನೀವು ಮೊದಲು ಸಿಗರೇಟ್ ಸೇದೋದು ನಿಲ್ಸಿ. ಎಲೆಯಡಿಕೆಯ ತಂಟೆಗೆ ಹೋಗಬೇಡಿ. ಕುಡಿಯೋದು ತಪ್ಪು. ಆತ ಇದೆಲ್ಲ ಮಾಡಿದ. ಕುಡಿಯೋದು ಬಿಟ್ಟ, ಸಿಗರೇಟ್ ಬಿಟ್ಟ, ಎಲೆಯಡಿಕೆ ಬಿಟ್ಟ. ಇದ್ದಕ್ಕಿದ್ದಂತೆ ಸಿಹಿಮೂತ್ರ ರೋಗದ ಜೊತೆಗೆ ಗ್ಯಾಸ್ಟ್ರಿಕ್ ಕಾಯಿಲೆ ಶುರುವಾಯ್ತು. ಹೊಟ್ಟೆನೋವು, ಹೊಟ್ಟೆನೋವು. ಅದಕ್ಕೊಂದು ಮಾತ್ರೆ ಕೊಟ್ಟರು. ಆದ್ರೂ ಈ ಹೊಟ್ಟೆನೋವು ಹೋಗಲಿಲ್ಲ. ತಿಂದದ್ದೆಲ್ಲ ವಾಂತಿ, ಮಲಬದ್ಧತೆ, ಮತ್ತೆ ವೈದ್ಯರು ರೋಗಿಯ ಅಂಗಾಂಗಗಳನ್ನೆಲ್ಲ ಹಿಡಿದು ಹಿಚುಕಿ ಪರೀಕ್ಷಿಸಿ "ನೀವು ಸೊಪ್ಪು ತಿನ್ನಿ. ಬೇರೆ ಏನನ್ನೂ ತಿನ್ನಬೇಡಿ. ಸೊಪ್ಪು, ಸೊಪ್ಪು ಸೊಪ್ಪು!" ಅಂದರು. ಅವತ್ತಿನಿಂದ ರೋಗಿ ಸೊಪ್ಪು ತಿಂದೂತಿಂದೂ ಬೇಸರಪಟ್ಟುಕೊಂಡ. ಇದನ್ನೆಲ್ಲ ಕೇಳಿದ ನಾನು, "ಚಂದ್ರಪ್ಪ, ನೀನು ಬರೀ ಸೊಪ್ಪು ತಿಂದು ಬದುಕೋದಕ್ಕೆ ಹೋತ ಅಲ್ಲ ಮನುಷ್ಯ. ಇವತ್ತಿನಿಂದ ಆ ಡಾಕ್ಟರ್‌ನ ನೋಡಬೇಡ. ನಾನು ಹೇಳಿದ ಹಾಗೆ ಇರು" ಅಂದೆ. "ಹ್ಯಾಗೆ" ಎಂದು ಚಂದ್ರಪ್ಪ ತಿಂಗಳುಗಳಲ್ಲಿ ಮೊದಲಬಾರಿಗೆ ನಕ್ಕ. "ನೀನು ಮೊದಲು ಇದ್ದೆಯಲ್ಲ, ಹಾಗೆ" ಅಂದೆ. ಅವತ್ತಿನಿಂದ ಚಂದ್ರಪ್ಪ ಮುಂಚಿನ ಹಾಗೆ ಇದ್ದು ನಗುನಗುತ್ತಾ ಬೀಡಿ ಸೇದ್ಕೊಂಡು ವಾರಕ್ಕೊಮ್ಮೆ ಕೋಳಿ ತಿಂದ್ಕೊಂಡು ಗೆಳೆಯರು ಸಿಕ್ಕಾಗ ವಿಸ್ಕಿ ಹೀರ್‍ಕೊಂಡು ಲಹರಿ ಬಂದಾಗ ಹಾಡ್ಕೊಂಡು ಇದ್ದ...."

"ಈಗ ಇಲ್ವಾ? ಸತ್ತು ಹೋದನೆ?"

"ಇದ್ದಾನೆ. ಮತ್ತೆ ಡಾಕ್ಟರ್ ಹತ್ತಿರ ಹೋಗಿ ಸೊಪ್ಪು ತಿನ್ನೋಕೆ ಶುರುಮಾಡಿದ್ರಿಂದ ಈಗ ಆತ ಇಲ್ಲ ಅಂದೆ...."

ನಮ್ಮ ಡಾಕ್ಟರ್ ಬಿಯರ್ ಹೀರಿ ಎದ್ದರು, "ಮನುಷ್ಯನ ಆರೋಗ್ಯವೇ ತುಂಬ ಕಾಂಪ್ಲೆಕ್ಸ್" ಅಂದರು.


"ಮನುಷ್ಯನ ಸಂತೋಷ ಮತ್ತು ರೋಗಗಳ ಹಾಗೆ" ಅಂದೆ. ●



ಹಾಲಕ್ಕಿ ನುಡಿತೈತೆ ಕಂದ

ಕಷ್ಟ ಬರಲಿ. ಅದೇನು ಮನ್ಸನಿಗೆ ಬರ್ದೆ ಮರಕ್ಕೆ ಬಂದಾತ. ಆದರೆ ಇಂಥ ಕಷ್ಟ ಬರಬಾರದು. ಅವು ಬಂದ್ರೆ ಒಟ್ಕೊಟ್ಟಿಗೆ ಬಂದು ಆದಿಕತ್ತಾವಂತೆ. ಯಾವ ಹಾಳು ಮುಂಡೆ ಕಣ್ಣು ಬಿತ್ತೊ ಕಾಣೆ. ಪಾಪ ಆ ಕಂದನಿಗೆ. ಯಡ್ಯೂರಪ್ಪನ ಹೈದ, ಪಾರ್ಲಿಮೆಂಟ್ ಮೆಂಬ್ರು ಆಗವ್ನಲ್ಲಾ ಅವುನ್ಗೆ ಹೇರ್ಕಂಡವೆ. ಅವನಿಗೇನು ತಿಂದುಂಡು ಏಕ್ಕಾಣಾಗವ್ನೆ ಅನ್ನೋರೂ ಅವ್ರೆ. ಅವನ ಕಷ್ಟ ಏನೂಂತಾವ ಇವರೇನು ಕಂಡು ಕುಂತಿದ್ದಾರಾ. ಅದ್ಕೆ ಇರಾಕೆ ಒಂದು ಸೂರಿಗೂ ಗತಿಲ್ವಂತೆ. ಶಿಕಾರಿಪುರ, ಶಿವಮೊಗ್ಗ,

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ಬೆಂಗಳೂರು ಇಂಥ ಕಡೆಲ್ಲ ಬೇಕು ಬೇಕಾದಂಗೆ ಬಂಗ್ಲೆ ಅವಲ್ಲ ಆದ್ರಲ್ಲೇ ಒಂದರಲ್ಲಿ ಬದ್ಕಂಡರಾಯ್ತು ಅಂತಾರೆ. ಅವೆ ನಿಜ. ಅವು ಯಾರ್‍ಯಾರೋ ಹೆಸರ್‍ನಲ್ಲವೆ. ಮನ್ಸ ಅಂದಮ್ಯಾಕೆ ತನ್ನದು ಅಂತ ಒಂದು ನೆಲೆ ಬ್ಯಾಡವಾ? ಅದ್ಕೇ ಈ ಮಗ ಏನ್ಮಾಡ್ತು.... ಈ ತರಕೆ ಈ ತರ ನನಗೆ ನಿಲ್ಲಕೆ ನೆಲೆ ಇಲ್ದೆ ಬೀದೀಲಿ ನಿಂತ್ಕೊಳೋಹಂಗೆ ಆಗದೆ.... ಬೆಂಗಳೂರಲಿ ಒಂದು ಸೈಟ್ ಸ್ಯಾಂಕ್ಷನ್ ಮಾಡಿ ಪುಣ್ಯ ಕಟ್ಕಳಿ ಅಂತ ಮುಖ್ಯಮಂತ್ರಿನ ಅರ್ಜಿ ಮುಖೇನ ಕೇಳ್ಕಂತು. ಅವರೇನು ಮಾಡಿದ್ರು ಪಾರ್ಲಿಮೆಂಟ್ ಮೆಂಬ್ರಿಗೇ ಸೈಟಿಲ್ಲ ಅಂದರೆ ರಾಜ್ಯದ ಮಾನಕ್ಕೇ ಇನಾಯ.... ವಿವೇಚನಾ ಕೋಟಾ ಅಂತ ಇರೋದೆ ಇಂಥ ನೆಲೆ ಇಲ್ಲದವರಿಗೆ ನೆಲೆ ಕಾಣಿಸೋಕಲ್ವ ಅಂತ ಯೋಚಿಸಿದ್ರು. ಕೊಡೋದು ಕೊಡ್ತೀನಿ, ಎಂಥದೋ ಬಂದ ಕೆರ್ದು ಬಿಸಾಕಿದ್ರೆ ಏನಾಯ್ತದೆ... ಸೂರಿಲ್ಲದವರಿಗೆ ಸೂರು ಅಂತಾವ ಬರಿ ಮಾತ್ನಲಿ ಹೇಳೋನಲ್ಲ ಮಾಡೂ ತೋರುಸ್ತಾನೆ... ಎಂಥ ಘನವಾದ ಸೈಟು ಕೊಟ್ಟವ್ನಯ್ಯಾ ಸೂರಿಲ್ಲದವನ್ಗೆ... ಅಂತಾವ ಮೂಗಿನ ಮೇಲೆ ಬೆರಳಿಟ್ಟು ಕೋಬೇಕು... ಧರ್ಮಾತ್ಮ ಧರ್ಮಾತ್ಮ ಅನ್ನಬೇಕು ಅಂತಹ ಜಾಗ ಕೊಡಬೇಕು ಅಂತ ತಡಕಲಾರಂಭಿಸಲಾಗಿ.....

ಅಲ್ಲಿ ಬೆಂಗ್ಳೂರಲಿ ಏನಾಗಿತ್ತಪ್ಪ ಅಂದರೆ.... ರಾಜಾ ಮಹಲ್ ಬಡಾವಣೆ ಅಂತ ಇತ್ತಲ್ಲಾ ದುಡ್ಡಿರೋ ದೊಡ್ಮನುಸ್ರು ಇರೋ ಜಾಗ ಅದು. ಅದ್ರ ಪಕ್ದಲೇ ವಸಿ ಜಾಗ್ದಲಿ ಯಾವ್ದೋ ದರಿದ್ರ ಮುಂಡೇವು ಗುಡಿಸಲಾಕ್ಕೊಂಡು ಇದ್ಬುಡದಾ! ಷುರ್‍ಯಾದಸ್ಥರು ಇರೋ ಜಾಗ. ಹೊತ್ತಾರೆ ಹೊತ್ತಾರೆನೇ ಈ ಹಾಳು ಮುಖ ದರ್ಶನ ಮಾಡ್ಬೇಕಾಗಿತ್ತಲ್ಲಾ, ಅವ್ರುಗ್ಗೆ ಪೇಚಾಟ ಆದ್ರೂ ಗೊಣಗಿಕೊಂಡು ಸುಮ್ಕಿದ್ರು. ಅವರು ಸುಮ್ಕಿದ್ರೆ ಅಂತಾವ ಯಡ್ಯೂರಪ್ಪನವರೂ ಇರಾಕಾಯ್ತದ.... ಅವರ ಕಷ್ಟ ಅರ್ಥ ಮಾಡಿಕೊಂಡು ಬುಲ್‌ಡೋಜರ್ ತರ್‍ಸಿ ಗುಡಿಸಲು ಎಲ್ಲಾನೂ ಕಿತ್ತೆಸೆದ್ರು. ಆಗ ಅವರಿಗೆ ನಿರಾಳ ಆಯ್ತು! ಆ ಜಾಗ ಹಂಗೇ ಬದ್ದಿತ್ತು. ಈ ಹೈದ ರಾಘವೇಂದ್ರ ಅರ್ಜಿ ಕೊಡ್ತಲ್ಲ ಆಗ. ಓಹೋ ಅಲ್ಲೊಂದು ಜಾಗ ಅದೆ ಅನ್ನೋ ಸಂಗತಿ ಸಡನ್ ಆಗಿ ತಲೆಗೆ ಹೊಳೀತು. ಪಾರ್ಲಿಮೆಂಟು ಮೆಂಬ್ರಲ್ವಾ, ಹೋಗೋರು ಬರೋರು ಜಾಸ್ತಿ ಇರ್‍ತಾರೆ, ದೊಡ್ಡ ಮನೇನೆ ಕಟ್ಟಿಸಿಕೊಳ್ಳಲಿ ಅಂತ ದೊಡ್ಡ ಸೈಟ್ನೇ ಮಂಜೂರು ಮಾಡಿದ್ರು.

ಅದು ಯಾರ ಶಾಪವೋ ಕಾಣೆ. ದೊಡ್ಡ ದೊಡ್ಡ ಮನುಸ್ರು ಅಂತ ತಿಳ್ಕಂಡಿದವಲ್ಲಾ ಅವರಿಗೆ ಇಲ್ಲಿರಲಿ, ಅತಳ, ವಿತಳ ರಸಾತಳ ಪಾತಾಳಾದಿ ಚಪ್ಪನ್ನೈವತ್ತಾರು ದೇಶಗಳಲ್ಲೂ ತಲೆ ಮೇಲ್ಕೆ ಬಂದು ಸೂರು ಮಾಡ್ಕಳಾನ ಅಂದ್ರೂ ಒಂದಿಂಕ್ರಾನೂ ಜಾಗ ಇರಲ್ಲವಂತೆ! ಇಂತಿಂಥಾ ವರಿಗೇ ಮನೆ ಇಲ್ಲ ಅಂದ್ರೇನು ಅಂತಾನ ಮುಖ್ಯಮಂತ್ರಿಗಳಾಗಿ ಬಂದೋರೆಲ್ಲ ಸೈಟು ಕೊಡೋದು ಲಾಗಾಯ್ತಿನಿಂದ ಬಂದಿರೋ ಪದ್ಧತಿ. ಹಿಂಗೆ ಪಡೆದವರು ಏನು ಮಾಡ್ತಾರೆ.... ಬೆಂಗ್ಳೂರಿನ ಸೈಟಲ್ವ.... ಅದ್ರಲಿ ಒಂದು ಮನೆ ಕಟ್ಟಿಸಬೇಕು ಅಂತಾವ ಅಲ್ಲಿ ಇಲ್ಲಿ ಹಣ ಹೊಂಚ್ತಾ ಇರ್‍ತಾರೆ. ಇನ್ನೇನು ಮನೆ ಕಟ್ಟೋಕೆ ಶುರು ಮಾಡಬೇಕು ಅನ್ನುವಷ್ಟರಲ್ಲಿ ಅದೆಲ್ಲಿರ್‍ತದೊ ತಾಪತ್ರಯ ಅನ್ನೋದು, ಬಂದು ಮನೆ ಬಾಗ್ಲಲಿ ಅಟಕಾಯಿಸಿ ಕೊಳ್ತದೆ. ಅವರು ತಾನೆ ಏನು ಮಾಡ್ತಾರೆ ಪಾಪ ಒಂದು ಕಡೆ ಮನೆ, ಇನ್ನೊಂದು ಕಡೆ ಮರ್ಯಾದೆ. ಮರ್ಯಾದೇನ ಮಾರೋ ಹಂಗಿಲ್ಲ, ಒಲ್ಲದ ಮನಸ್ಸಿಂದ ಸೈಟನ್ನೇ ಮಾರಬೇಕಾಯ್ತದೆ! ಮಾರಿಬಿಡ್ತಾರೆ ನಿಜ. ಆಮೇಲೆ ಸೂರು ಅಂತ ಒಂದು ಬೇಕಲ್ಲ ಅನ್ನೋದು ಕಾಡಕೆ ಶುರು ಹಚ್ಗತ್ತದೆ. ಅದ್ಕೇ ಮತ್ತೆ ಅರ್ಜಿ ಗುಜರಾಯಿಸದೆ ಬೇರೆ ಮಾರ್ಗನೆ ತೋರಲ್ಲ. ಪಾಪ ಮುಖ್ಯಮಂತ್ರಿಗಳು 'ಶಾನೆ ಕಷ್ಟದಲ್ಲವ್ನೆ' ಅಂತಾವ ಅದ್ಕೂ ಮಂಜೂರಾತಿ ನೀಡ್ತಾರೆ! ಕಷ್ಟದಲ್ಲಿರೋರ್ಗೆ ಸಹಾಯ ಆಗ್ಲಿ ಅಂತ 'ಸೈಟ್ ದಾನ' ನೀಡಿದ್ರೆ.... ಮುಖ್ಯಮಂತ್ರಿ ಲ್ಯಾಂಡ್ ಮಾಫಿಯಾ ಶಾಮೀಲಾಗವ್ರೆ.... ಇಂತಹ ಸೈಟನ್ನ ಮಾರಾಟ ಮಾಡಲು ಅವಕಾಶಾನೇ ನೀಡಬಾರ್‍ದು ಅಂತೆಲ್ಲ ಅರುಚ್ತಾ ಬಿದ್ದವಲ್ಲ... ಇವೆಲ್ಲ ಏನು ದೊಡ್ಡ ಮನುಸ್ರು ಬದುಕೋಕೆ ಬಿಡ್ತಾವೊ ಏನು ಅಂತಾವ....

ಯಡ್ಯೂರಪ್ಪಗೆ ಇದ್ರಲಿ ಇಷ್ಟೊಂದು ಒಳಸುಳಿ ಅವೆ ಅಂತಾನೆ ಗೊತ್ತಿಲ್ಲವಂತೆ! ಅವ್ರೇ ಅಸೆಂಬ್ಲೀಲಿ ನನ್ನ ಬಳಿ ಮಾಹಿತಿ ಇಲ್ಲ ಅಂದವ್ರೆ. ಇದ್ರೆ ಕೊಡಿ ಅಂದವ್ರೆ. ಮಾಹಿತಿ ಇದ್ದಿದ್ರೆ ಬುಡ್ತಿದ್ರಾ ಯಡ್ಯೂರಪ್ಪನೋರು ಬಲಿ, ಬಲಿ ಹಾಕ್ಬುಡೋರು! ಹಂಗಂತ ಅವ್ರೇ ಹೇಳವ್ರೆ ಅಸೆಂಬ್ಲೀಲಿ.

ಇರಲಿ. ಈ ಕಂದ ರಾಘವೇಂದ್ರನ ಮನೆ ಒಳೀಕೂ ದೊಡ್ಡ ಮನುಸ್ರ ತಾಪತ್ರಯ ಝಾಂಡಾ ಊರದಂತೆ. ಅದ್ಕೆ ಆ ಹೈದ ಏನ್ಮಾಡ್ತು 'ಮನೇ ಇಲ್ದಿದ್ರೂ ಬದುಕ್ಬೌದು, ಮಾನಿಲ್ದೆ ಬದುಕಬಾರ್‍ದು' ಅಂದ್ಕತ್ತು, ಇದ್ದ ಒಂದು ಸೈಟ್ನೂ ಮಾರಕ್ಕೆ ಮುಂದಾಯ್ತು, ಪಾಪ ತಲೆ ಮ್ಯಾಕೆ ಒಂದು ಸೂರು ಕಟ್ಯಾನ ಅಂದ್ರೆ ಈಪಾಟ ತೊಂದರೆ ಕಾಡ್ತಾ ಅವಲ್ಲ ಅಂತ ಎಷ್ಟು ನೊಂದು ಕಂತೊ ಆ ಕಂದ. ಒಂದು ವರ್ಷಕ್ಕೆ ಆದ ಮಾರಂಗಿಲ್ವಲ್ಲ ಅದ್ಕೆ ಬಿಡಿಎಗೆ ಅರ್ಜಿ ಗುಜರಾಯಿಸ್ತು.... ಈ ತರಕೆ ಈತರ.. ಸೈಟು ಮಾರಲೇಬೇಕಾದ ತುರ್ತು ಬಂದದೆ. ಪರ್ಮಿಸನ್ ಕೊಡಿ ಅಂತಾವ ಕೇಳಿಬಂತು.

ಅಕಟಾಕಟಾ ಏನೆಂಬೆನು ರಾಘವೇಂದ್ರನ ದೌರ್ಭಾಗ್ಯಕ್ಕೆ. ಅಯ್ಯೋ ಅರ್ಜಿ ತಿರಸ್ಕಾರವಾಯಿತಲಾ...

ಪಾಪ ಎಷ್ಟು ನೊಂದುಕತ್ತೊ ಆ ಕಂದ.....

ಅಳಬೇಡ ಕಂದಾ ರಾಘವೇಂದ್ರ... ಹಾಲಕ್ಕಿ ನುಡಿತೈತೆ ಕಂದ ಹಾಲಕ್ಕಿ ನುಡಿತೈತೆ.... ಮೂರು ಗಳಿಗೆ ಮೂರು ತಾಸಿನಲ್ಲಿ ಪವಾಡವೊಂದು ಜರುಗತ್ತೈತೆ ಕಂದ... ನೀನು ಕುರಿತು ಕೊಂಡಿರೋದು ಫಲಿಸತ್ತೈತೆ ಕಂದ..... ಹಾಲಕ್ಕಿ ನುಡಿತೈತೆ ಕಂದ ಹಾಲಕ್ಕಿ ನುಡಿತೈತೆ....


****

ಸರ್ಕಾರಿ ಶಾಲೆಗಳು ಅಂದ್ರೆ ಹಾಳುಮನೆ ಇದ್ದಂಗೆ. ಯಾವಾಗ ಯಾರು ತಲೆ ಮೇಲಾದ್ರೂ ಕುಸಿದು ಬೀಳಬಹುದು. ಅವನ್ನ ರಿಪೇರಿ ಮಾಡ್ಸಿ ಹುಡುಗ್ರು ಧೈರ್ಯವಾಗಿ ಶಾಲೆ ಒಳಗೆ ಕೂರುವಂತೆ ಮಾಡ್ರಿ ಕಾಗೇರಿಯವರೆ ಅನ್ನೊ ಅರ್ಥದ ಮಾತುಗಳನ್ನು ವಿಮಲಾಗೌಡ್ರು ಹೇಳಿದ್ದಕ್ಕೆ... ಕಾಗೇರಿ ಅವರೇನಂದ್ರಂತೆ ಅಂದ್ರೆ 'ಇವ್ಕೆಲ್ಲ ನಮ್ಮತ್ರ ಕಾಸಿಲ್ಲ' ಅಂದರಂತೆ! ಅರೆರೆ, ಇದೇನಯ್ಯ ಇದು... ಯಡ್ಯೂರಪ್ಪನವರು ಭಾಷಣ ಬಿಗಿವಾಗಲೆಲ್ಲ ಸರ್ಕಾರದ ಹತ್ತಿರ ಹಣ ಬೇಜಾನಾಗಿ ಕೊಳೀತಾಬಿದ್ದದೆ, ಅಭಿವೃದ್ಧಿ ಕಾರ್ಯಗಳಿಗೆ ಹಣದ ಬರ ಇಲ್ಲ ಅಂತಾರಲ್ಲಾ... 'ಶಿಕ್ಷಣ' ಅನ್ನೋದು 'ಅಭಿವೃದ್ಧಿ' ವ್ಯಾಪ್ತಿಗೆ ಬರೋದಿಲ್ವೋ ಏನೋ. ಅದು ಹೇಗಾದರೂ ಇರಲಿ ದುಡ್ಡಿಲ್ಲ ಅಂತ ಕಾಗೇರಿ ಹೇಳಿದ್ದಕ್ಕೆ ನೀರಾವರಿಯವರು "ಹಣ ಇಲ್ಲದಿದ್ದರೆ 'ಜಿ' ಕೆಟಾಗರಿ ಸೈಟ್ ಮಾರಿ ಹೊಂದಿಸಿ" ಎಂದಿದ್ದಾರೆ!

ಅಲ್ರೀ ನೀರಾವರಿ ಅವರೆ, ಇರೋ ಇಂತಹ ಸೈಟುಗಳನ್ನೆಲ್ಲ ಮಾರಿ ಹಾಕಿದ್ರೆ ರಾಘವೇಂದ್ರ, ಭಾರತೀ ಶೆಟ್ಟಿ ಅಂತಹವರೆಲ್ಲ ಎಲ್ಲಿಹೋಗಬೇಕ್ರಿ? ಜುಜುಬಿ ಒಂದು ಸೈಟ್ ಮಾಡಿಕೊಳ್ಳಲೂ ಆಗುವುದಿಲ್ಲ ಅಂದಮೇಲೆ ರಾಜಕೀಯದಲ್ಲಿ ಯಾಕಿರಬೇಕು? ಅದರ ಬದಲು ಸನ್ಯಾಸಿ ಆಗೋದೆ ಮೇಲು ಅನ್ಸುತ್ತೆ.... ಅಲ್ವಾ....

ಸದನ ನಂತರದ ಕದನ

ಬೇಸ್ ಕಣ್ರಯ್ಯ ಬೇಸ್.... ವಿಧಾನಸಭೆ ಅಂದ್ರೆ ಹಿಂಗಿರಬೇಕು. ಮತ್ತೇನು ಎಲ್ಲಾವ್ನೋನು ಹೇಳಿದ್ದ ಕೇಳ್ತ ಸುಮ್ಕಿರಾಕಾಯ್ತದ. 'ಸಪ್ಪೆ' ಅಂತಾರೆ ಜನ. ಆದದ್ದು ಏನಪ್ಪ ಅಂದ್ರೆ... ಬೇಲಿಕೇರೀಲಿ ಅದಿರು ಕಳ್ಳತನ ಆಗದೆ ಅಂತ ಮುಖ್ಯಮಂತ್ರಿಗಳು ಒಪ್ಪಿಕೊಂಡವ್ರೆ. ಕದ್ದೋರು ಯಾರು? ಅವರ ವಜನ್ನೇಟು ಅಂತಾವ ಊರ್ಗೆತಿಳ್ದದೆ. ಹಂಗಿದ್ರೂ 'ಅದ್ಯಾರು ಹೇಳಿ,' 'ಅದ್ಯಾರು ಹೇಳಿ' ಅಂತ ತಿವೀತಾ ಇದ್ರೆ



ನೋವಾಗದೆ ಇರ್‍ತದಾ. ಕೆರಳಿದ ಸಿಂಹನಾದ ಯಡ್ಯೂರಪ್ಪನೋರು 'ಕೇಳಲೋ ಕುನ್ನಿ' ಅನ್ನೋವರಷೇಲಿ ಸಿದ್ಧರಾಮಯ್ಯ ಮೇಲೇರಿ ಹೋದ್ರು. (ಸಿದ್ಧರಾಮಯ್ಯ ಎದ್ದ ಗಳಿಗೆ ಚೆನ್ನಾಗಿತ್ತು, ಸುರೇಶ್‌ಕುಮಾರ್, ಯಡ್ಯೂರಪ್ಪ ಅವರನ್ನ ಹಿಡಿದುಕೊಳ್ಳದಿದ್ದರೆ ಮುಗಿಸೇಬಿಡ್ತಿದ್ರೇನೋ. ಹಂಗಿತ್ತು ಅವರ ರೌದ್ರಾವತಾರ.) ಹಿಂಗ್ಯಾಕೆ ನಡ್ಕೊಂಡ್ರು ಅಂದ್ರೆ ಮಾತಿನ ಎಫೆಕ್ಟ್ ಇರ್‍ಲಿ ಅಂತಾವ... ಇದುಬಿಟ್ಟು 'ಸಿದ್ಧರಾಮಯ್ಯನವರೇ ನಿಮ್ಮ ನಡವಳಿಕೆ ನಿಮ್ಮ ಸ್ಥಾನದ ಗೌರವ, ಘನತೆಗೆ ತಕ್ಕುದಲ್ಲ' ಅನ್ನೋ ಪುಳ್ಚಾರು ಭಾಷೇಲಿ ಹೇಳಿದ್ದರೆ... ಠುಸ್ ಅಂದೋಗ್ತಿತ್ತು; ಎಫೆಕ್ಟ್ ಎಕ್ಕುಟ್ಟಿ ಹೋಗ್ತಿತ್ತು. ಹೋಗಲೋ ಬಾರಲೋ ನೀನು ತಾನು ಬಳಸಿದ್ರೇ ಅದಕ್ಕೊಂದು ಇದು. ವೈರಿಯೇ ಶರಣಾಗತನಾಗೋದ್ರೆ 'ಎಫೆಕ್ಟ್'ನ ಗತಿ ಏನಾಗಬೇಕು? ಸಿದ್ಧರಾಮಯ್ಯ ಹಳ್ಳಿ ಹುಡುಗ ಅಲ್ವಾ, ಬಾಡ ತಿಂದು ಬೆಳೆದೋರು. 'ಬಬ್ರುವಾಹನ' ಸಿನಿಮಾದ ರಾಜ್‌ಕುಮಾರ್ ತರಹ 'ನೋಡು ಈ ನನ್ನ ಭುಜಬಲದ ಪರಾಕ್ರಮ' ಅಂತ ತೋಳು ತಟ್ಟಿ ಸೆಡ್ಡು ಹೊಡೆದರು.

ಕದನ ಕುತೂಹಲದ ಹಂತ ತಲುಪಿತ್ತು.

ಆದರೆ.... ವಯಸ್ಸು ಪಾಪ ಯಡ್ಯೂರಪ್ಪನವರಿಗೆ. ಅದನ್ನು ಅಂತಿಮ ಘಟ್ಟಕ್ಕೆ ತೆಗೆದುಕೊಂಡು ಹೋಗಲು ಚೈತನ್ಯ ಸಾಲದಾಯಿತು. ಹೇಗಿದ್ದರೂ ಅದು ಅದಿರು ಕಳ್ಳತನದ ವಿಷಯ ಅಲ್ವಾ.... ಎಲ್ಲೆಲ್ಲಿ ಹೆಂಗೆಂಗೆ ವಂಚನೆ ಮಾಡಬಹುದು ಎಂಬ ವಿದ್ಯೆ ಕರಗತವಾಗಿತ್ತಲ್ಲಾ ಜನಾರ್ದನ ರೆಡ್ಡಿಯವರಿಗೆ ಅವರಿಗೆ ತಮ್ಮ ಅಧಿಕಾರ ಬಿಟ್ಟು ಕೊಟ್ರು. ಕುರುಕ್ಷೇತ್ರ ಯುದ್ಧದಲ್ಲಿ ಭೀಷ್ಮನ ಎದುರು ಶಿಖಂಡಿ ಬಿಟ್ಹಂಗಾಯ್ತು, ಮುಖ್ಯಮಂತ್ರಿ ಮೊದಲು ಉತ್ತರಿಸಲಿ ಎಂದು ಪಟ್ಟುಹಿಡಿದೆವು, ವಿಪಕ್ಷಗಳು. ಕೋಟ್ಯಾಧೀಶ ಮಂತ್ರಿ; ಹೊಲಕ್ಕೂ ಹೆಲಿಕಾಪ್ಟರ್ ಬಳಸೋರು; ಉಫ್ ಅಂತ ಉರುಬಿ ಯಡ್ಡಿ ಮಂತ್ರಿಮಂಡಳ ಉರುಳಿಸೋ ತಾಕತ್ತಿರೋರು; ಅಂಥೋರಿಗೆ 'ನೀನು ಅದುವ್ಕೊಂಡು ಕುಂತ್ಕೊ' ಅನ್ನೊ ಧಾಟೀಲಿ ಹೇಳಿದ್ರೆ ಸಿಟ್ಟು ಬರೊಲ್ವಾ... ರೆಡ್ಡಿಗಾರು ಗಾರು ಗಾರಾದರು. ಅವರೊಂದಿಗೆ ನಾಕೈದು ಬೆಂಬಲಿಗರೂ ಸೇರಿದರು. ಜೋರು ಬಾಯಿ ಮಾಡುತ್ತಾ ಹಲ್ಲೆಗೆ ಮುಂದಾದರು.

ಹೋಗಿದ್ದ ಕಳೆ ಮತ್ತೆ ಸದನಕ್ಕೆ ಬಂದಿತು!

ರೆಡ್ಡಿ ಅಂಡ್ ಗ್ಯಾಂಗ್ ಅಶ್ಲೀಲ ಭಾಷೆ ಬಳಸಿ ರೌಡಿಗಳ ತರಹ ಹಲ್ಲೆ ಮಾಡಲು ಹೋದರು ಎಂದೆಲ್ಲ ಹೇಳಲಾಗುತ್ತಿದೆ. ಅದರಲ್ಲೇನು ತಪ್ಪಿದೆ ಅಂತಾವ. ಅವರಿಗೆ ಬರುವ ಭಾಷೆಯೇ ಅದು. ಅವರ ನಡವಳಿಕೆಯೂ ಅಂತಹದ್ದೆ. ಇವರೇಳಿದ್ರು ಅಂತಾವ ಕಲ್ತದ್ದು ಬುಡಾಕಾಯ್ತದ..... ಇಂತಹ ನಡವಳಿಕೆ ತಪ್ಪು ಅಂತಾರಲ್ಲ ಅವ್ರೆಲ್ಲ ಈಶ್ವರಪ್ಪನವರನ್ನು ಕೇಳಿ ನೋಡಲಿ... 'ಇದೇನು ಈಶ್ವರಪ್ಪನವರೆ, ನಿಮ್ದು ಶಿಸ್ತಿನ ಪಕ್ಷ ಅಂತೀರಿ. ನಿಮ್ಮ ಮಂತ್ರಿ ಶಾಸಕರನ್ನು ನೋಡಿದರೆ ಈ ರೀತಿ ಹಲ್ಲೆ ನಡುಸ್ತಾರೆ' ಅಂತ ಕೇಳಿದ್ದಕ್ಕೆ... ಅನುಭವಸ್ಥರು, ಇಂತಹವರ ಜೊತೇನೆ ಹೊಡೆದಾಡಿರೋರಲ್ವ ಅವರು... 'ನಾವೂ ಗಂಡಸ್ರು' ಅಂದವ್ರೆ! ಅದೆ ಮತ್ತೆ, ಮಾನ, ಮರ್ಯಾದೆ ಅನ್ಕಂಡು ಮೂಸುಗೊತ್ತಿ ತರ ಕುಂತಿದ್ರೆ ಯಾರು ಗಂಡ್ಸು ಅಂತಾರ್‍ರೀ ಅವನ್ನ. ಏನಿದ್ರೂ ಕೂಗಾಡಬೇಕು, ಹಲ್ಲೆ ಮಾಡಬೇಕು ಆಗ್ಲೆ ಅದ್ಕೊಂದು ಇದು.

ಅದೂಅಲ್ದೆ ಅವರು 'ಹೊರಕ್ಬಾ ನೋಡ್ಕಂತೀವಿ', 'ಬಳ್ಳಾರಿಗೆ ಬಾ ಮುಗಿಸ್ತೀವಿ' ಅಂತೆಲ್ಲ ಅಂದೇ ಇಲ್ವಂತೆ ಕಣ್ರಿ. ಅವರು ಹೇಳಿದ್ದು 'ಬಳ್ಳಾರಿ ಹಾಳು ಬಿದ್ದ ಹಂಪೆ ಹಂಗಾಗಿತ್ತು, ನಾವು ಹೆಂಗೆ ಅಭಿವೃದ್ಧಿ ಪಡಿಸಿದ್ದೀವಿ ನೋಡ ಬನ್ನಿ' ಎಂದು ಸೌಜನ್ಯದ ಆಹ್ವಾನ ನೀಡಿದ್ರಂತೆ. ಅದು ತಪ್ಪಾಗಿ 'ಬಳ್ಳಾರಿಗೆ ಬಾ ಮುಗಿಸ್ತೀವಿ' ಅಂತ ಕೇಳಿಸಿದೆಯಂತೆ! ಹಂಗಂತ ಶ್ರೀರಾಮುಲುನೇ ಹೇಳಿದ್ದಾರೆ. ಹಿಂಗೆಲ್ಲ ಕತೆ ಕಟ್ಟಿ ಹೇಳುವುದು ತರವಲ್ಲ. ಟಿವಿನಲ್ಲಿ ನೋಡಿದ್ದೀವಲ್ಲ ಅಂದ್ರೆ ಅವೆಲ್ಲ ಖಾಸಗಿ ಚಾನೆಲ್ಲುಗಳು ಕಣ್ರಿ ಅಧಿಕೃತ ಅಲ್ಲ. ಸರ್ಕಾರದೋರೆ ಸಿಸಿ ಟಿವಿ ಅಳವಡಿಸಿದ್ದಾರಲ್ಲ ಅದರಲ್ಲಿ ಇವೆಲ್ಲ ರೆಕಾರ್ಡ್ ಆಗಿರ್‍ತವಲ್ಲ ಅದ ನೋಡಿದ್ರೆ ತಿಳಿಯಲ್ವಾ ಅಂದ್ರೆ... ಎಲ್ಲದೇರಿ ಅವು? ವಿಧಾನಸಭೆ ಕಲಾಪ ಮುಗೀತಿದ್ದಂಗೆ ಅವ ಆಫ್ ಮಾಡಿದ್ರಂತೆ! ಈ ಕದನ ನಡೆದದ್ದು ಸದನ ಮುಗಿದ ಮೇಲಂತೆ! ನಡಾವಳಿಯನ್ನು ಬರೆದುಕೊಳ್ತಾರಲ್ಲ ಅವರತ್ರ ಆದರೂ ಸಿಗುತ್ತಲ್ವಾ ಅಂದ್ರೆ... ವಿಧಾನಸಭೆ ಕಲಾಪ ಮುಗಿದ ಮೇಲೆ ಯಾವುದನ್ನಾದರೂ ಯಾಕೆ ದಾಖಲಿಸುತ್ತಾರೆ ಹೇಳ್ರಿ. ಈಗ ನೀವೇ ತೀರ್ಮಾನ ತಗಳಿ-ಸತ್ಯವಂತ ಶ್ರೀರಾಮುಲು ಮಾತನ್ನ ನಂಬಬೇಕೋ ಅಥವಾ ಖಾಸಗಿ ಚಾನೆಲ್‌ಗಳ ಅನಧಿಕೃತ ವರದಿಗಳನ್ನೊ ಅಂತಾವ...

ತಪ್ಪಿತಸ್ಥರ ವಿರುದ್ಧ ಶಿಸ್ತಿನ ಕ್ರಮ ತೆಗೋಬೇಕು ಅಂತಾರೆ. ನಿಜ. ಯಾರ ಮೇಲೆ ತಗೋಬೇಕು? ಪುರಾವೆ ಎಲ್ಲಿದೆ? 'ಯಾರ ವಿರುದ್ಧವೂ ಶಿಸ್ತಿನ ಕ್ರಮ ಇಲ್ಲ' ಅಂತಾವ ಆಗ್ಲೆ ಹೇಳಿಬುಟ್ಟವ್ರೆ ಸಭಾಧ್ಯಕ್ಷರಲ್ಲ.. ಯಡ್ಯೂರಪ್ಪನವರು ವಿಶ್ವ ಕಪ್ ಫುಟ್‌ಬಾಲ್ ಪಂದ್ಯದಲ್ಲಿ ಜರ್ಮನಿಯ ಆಕ್ಟೋಪಸ್ ಪೌಲ್ ಭವಿಷ್ಯ ನುಡಿದಂಗೆ! ●

ಸೀನನಿಗೆ ನಾವು ಸಂಬಂಧಿಗಳಷ್ಟೇ

ಕಳೆದ ಸಂಚಿಕೆಯಲ್ಲಿ 'ನೆಲಮಂಗಲಕ್ಕೆ ಚಿತ್ತನಗೆರೆ ಮಂಜ ಬಾಂಬ್ ತಂದ' ಎಂಬ ಸುದ್ದಿಯನ್ನು ಪ್ರಕಟಿಸಿರುತ್ತೀರಿ. ಆ ಸುದ್ದಿಯಲ್ಲಿ ಹಂತಕರ ಜೊತೆ ಗೋಪಿ-ದೀಪು ಎಂಬ ಹುಡುಗರು ಕೈ ಜೋಡಿಸಿದ್ದಾರೆ ಎಂಬ ಸಾಲು ಇದೆ.

ನಾವು ಚಿತ್ತನಗೆರೆ ಸೀನನ ಸಂಬಂಧಿಗಳಾಗಿದ್ದು ನೆಲಮಂಗಲದ ಎರಡು ಗ್ಯಾಂಗ್‌ಗಳ ಕದನಕ್ಕೂ ನಮಗೂ ಸಂಬಂಧವಿರುವುದಿಲ್ಲ. ಸುಮ್ಮನೆ ನಮ್ಮ ಹೆಸರನ್ನು ಪ್ರಕಟಿಸಿ ಈಗ ನಾವು ಪೊಲೀಸ್ ಹಾಗು ರೌಡಿಗಳ ಮಧ್ಯೆ ಹೆಣಗುವ ಪರಿಸ್ಥಿತಿ ತಂದಿದ್ದೀರಿ. ನಮಗೆ ನಿಜಕ್ಕೂ ಅನ್ಯಾಯ ಆಗಿದೆ.

ನಾವಿಬ್ಬರೂ ಈಗತಾನೆ ಪದವಿ ಮುಗಿಸಿ ಕೆಲಸ ಹುಡುಕುವ ಪ್ರಯತ್ನದಲ್ಲಿದ್ದೀವಿ. ಚಿತ್ತನಗೆರೆ ಸೀನನ ಸಂಬಂಧಿಗಳಾದ ಮಾತ್ರಕ್ಕೆ ನಾವು ಖುದ್ದು ಹಂತಕರಾಗಬೇಕ? ನಿಮ್ಮ ಪತ್ರಿಕೆ ಅನವಶ್ಯಕವಾಗಿ ನಮ್ಮ ಹೆಸರನ್ನು ಎಳೆದು ತಂದು ಇವತ್ತು ನಾವು ತಲೆ ಎತ್ತಿ ತಿರುಗದ ಹಾಗೆ ಮಾಡಿದೆ. ಜೊತೆಗೆ ಜೀವ ಭಯ. ನಮ್ಮ ಬಗ್ಗೆ ತನಿಖೆ ಮಾಡಿ ದಯವಿಟ್ಟು ನಮಗಾದ ಅನ್ಯಾಯವನ್ನು ಸರಿಪಡಿಸಲು ಕೋರುತ್ತೇವೆ.

- ಗೋಪಿ ಮತ್ತು ದೀಪು, ನೆಲಮಂಗಲ, ಬೆಂಗಳೂರು ಗ್ರಾಮಾಂತರ

ಹೊಗಳಿಕೆ ತೆಗಳಿಕೆ

"ದೇಶ'ವಿದೇನಹಾ! 'ಕಾಲ'ವಿದೇನಹಾ!' ಕುರಿತ ಚರ್ಚೆ ಬಹಳ ಚೆನ್ನಾಗಿದೆ. ಯಾಕೋ ಜಿ.ರಾಜಶೇಖರ್ ಮತ್ತು ಕೆ.ಫಣಿರಾಜ್ ಅವರು ಸಾಹಿತ್ಯದೊಳಗಿನ ಬ್ರಾಹ್ಮಣ ರಾಜಕೀಯವನ್ನು ಸಮರ್ಥಿಸುವಂತೆ ಕಾಣಿಸುತ್ತಿದೆ. ಚಂದ್ರಶೇಖರ್ ಐಜೂರ್, ಮಂಜುನಾಥ ಲತಾ, ವಸಂತ ಬನ್ನಾಡಿ, ಅರುಣ್ ಜೋಳದ ಕೂಡ್ಲಿಗಿ, ಪ್ರಭು ಪಾಟೀಲ್ ಬ್ರಾಹ್ಮಣ ರಾಜಕೀಯಕ್ಕೆ ಚೆನ್ನಾಗಿಯೇ ಇಕ್ಕಿದ್ದಾರೆ. 'ಪ್ರತಿ ಸಂಸ್ಕೃತಿ'ಯಂತಹ ಮೇರು ಕೃತಿ ಬರೆದ ರಹಮತ್ ತರೀಕೆರೆಯವರ ನಿಲುವು ಅವರ ದ್ವಂದ್ವವನ್ನು ತೋರಿಸುತ್ತದೆ. ಮತ್ತೊಮ್ಮೆ ಬ್ರಾಹ್ಮಣ್ಯದ ವಿಷ ಎಷ್ಟು ಮಾರಣಾಂತಿಕ ಎಂದು ಸಾಬೀತಾಗಲಿದೆ.

- ಇಸ್ಮತ್ ಫಜೀರ್, ಮಂಗಳೂರು

ಅರ್ಥಪೂರ್ಣ ಸಂಪಾದಕೀಯ, ಕಳೆಗಟ್ಟುತ್ತಿರುವ 'ವಾಗ್ವಾದ'... 'ಲಂಕೇಶ್' ಹೀಗೆ ಬರುತ್ತಿರಲಿ.

- ಸರ್ಜಾಶಂಕರ್ ಹರಳೀಮಠ, ಶಿವಮೊಗ್ಗ

...ಾಲದ ಸೀರಿಯಲ್ ...ೊಲೆ ಮಾಡಿ ತಾನೂ ಸತ್ತ!

...ೂಧರ್ ಮತ್ತು ಹೇಮಾ ಎಂಬ ಕಲಾವಿದ ದಂಪತಿಗಳು ಒಂದು ಹೊಸ ಚಿತ್ರವನ್ನು ...ಲು ಎಲ್ಲಾ ತಯಾರಿಗಳನ್ನು ಮಾಡಿಕೊಂಡಿದ್ದರು. ಸದ್ಯದಲ್ಲೇ ಅವರ 'ಜೀವವೀಣೆ' ಚಿತ್ರ ಸೆಟ್ಟೇರಬೇಕಿತ್ತು. ಎಂತಹ ಕಷ್ಟ ಬಂದರೂ ಮನುಷ್ಯ ಅದನ್ನು ಎದುರಿಸಬೇಕಿ...ತು, ಮಾನಸಿಕ ಸ್ಥಿಮಿತದ ಮೇಲೆ ಹಿಡಿತ ಕಳೆದುಕೊಂಡು ಆತ್ಮಹತ್ಯೆಗೆ ...ಾಗಕೂಡದು ಎಂಬುದು ಅವರ ಚಿತ್ರದ ಸಂದೇಶವಾಗಿತ್ತು. ಆದರೆ ದುರಂತ ...ಹದ್ದು ನೋಡಿ... ಅಂತಹ ಚಿತ್ರವನ್ನು ಮಾಡಲು ಹೊರಟಿದ್ದ ಅದೇ ಇಂದೂಧರ್ ಬದುಕಿನ ಮತ್ತು ಮನಸ್ಸಿನ ಮೇಲೆ ಹಿಡಿತ ಕಳೆದುಕೊಂಡು, ಪ್ರೀತಿಸಿ ...ವೆಯಾಗಿದ್ದ ತನ್ನ ಹೆಂಡತಿಯನ್ನೇ ಕೊಂದು ತಾನೂ ಆತ್ಮಹತ್ಯೆಗೆ ಶರಣಾಗಿದ್ದಾರೆ...

• ಅರುಣ್ ಕುಮಾರ್.ಜಿ
arunodayagc@gmail.com


...ಾರೂ ಊಹಿಸಲು ಸಾಧ್ಯವಿಲ್ಲದ ಕೆಟ್ಟ ...ಂದು ನಡೆದು ಹೋಗಿದೆ. ಅದು ಇಂದೂಧರ್ ...ಹೇಮಾ ಎಂಬ ಕಲಾವಿದ ದಂಪತಿಗಳ ಕೊಲೆ ...ಆತ್ಮಹತ್ಯೆ... ಸೋಲು, ಸಾಲಗಳಿಂದ ಜರ್ಜರಿತ ...ನಟ ಇಂಧೂದರ್‌ಗೆ ತನ್ನ ಹೆಂಡತಿಯನ್ನು ... ತಾನೂ ಆತ್ಮಹತ್ಯೆಗೆ ಕೊರಳೊಡ್ಡುವುದನ್ನು ...ಬೇರೆ ಮಾರ್ಗವೇ ಇರಲಿಲ್ಲವೇ?

...ಯುವ ಮುನ್ನ ಇಂದೂಧರ್ ಬರೆದಿಟ್ಟಿರುವ ... "ನಮ್ಮ ಸಾವಿಗೆ ನಾವೇ ಕಾರಣ. ಬದುಕಿನ ...ಪಾರ ಆಸೆ, ಆಕಾಂಕ್ಷೆಗಳನ್ನಿಟ್ಟುಕೊಂಡಿದ್ದ ನಾವು ...ಯನ್ನು ತಲುಪದೇ ಇರುವುದರಿಂದ ಬೇಸತ್ತು ...ಮಾಡಿಕೊಳ್ಳುತ್ತಿದ್ದೇವೆ. ನಾವು ಬಹಳಷ್ಟು ಜನರಿಗೆ ...ಆಗಿದ್ದೇವೆ" ಎಂದು ದಾಖಲಿಸಿದ್ದಾರೆ.

...ೆ ಇವರಿಬ್ಬರೂ ಸತ್ತಿರುವ ರೀತಿಯನ್ನು ನೋಡಿದರೆ ... ಅನುಮಾನಗಳು ಉದ್ಭವಿಸುತ್ತವೆ. ಇಂದೂಧರ್ ...ಣು ಬಿಗಿದುಕೊಂಡಿದ್ದರೆ ಅವರ ಪತ್ನಿ ಹೇಮಾರ ...ಹ ಮಾತ್ರ ಹಾಸಿಗೆ ಮೇಲೆ ಇದ್ದದ್ದು ಇಂತಹ ...ನಗಳಿಗೆ ಕಾರಣವಾಗಿದೆ. "ನಿನ್ನನ್ನೂ ಕೊಂದು ...ಾಯುತ್ತೇನೆ" ಎಂದು ಪದೇಪದೆ ಹೆಂಡತಿಯನ್ನು ...ತ್ತಿದ್ದ ಇಂದೂಧರ್ ಪ್ರಾಕ್ಟಿಕಲ್ ಆಗಿ ಅಂತಹ ...ಳಿಯುತ್ತಾರೆ ಎಂದು ಯಾರೂ ಅಂದಾಜು ...ಲ್ಲ... ಹೆಂಡತಿಯೊಂದಿಗೆ ಜಗಳವಾಡಿ ಕೋಪ ...ಇಂದೂಧರ್ ಆಕೆಯನ್ನು ಆಕಸ್ಮಿಕವಾಗಿ ಹೊಡೆದು ...ಮಾಡಿ ನಂತರ ತಾವೂ ಆತ್ಮಹತ್ಯೆಗೆ ಶರಣಾಗಿದ್ದಾರೆ ...ವಿಚಾರ ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ...ಬ್‌ನಲ್ಲಿ ಬರೀ ಇಂಧೂದರ್ ಮಾತ್ರ ಸಹಿ ...ವುದು ಹೇಮಾರ ಕೊಲೆ ಶಂಕೆಯನ್ನು ಮತ್ತಷ್ಟು ...ಸುತ್ತದೆ.

ಇಂದೂಧರರ ಹಿನ್ನೆಲೆ

...ನ್ನಾವರ ಮೂಲದ ಇಂದೂಧರ್ ವಿದ್ಯಾವಂತ. ...ತಂದೆ ಡಾ. ಚಂದ್ರಶೇಖರಯ್ಯ. ಇಂದೂಧರ್ ...ದ ಸಾಗರ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯ...ದಿದ್ದವರು. ಆನಂತರ ಅಲ್ಲೇ ಎರಡು ವರ್ಷಗಳ ...ರರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಇಂಥ ...ರ್ ಸ್ಫುರದ್ರೂಪಿಯಾಗಿದ್ದು 'ನಟರಂಗ', 'ವೇದಿಕೆ' ...ಂಗತಂಡಗಳಲ್ಲೂ ಸಕ್ರಿಯರಾಗಿದ್ದರು. ಆ ಮೂಲಕ ...ಚಿತ್ರ ನಟನಾಗಬೇಕೆಂಬ ಅಪಾರವಾದ ಗೀಳು ...ಂಡವರು. ಅಷ್ಟೇ ಅಲ್ಲದೆ, ಒಂದು ರೀತಿಯಲ್ಲಿ ...ದಿವಂಗತ ನಟ ಸುನೀಲ್‌ನನ್ನು ಹೋಲುತ್ತಿದ್ದರು. ...ಕಾಕತಾಳೀಯವೆಂಬಂತೆ ಅದೇ ಸುನೀಲ್ ನಾಯಕನಾಗಿ ...ಶೃತಿ' ಚಿತ್ರದಲ್ಲಿ ಇಂದೂಧರ್‌ಗೂ ಛಾನ್ಸು ಸಿಕ್ಕಿತ್ತು. ...ಲ್ಲಿ ದ್ವಾರಕೀಶ್ ನಿರ್ಮಿಸಿ, ನಿರ್ದೇಶಿಸಿದ್ದ 'ಶೃತಿ' ... ಮೂಲಕ ಚಿತ್ರರಂಗಕ್ಕೆ ಇಂದೂಧರನ ಪರಿ... ಆಯಿತು. ಅಂದಹಾಗೆ, ಆ ಚಿತ್ರದಲ್ಲೇ ನಟಿ ...ದಾ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟಿದ್ದು. 'ಶೃತಿ' ...ನಾಲ್ವರು ಯುವಕರು ಬೀದಿಬೀದಿಯಲ್ಲಿ ಹಾಡುತ್ತಾ ... ಜೀವನ ಸಾಗಿಸುತ್ತಿರುತ್ತಾರೆ, ಅವರ ಬದುಕಿನಲ್ಲಿ ...ಹುಡುಗಿ ಪ್ರವೇಶಮಾಡಿ ಅವರೆಲ್ಲರ ಬೆನ್ನಿಗೆ ...ಿ ಅವರು ಯಶಸ್ಸನ್ನು ಕಾಣುತ್ತಾರೆ. ಆ ನಾಲ್ವರು ...ಲ್ಲಿ ಇಂದೂಧರ್ ಕೂಡ ಒಬ್ಬರಾಗಿ ನಟಿಸಿದ್ದರು. ...ದನಂತರ 'ಅನುಕೂಲಕ್ಕೊಬ್ಬ ಗಂಡ', 'ರಾಜಾಧಿ...ಅಣ್ಣಯ್ಯ', 'ನನ್ನ ಶತ್ರು', 'ನಿಷ್ಕರ್ಷ', 'ರಂಭೆ...ದ ಗೊಂಬೆ', 'ಯಶವಂತ್', 'ಗಿರಿ' ಸೇರಿದಂತೆ ...ಇತ್ತೀಚೆಗಷ್ಟೇ ಬಿಡುಗಡೆಯಾದ 'ಒಲವೇ ವಿಸ್ಮಯ' ...ವರೆಗೆ ಇಂದೂಧರ್ ಹತ್ತಾರು ಸಿನಿಮಾಗಳಲ್ಲಿ ನಟಿಸಿದ್ದರು. ಕನ್ನಡ ಮಾತ್ರವಲ್ಲದೆ ಮಲಯಾಳಂನ 'ಅಚ್ಚಾನುದ ಬಾರ್ಯ' ಮತ್ತು 'ಪ್ರೀತಂ' ಚಿತ್ರಗಳಲ್ಲೂ ಇಂದೂಧರ್ ಕಾಣಿಸಿಕೊಂಡಿದ್ದರು. ರವಿಚಂದ್ರನ್ ಮತ್ತು ವಿಷ್ಣುವರ್ಧನ್ ಅವರ ಚಿತ್ರಗಳಲ್ಲಂತೂ ಇಂದೂಧರ್‌ಗೆ ಪರ್ಮನೆಂಟಾಗಿ ಒಂದು ಪಾತ್ರವಂತೂ ಇದ್ದೇ ಇರುತ್ತಿತ್ತು.



ಇತ್ತೀಚೆಗೆ ಸಿನಿಮಾಗಳಲ್ಲಿ ನಟಿಸುವ ಮೂಲಕ ಬರುತ್ತಿದ್ದ ಸಂಭಾವನೆ ಸಾಲದಾದಾಗ ಇಂದೂಧರ್ ಸೀರಿಯಲ್ಲುಗಳ ಕಡೆ ಮುಖ ಮಾಡಿದ್ದರು. ಧಾರಾವಾಹಿಗಳಲ್ಲಿ ನಟಿಸುತ್ತಾ ಸಿನಿಮಾಗಳಲ್ಲೂ ಮುಖ ತೋರಿಸಿಕೊಳ್ಳುತ್ತಾ ಅದು ಹೇಗೋ ಇಂದೂಧರ್ ಬದುಕು ಸಾಗಿಸುತ್ತಿದ್ದವರು.





ಉದಯ ಟಿವಿ ಆರಂಭವಾದಾಗ 'ನಾವಿಂಥೋರು ನಮಗಿಂಥೋರು' ಎಂಬ ಧಾರಾವಾಹಿಯನ್ನೂ ಇಂದೂಧರ್ ನಿರ್ಮಿಸಿದ್ದರು. ಆ ಕಾಲದಲ್ಲಿ ಸೀರಿಯಲ್‌ಗಳನ್ನು ನಿರ್ಮಿಸುವುದು ಅಷ್ಟು ಲಾಭದಾಯಕವಾಗಿರಲಿಲ್ಲವಾದ್ದರಿಂದ ಪ್ರಥಮ ಬಾರಿಗೆ ಇಂದೂಧರ್ ಸಣ್ಣದೊಂದು ಸಾಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡರು. ಆದರೆ ಆ ನಂತರವೂ ಮೆಗಾಧಾರಾವಾಹಿಗಳಲ್ಲಿ ನಟಿಸುತ್ತಾ, ಕೆಲವು ಸೀರಿಯಲ್ಲುಗಳನ್ನು ನಿರ್ದೇಶಿಸುತ್ತಾ ಇಂದೂಧರ್ ಮುಂದೆ ಸಾಗುತ್ತಿದ್ದರೂ ಅವರ ಹಳೇ ಸಾಲ ಮಾತ್ರ ಅಡ್ಡಾದಿಡ್ಡಿ ಬೆಳೆಯುತ್ತಲೇ ಇತ್ತು.

ಈ ನಡುವೆ ಟಿ.ಎಸ್. ನಾಗಾಭರಣರ ಬಳಿ ಅಸೋಸಿಯೇಟ್ ಆಗಿ, ಕೆಲವು ಧಾರಾವಾಹಿಗಳಿಗೆ ಕಾಸ್ಟ್ಯೂಮ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದ ಎಂಜಿನಿಯರಿಂಗ್ ಪದವೀಧರೆ ಹೇಮಾ ಅವರ ಪರಿಚಯವಾಯಿತು. ಅವರ ನಡುವೆ ಪ್ರೇಮಾಂಕುರವಾಗಿ ಇಂದೂಧರ್ ಮತ್ತು ಹೇಮಾ ಮದುವೆಯೂ ಆದರು. ಹಾಸನ ಮೂಲದ ಹೇಮಾ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿಯವರ ಸಂಬಂಧಿಯೂ ಹೌದು. ಹೇಮಾ ಮತ್ತು ಇಂದೂಧರ್ ಒಬ್ಬರನ್ನೊಬ್ಬರು ಅಪಾರವಾಗಿ ಪ್ರೀತಿಸುತ್ತಿದ್ದರೂ ಹಲವೊಮ್ಮೆ ಜಗಳಕ್ಕೆ ಬಿದ್ದು ಹಾದಿ ಬೀದಿಯನ್ನೆಲ್ಲಾ ಒಂದು ಮಾಡುತ್ತಿದ್ದರು.

ಜಗಳ ಮಾಮೂಲಿ

ಇತ್ತೀಚಿನ ದಿನಗಳಲ್ಲಂತೂ ಸಿನಿಮಾಗಳಲ್ಲಾಗಲಿ, ಸೀರಿಯಲ್‌ಗಳಲ್ಲಾಗಲಿ ಅವಕಾಶಗಳಿಲ್ಲದೆ ಇಂದೂಧರ್ ಸೊರಗಿಹೋಗಿದ್ದರು. ಜೊತೆಗೆ ಸಾಲದ ಬಾಧೆಯಿಂದ ಕುಗ್ಗಿಹೋಗಿದ್ದರು. "ನಾನು ಎಂತೆಂಥಾ ಧಾರಾವಾಹಿ, ಸಿನಿಮಾಗಳಲ್ಲಿ ನಟಿಸಿದವನು, ನಿರ್ಮಿಸಿದವನು, ನಿರ್ದೇಶಿಸಿದವನು. ನನ್ನ ನಂತರ ಬಂದವರೆಲ್ಲಾ ಬೆಳೆದು ಇಂದು ಸಿನಿಮಾ, ಧಾರಾವಾಹಿ ಕ್ಷೇತ್ರಗಳಲ್ಲಿ ಮಿಂಚುತ್ತಿದ್ದಾರೆ. ನಾನು ಹೋಗಿ ಅವರ ಬಳಿ ಕೆಲಸ ಕೇಳಬೇಕಾ" ಎಂಬ ಕೀಳರಿಮೆ ಇಂಧೂದರ್‌ರನ್ನು ಮಾನಸಿಕವಾಗಿ ಜರ್ಝರಿತನನ್ನಾಗಿಸಿತ್ತು. ಇದರಿಂದಾಗಿ ಹಲವೊಮ್ಮೆ ಹಗಲಿಡೀ ಮನೆ ಬಿಟ್ಟು ಹೊರಕ್ಕೇ ಕದಲದೇ, ಸೋಂಭೇರಿಯಂತೆ ಕಾಲ ಕಳೆಯುತ್ತಿದ್ದರು. ಸಾಲಗಾರರು ಬಂದು ತೊಂದರೆ ಕೊಟ್ಟರೆ, ಬೇರೆಡೆಯಿಂದ ಸಾಲ ತಂದು ತೀರಿಸುತ್ತಿದ್ದರು. ಹೀಗೆ ಒಂದು ಸಾಲ ತೀರಿಸಲು ಹತ್ತು ಕಡೆ ಸಾಲ ಮಾಡಲಾರಂಭಿಸಿದ್ದರು. ಅವೆಲ್ಲ ಸಾಲಗಳು ಬೃಹದಾಕಾರವಾಗಿ ಬೆಳೆದು ನಿಂತಿದ್ದವು. ಇಂದೂಧರ್‌ಗೆ ಏನಿಲ್ಲವೆಂದರೂ ಎಂಭತ್ತು ಲಕ್ಷ ರೂಪಾಯಿಯ ಸಾಲ ಅಮರಿಕೊಂಡಿತ್ತು. ಈ ಮಧ್ಯೆ ಆರ್ಥಿಕ ಕುಸಿತದಿಂದ ಹೇಮಾರ ಸಾಫ್ಟ್‌ವೇರ್ ಹುದ್ದೆಯೂ ಕೈತಪ್ಪಿ ಹೋಗಿತ್ತು.

ಮಾಜಿ ಮುಖ್ಯಮಂತ್ರಿಗಳ ಮಕ್ಕಳಾದ ಮಹಿಮಾ ಪಟೇಲ್ ಮತ್ತು ಧರ್ಮ ಸಿಂಗ್ ಪುತ್ರ ಅಜಯ್ ಸಿಂಗ್ ಜೊತೆ ಸೇರಿ ಮೈನಿಂಗ್ ಬಿಜಿನೆಸ್ಸು ಮಾಡಲು ಹೋದ ಇಂಧೂದರ್ ಅಲ್ಲೂ ಬರ್ಕತ್ತಾಗದೆ ದಿವಾಳಿ ಎದ್ದುಹೋಗಿದ್ದರು.

ಹಣಕಾಸಿನ ವಿಚಾರವಾಗಿ ದಂಪತಿಗಳ ಮಧ್ಯೆ ಜಗಳ ಮಾಮೂಲಿಯಾಗಿಬಿಟ್ಟಿತ್ತು. ಸಾಲಗಾರರ ಕಾಟ ಮಿತಿಮೀರಿದಾಗ ಇಂದೂಧರ್ ವಾರಗಟ್ಟಲೆ ಮನೆ ತೊರೆದುಬಿಡುತ್ತಿದ್ದರು. ಆಗ ಮನೆಗೆ ದಾಳಿಯಿಡುತ್ತಿದ್ದ ಫೈನಾನ್ಷಿಯರ್‌ಗಳು ಹೇಮಾ ಅವರ ಮೇಲೆ ಒತ್ತಡ ಹೇರುತ್ತಿದ್ದರು. ಈಗ್ಗೆ ಸರಿಯಾಗಿ ಒಂದು ವರ್ಷದ ಮುಂಚೆ ದುಡ್ಡು ಕಾಸಿನ ವಿಚಾರಕ್ಕೆ ಹೆಂಡತಿಯೊಂದಿಗೆ ಕಿತ್ತಾಡಿಕೊಂಡ ಇಂದೂಧರ್ ಹೇಮಾ ಅವರಿಗೆ ಸಾಯುವ ಹಾಗೆ ಹೊಡೆದುಬಿಟ್ಟಿದ್ದರು. ಗಂಡನಿಂದ ವಿಪರೀತ ಹೊಡೆತ ತಿಂದ ಹೇಮಾ ಮಧ್ಯರಾತ್ರಿ ಮನೆಯ ಹಿಂದೆಯೇ ಇದ್ದ ಜಯನಗರ ನಾಲ್ಕನೇ ಬ್ಲಾಕ್ ಪೊಲೀಸ್ ಸ್ಟೇಷನ್‌ಗೆ ಹೋಗಿ ಗಂಡನ ವಿರುದ್ಧ ದೂರು ಕೊಟ್ಟಿದ್ದರು. ನಂತರ ಇಂದೂಧರ್‌ರೊಂದಿಗೆ ರಾಜಿ ಮಾಡಿಕೊಂಡು ಆತನೊಂದಿಗೇ ಬದುಕುತ್ತೇನೆ ಎಂದು ಸುಮ್ಮನಾಗಿದ್ದರು. "ಒಂದಲ್ಲ ಒಂದು ದಿನ ಅವಳನ್ನೂ ಕೊಂದು ನಾನೂ ಸೂಸೈಡ್ ಮಾಡ್ಕೋಂತಿನಿ" ಎಂದು ಇಂಧೂದರ್ ತನ್ನ ಆಪ್ತರಲ್ಲಿ ಹೇಳುತ್ತಲೇ ಇದ್ದರು. ಇಂಥ ಜಗಳಗಳು, ಉದ್ವೇಗದ ಮಾತುಗಳು ಈ ಗಂಡಹೆಂಡಿರ ನಡುವೆ ನಿರಂತರವಾಗಿ ನಡೆಯುತ್ತಿತ್ತು. ಇವರಿಬ್ಬರು ಅದೆಷ್ಟೇ ಜಗಳ ಆಡಿಕೊಂಡರೂ ಹತ್ತೇ ನಿಮಿಷದಲ್ಲಿ ಅದನ್ನು ಮರೆತು ಅನ್ಯೋನ್ಯವಾಗಿರುತ್ತಿದ್ದರು.

ಎನ್ನಾರೈಗಳ ಮೊರೆ

ನಟ ದಿಗಂತ್ ನಟಿಸಿರುವ 'ಈ ಪ್ರೀತಿ' ಎಂಬ ಸಿನಿಮಾವನ್ನು ನಿರ್ಮಾಣ ಮಾಡಿದ್ದ ಅಮೆರಿಕಾದ ಕನ್ನಡ ನಿವಾಸಿ ಡಾ.ನಾರಾಯಣ ಹೊಸ್ಮನೆ ಮತ್ತು ನಿರ್ದೇಶಕಿ ರೂಪಾ ಅಯ್ಯರ್ ಅವರಿಂದ ಇಂದೂಧರ್ ಏಳೂವರೆ ಲಕ್ಷ ರೂಪಾಯಿಗಳ ಸಾಲ ಪಡೆದು ಅದನ್ನು ಎರಡು ವರ್ಷ ಗಳಾದರೂ ತೀರಿಸಿರಲಿಲ್ಲ. ಕಡೆಗೆ ಪತ್ರಕರ್ತ ಕೆ.ಎಸ್. ವಾಸು ಮಧ್ಯಸ್ಥಿಕೆಯಲ್ಲಿ ಎರಡು ತಿಂಗಳ ಹಿಂದಷ್ಟೇ ನಾರಾಯಣ ಹೊಸ್ಮನೆಗೆ ಇಂದೂಧರ ಆ ಸಾಲವನ್ನು ವಾಪಸ್ ಮಾಡಿದ್ದರು.

ರೂಪಾ ಅಯ್ಯರ್, 'ಈ ಪ್ರೀತಿ' ಚಿತ್ರದ ನಿರ್ದೇಶಕಿ ಪ್ರಿಯಾ ಭಾರತಿ, ಇಂದೂಧರನ ಪತ್ನಿ ಹೇಮಾ- ಈ ಮೂವರೂ ಒಂದೇ ಗುಂಪಿನವರು, ಗೆಳತಿಯರು. ಇದೇ ರೂಪಾ ಅಯ್ಯರ್ 'ಮುಖಪುಟ' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ, ಪ್ರಿಯಾ ಭಾರತಿ ಕೂಡಾ 'ಈ ಪ್ರೀತಿ'ಯನ್ನು ಹಿಡಿದು ಎಳೆದಾಡುತ್ತಿದ್ದಾರೆ, ಇಂಥಾದ್ದರಲ್ಲಿ ಇಂದೂಧರ್‌ನನ್ನು ನಂಬಿದ ತನ್ನ ಬದುಕು ಮಾತ್ರ ಹಳ್ಳ ಹಿಡಿಯುತ್ತಿದೆ ಎಂಬುದು ಹೇಮಾಳ ಅತೃಪ್ತಿಯ ಕೊರಗಾಗಿತ್ತು.

ಹಾಗಿದ್ದರೂ ಇಂದೂಧರ್ ಮತ್ತು ಹೇಮಾ ಕೆಲ ದಿನಗಳ ಹಿಂದೆ ಅಮೆರಿಕಾಕ್ಕೆ ಹೋಗಿ ಅಲ್ಲಿನ ಎನ್ನಾರೈಗಳನ್ನು ಭೇಟಿ ಮಾಡಿ, ಸಿನಿಮಾ ಮಾಡುವುದಕ್ಕಾಗಿ ಸಾಕಷ್ಟು ಹಣವನ್ನೂ ಪಡೆದು ಬಂದಿದ್ದರು. 'ಜೀವವೀಣೆ' ಎಂಬ ಚಿತ್ರವನ್ನು ನಿರ್ಮಿಸಿ ಸ್ವತಃ ಹೇಮಾ ಅವರೇ ಆ ಚಿತ್ರವನ್ನು ನಿರ್ದೇಶಿಸಲು ಮುಂದಾಗಿದ್ದರು. ಪೂಜಾ ಗಾಂಧಿ, ಅನಂತ್ ನಾಗ್, ಸುಧಾರಾಣಿ ಮುಂತಾದವರ ತಾರಾಗಣ ಮತ್ತು ಟೆಕ್ನಿಕಲ್ ಟೀಂ ಕೂಡಾ ಸಿದ್ಧವಾಗಿತ್ತು.

ಮನುಷ್ಯ ಯಾಕೆ ಆತ್ಮಹತ್ಯೆಗೆ ಮೊರೆ ಹೋಗುತ್ತಾನೆ. ಒಂದೇ ಒಂದು ಕ್ಷಣದ ಮನಸ್ಥಿತಿ ಹೇಗೆ ಆತನ ಜೀವವನ್ನು ಬಲಿ ತೆಗೆದುಕೊಳ್ಳುತ್ತದೆ... ಎಂಬುದೇ 'ಜೀವವೀಣೆ'ಯ ಕಥಾಹಂದರವಾಗಿತ್ತು. ಯಾವ ಸಿನಿಮಾ ಮಾಡಿ ಸಾಮಾಜಿಕ ಸಂದೇಶ ಸಾರಬೇಕು ಎಂದು ಈ ದಂಪತಿಗಳು ಹೊರಟಿದ್ದರೋ ಅಂತಹುದ್ದೇ ಒಂದು ಕ್ಷಣದಲ್ಲಿ ಮಾನಸಿಕ ಸ್ಥಿಮಿತದ ಮೇಲೆ ಹಿಡಿತವನ್ನು ಕಳೆದುಕೊಂಡು ಸ್ವತಃ ಅವರೇ ಸಾವಿಗೀಡಾಗಿದ್ದಾರೆ.

ಆ ಮೂಲಕ ಕಲಾವಿದರ ದುರಂತ ಬದುಕಿನ ಪುಟಕ್ಕೆ ತಾವೂ ಸೇರಿಹೋಗಿದ್ದಾರೆ...

ಸಾಲವೊಂದೇ ಕಾರಣವಾ?

ಇಂದೂಧರ್ ಅವರನ್ನು ಸಾಲದ ಬಾಧೆ ಕಾಡುತ್ತಿದ್ದರೂ ಅವರನ್ನು ಹೆಚ್ಚು ಖಿನ್ನರನ್ನಾಗಿ ಮಾಡುತ್ತಿದ್ದದ್ದು ತಮಗೆ ಮಕ್ಕಳಿಲ್ಲ ಎಂಬ ಕೊರಗು. ಅಕಸ್ಮಾತ್ ಅವರಿಗೆ ಮಕ್ಕಳಿದ್ದಿದ್ದರೆ ಅದೆಷ್ಟೇ ಕಷ್ಟಗಳು ಎದುರಾದರೂ ತಮ್ಮ ಮಕ್ಕಳ ಭವಿಷ್ಯಕ್ಕಾದರೂ ಅವರು ಆತ್ಮಹತ್ಯೆ ತರಹದ ನಿರ್ಧಾರಕ್ಕೆ ಶರಣಾಗುತ್ತಿರಲಿಲ್ಲವೇನೋ.

ಇಂದೂಧರ್‌ಗೆ ಯಾವ ಕೆಟ್ಟ ಚಟಗಳಿರಲಿಲ್ಲ. ಆದರೆ ಅವರಿಗೆ ಸೀರೆ ಶೋಕಿ ಇದೆ ಎಂಬ ಗುಸುಗುಸು ಕೇಳಿಬರುತ್ತಿತ್ತು. ತಮ್ಮ ಎಲ್ಲ ಸಮಸ್ಯೆಗಳನ್ನು ಮರೆಯಲು ಅವರು ಸದಾ ಸೀರಿಯಲ್ ನಟಿಯರ ಸೆರಗು ಹಿಡಿದು ನಿಂತುಬಿಡುತ್ತಿದ್ದರು. ಅದು ಯಾವ ಮಟ್ಟಕ್ಕೆಂದರೆ ಯಾವುದೋ ಡಾಕ್ಯುಮೆಂಟರಿ ಚಿತ್ರೀಕರಣಕ್ಕೆಂದು ಹೋದರೂ, ಆ ಶೂಟಿಂಗಿಗೆ ನಟಿಯರ ಅವಶ್ಯಕತೆ ಇಲ್ಲದಿದ್ದರೂ, ಶೋಕಿಗಾಗಿ ಹುಡುಗಿಯರನ್ನು ತಮ್ಮೊಂದಿಗೆ ಕರೆದೊಯ್ಯುತ್ತಿದ್ದರು.

ಗಟ್ಟಿಗಿತ್ತಿ ಹೇಮಾ



ಇಂದೂಧರನ ಮನಸ್ಸು ಎಷ್ಟೇ ವಿಚಲಿತವಾಗಿದ್ದರೂ, ಆತ ಎಷ್ಟೇ ಡಿಪ್ರೆಷನ್ನಿಗೆ ಒಳಗಾಗಿದ್ದರೂ, ಹೇಮಾರ ಮಾನಸಿಕ ಸ್ಥಿತಿ ಮಾತ್ರ ಸ್ಥಿಮಿತದಲ್ಲೇ ಇತ್ತು. ಆಕೆಯ ಸ್ನೇಹಿತೆಯರೇ ಒಪ್ಪಿಕೊಳ್ಳುವಂತೆ ಆಕೆ "ಗಟ್ಟಿಗಿತ್ತಿ".

'ಗಂಡುಗಲಿ ಕುಮಾರ ರಾಮ' ಚಿತ್ರದಲ್ಲಿ ನಿರ್ದೇಶಕ ಭಾರ್ಗವ್ ಅವರಿಗೆ ಅಸೋಸಿಯೇಟ್ ಆಗಿದ್ದ ಹೇಮಾ ಗಂಡಿನಂಥಾ ಹೆಣ್ಣು. ಈಕೆ ಯಾವ ಕಾರಣಕ್ಕೂ ಆತ್ಮಹತ್ಯೆಗೆ ಒಪ್ಪುವಂತಹ ಕೆಳ ಮನಸ್ಸಿನ ಹೆಣ್ಣುಮಗಳಂತೂ ಅಲ್ಲ ಎಂಬುದು ಅವರ ಸ್ನೇಹಿತೆಯರ ಅಭಿಪ್ರಾಯ. ಆದ್ದರಿಂದಲೇ ಹೇಮಾ ಅವರ ಸಾವು ಇಂದೂಧರನ ಕೈಯಿಂದಲೇ ಸಂಭವಿಸಿದ್ದಾ ಎಂಬ ಅನುಮಾನ ಎಲ್ಲರನ್ನು ಕಾಡುತ್ತಿದೆ. ಸರಿಯಾದ ತನಿಖೆಯಾದರೆ ಇಂತಹ ಅನುಮಾನಗಳು ನಿವಾರಣೆಯಾಗಬಹುದು.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 28-07-2010 RNI No.

ಜಾತಿ ಭೂತ ಜಗ್ಗಯ್ಯ!

ಅತ್ತ ಕಂಠೀರವ ಸ್ಟೇಡಿಯಂನಲ್ಲಿ 'ಜೋಗಯ್ಯ'ನ ಜಾತ್ರೆ ಜೋರಾಗಿ ನಡೆಯುತ್ತಿದ್ದರೆ, ಇತ್ತ ನವರಸನಾಯಕ ಜಗ್ಗಯ್ಯ ತನ್ನ ಹಲವು ಗೆಳೆಯರ ಮುಂದೆ ಶಾಸಕನಾಗಿ ತಾನು ಮಾಡಿದ ಸಾಧನೆ ಬಗ್ಗೆ ಸಿಕ್ಕಾಪಟ್ಟೆ ಕೊಚ್ಚಿಕೊಳ್ಳುತ್ತಿದ್ದರು.

ಅಂದು ತನ್ನ ಸ್ನೇಹಿತರ ಮುಂದೆ ಜಗ್ಗೇಶ್ ಆಡಿದ ಮಾತುಗಳನ್ನು ಯಥಾವತ್ತಾಗಿ ಇಲ್ಲಿ ನೀಡಿದರೆ ಓದುಗರು ಮುಖ ಕಿವುಚುವುದು ಗ್ಯಾರೆಂಟಿ. ಹಾಗಾಗಿ ಜಗ್ಗೇಶರ ಮಾತನ್ನು ಅಲ್ಲಲ್ಲಿ ನಾವೇ ಸೆನ್ಸಾರ್ ಮಾಡಿ ಉಳಿದಿದ್ದನ್ನು ಇಲ್ಲಿ ಯಥಾವತ್ತಾಗೇ ನೀಡುತ್ತಿದ್ದೇವೆ!

"ಇದು ಆಫ್‌ದಿ ರೆಕಾರ್ಡು. ಯಾರಾದ್ರೂ ಹೋಗಿ ಪೇಪರ್‌ನಲ್ಲಿ ಕೆರೆದುಬಿಡಬೇಡ್ರಿ" ಎಂದು ಜಗ್ಗಣ್ಣ ಮಾಡಿಕೊಂಡ ಮನವಿಯನ್ನು ಪಕ್ಕಕ್ಕಿಟ್ಟಿರುವ ನಮ್ಮನ್ನು ಮಹಾನುಭಾವರಾದ ಜಗ್ಗೇಶ್ ಮನ್ನಿಸಬೇಕು...

"ಮೊದ್ಲೇ ನಾನು ಸಿನಿಮಾದವನು. ಶೂಟಿಂಗ್ ಡೇಟಿಂಗು ಅಂತಾ ಆರಾಮಾಗಿದ್ದೆ. ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಬ್ರೇಕ್ ಅನ್ನೋವ್ರು. ಹೊಟ್ಟೇ ತುಂಬಾ ಊಟಾನೂ ಹಾಕ್ತಿದ್ರು. ಆಮೇಲೆ ಒಂದು ರೌಂಡು ಪಾಚಿಕೊಂಡು ಎದ್ದುಬರೋ ಅಷ್ಟರಲ್ಲಿ ಎರಡು, ಎರಡೂವರೆ ಆಗಿರ್ತಿತ್ತು. ಹೀಗೆ ಆರಾಮಾಗಿದ್ದ ನನ್ನ ಜನ ಕರ್ಕೊಂಡ್ ಬಂದು ವಿಧಾನಸೌಧಕ್ಕೆ ಬಿಟ್‌ಬಿಟ್ಟೌವ್ರೆ... ನನಗಂತೂ ಸಾಕ್‌ಸಾಕಾಗೋಗಿದೆ. ವಿಧಾನ ಪರಿಷತ್ತಿನಲ್ಲಿ ಒಂದು ಗಂಟೆ ಥನ್ ಅಂದಾಕ್ಷಣ ಗಡಿಯಾರದ ಕಡೆನೇ ನೋಡ್ತಿರ್ತೀನಿ. ಆದರೆ ಬೇರೆಯವರು ಎರಡು ಆದ್ರೂ ಸರಿ, ಎರಡೂ ಮುಕ್ಕಾಲಾದ್ರೂ ಸರಿ ಯಾರೂ ಅಲ್ಲಾಡೋದೇ ಇಲ್ಲ. ಕಡೆಗೆ ಎಲ್ರುಗೂ ಹೊಟ್ಟೇ ಹಸಿಯೋ ಟೈಮಲ್ಲಿ ಎಲ್ಲರೂ ಎದ್ದು ನಿಂತು 'ಈ ಒಂದು ಅಂಕಿತಾನ ನಾವೆಲ್ಲಾ ವಿರೋಧಿಸಿ ಕಲಾಪದಿಂದ ವಾಕ್‌ಔಟ್ ಮಾಡ್ತೀವಿ' ಅಂತಾ ನೆಪ ಹೇಳಿ ಹೊರಕ್ಕೆ ಹೋಗ್ಬಿಡ್ತಾರೆ. ಹೊಟ್ಟೆ ಹಸಿವು ತಡೆದೂ ತಡೆದೂ ಕಣ್ಣೆಲ್ಲ ಮಂಜಾಗಿ ನನ್ನದು ನಾಯಿಪಾಡಾಗಿರುತ್ತೆ...


ಈ ಪರಿಷತ್ತಿಗೆ ಬರೋ ರಾಜಕಾರಣಿಗಳಿಗೆ ಸಿಕ್ಕಾಪಟ್ಟೆ ಮಾತಾಡೋ ಚಟ. ಒಬ್ಬೊಬ್ಬರೂ ರಬ್ಬರ್ ಥರಾ ಎಳೆದೆಳೆದೂ ಮಾತಾಡಿದ್ದನ್ನೇ ಮಾತಾಡ್ತಾ ಇರ್‍ತಾರೆ. ಈ ಬಾಲ ವಿಧವೆ ಕೈಗೆ..... (ಸೆನ್ಸಾರ್) ಕೊಡೋದೂ ಒಂದೇ, ರಾಜಕಾರಣಿಗಳ ಕೈಗೆ ಮೈಕು ಕೊಡೋದೂ ಒಂದೇ.

ಈ ನಾಣಯ್ಯ ಇದಾರಲ್ಲ... ನಾನ್ ಚಿಕ್ಕ ಹುಡುಗನಿದ್ದಾಗಿನಿಂದಲೂ ಮಾತಾಡ್ತಾನೇ ಇದಾರೆ. ಬೇರೆಯವರಿಗೆ ಮಾತಾಡೋಕ್ಕೆ ಆ ಯಪ್ಪ ಛಾನ್ಸೇ ಕೊಡಲ್ಲ. ನಾಣಯ್ಯನ ಬಿಟ್ರೆ ದತ್ತು, ದತ್ತೂನ ಬಿಟ್ರೆ ನಾಣಯ್ಯ ಒಂದೇ ಸಮನೆ ಮಾತಾಡ್ತಾನೇ ಇರ್ತಾರೆ. ಇನ್ನು ಆ ಮೋಟಮ್ಮ ಅವ್ರೆ. ಆಯಮ್ಮ ಮಾತಾಡೋದು ಏನೂಂತ ಆ ಭಗವಂತಾನೇ ಬಲ್ಲ.. ಬಾಯಿ ತೆಗೆದ್ರೆ 'ಕ್ಯಾಪಕಪಕಪಕಪಕ' (ಕೂಗಿ ತೋರಿಸುತಾ) ಅಂತಾ ಕೂಗಾಡ್ತಾಳೆ... ಅದು ಅವ್ರುಳ್ಗೇ ಸರಿಯಾಗಿ ಅರ್ಥವಾಗಲ್ಲ.

ನಾಣಯ್ಯನವರು ಜಾತ್ಯತೀತತೆಯ ಬಗ್ಗೆ ಮಾತಾಡ್ತಾ "ಭಾರತದಲ್ಲಿ ಜನ ಒಂದಾಗೋದು ಮೂತ್ರಾಲಯಗಳಲ್ಲಿ ಮಾತ್ರ. ಜನ ಅಲ್ಲಿ ಯಾವ ಜಾತಿಯನ್ನೂ ನೋಡುವುದಿಲ್ಲ" ಎಂದರು. ನಾಣಯ್ಯನವರ ಮಾತನ್ನು ಕೇಳುತ್ತಿದ್ದಂಗೇ ನನಗೆ ಮೈಯೆಲ್ಲ ಉರಿದು ಹೋಯ್ತು.

ತಕ್ಷಣ ಎದ್ದು ನಿಂತೆ...

"ರೀ ಸ್ವಾಮಿ, ಸಭಾನಾಯಕರೇ, ಎಷ್ಟೇ ಮಾತಾಡ್ತೀರ. ನಾನು ಸಣ್ಣವನಿದ್ದಾಗಿಂದಲೂ ನೋಡ್ತಾನೇ ಇದೀನಿ. ನೀವು ಮಾತಾಡ್ತಾನೇ ಇದೀರ. ನಾವು ಹೊಸದಾಗಿ ಗೆದ್ದು ಪೌರುಷದ ಹುಲಿಗಳಂಗೆ ಬಂದಿದೀವಿ. ನಮಗೂ ಒಂಚೂರು ಮಾತಾಡಕ್ಕೆ ಪರ್ಮಿಷನ್ ಕೊಡ್ರೀ.." ಎಂದೆ. ತಕ್ಷಣ ಸಭೆಯಲ್ಲಿದ್ದವರೆಲ್ಲ ಉಳ್ಳಾಡಿಕೊಂಡು ನಗಲು ಶುರುಮಾಡಿದರು.



"ನಾಣಯ್ಯ ಅವರೆ, ದಯವಿಟ್ಟು ಬೇಜಾರ್ ಮಾಡ್ಕೋಬೇಡಿ" ಅಂತಾ ಅವರನ್ನು ಮೊದಲಿಗೆ ಸಮಾಧಾನ ಮಾಡಿದೆ. ನಂತರ, ನಾನು ಬಹಳ ತಯಾರಿಯಿಂದ ಮಾತು ಶುರು ಹಚ್ಚಿಕೊಂಡೆ...

"ಅಲ್ಲಾ ಸ್ವಾಮಿ ನಾಣಯ್ಯ ಅವರೇ, ಈ ದೇಶದಲ್ಲಿ ಎಲ್ಲಾ ಒಂದಾಗೋದು ಮೂತ್ರಾಲಯದಲ್ಲಿ ಮಾತ್ರ ಅಂತ ಹೇಳಿ ತಪ್ಪು ಮಾತಾಡಿದ್ರಿ... ನಾವು ಒಂದಾ ಮಾಡೋ ಜಾಗಕ್ಕೆ ಸಾಬ್ರು ಬರಲ್ಲ, ಅವರು ಇಟ್ಟಿಗೆ ಚೂರು ಹಿಡಿದು ಸೈಡಿಗೆ ಹೋಗ್ತಾರೆ... ಆ ವಿಚಾರ ನಿಮಗೆ ಗೊತ್ತಿಲ್ಲ ಅನ್ಸುತ್ತೆ.

"ಎಲ್ಲಾದರಲ್ಲೂ ಈ ಜಾತಿ ಒಂದಾಗೋಕೆ ಸಾಧ್ಯವೇ ಇಲ್ಲ. ಸೃಷ್ಟಿಗೆ ಕಾರಣಕರ್ತ ದೇವರು, ಎಲ್ಲ ದೇವರ ಮಹಿಮೆ ಅಂತಾರೆ. ಆದ್ರೆ ಆ ದೇವ್ರೇ ಜೀವರಾಶಿಯನ್ನು ಹೇಗೆ ಸೃಷ್ಟಿ ಮಾಡಿದಾನೆ ಅನ್ನೋದಕ್ಕೆ ಜಲಚರಪ್ರಾಣಿಗಳನ್ನು ನೋಡಿ: ತಿಮಿಂಗಿಲ ತಿಮಿಂಗಿಲದ ಜೊತೆ, ಶಾರ್ಕ್ ಶಾರ್ಕ್ ಜೊತೆ, ಮೊಸಳೆ ಮೊಸಳೆ ಜೊತೆ ಮಾತ್ರ ಸೇರುತ್ತೆ. ಹಾಗೇನೇ ಹೊರಗೆ ಪರಿಸರದ ಕಡೆ ಬಂದು ಪ್ರಾಣಿ, ಪಕ್ಷಿಗಳನ್ನು ನೋಡಿ. ಹಸು ಹಸು ಜೊತೆಗೆ, ಎಮ್ಮೆ ಎಮ್ಮೆ ಜೊತೆಗೆ, ಕಾಗೆ ಕಾಗೆ ಜೊತೆಗೆ ಮಾತ್ರ ಸೇರೋದು. ಸಂಗೀತ, ನಾದಸ್ವರದಲ್ಲಿ ತಂತಿಯದ್ದೊಂದು ಜಾತಿ, ಚರ್ಮದ್ದೊಂದು ಜಾತಿ.. ಆದಕ್ಕೆ ದೇವ್ರೇ ಈ ಜಾತೀನ ಸೃಷ್ಟಿ ಮಾಡಿರೋದು.

"ಈ ಜಗತ್ತಿನಲ್ಲಿ ಜಾತ್ಯತೀತ, ಜಾತಿಯನ್ನೇ ಮೀರಿದವನು ಅನ್ನೋದಿದ್ರೆ, ಅದೂ ಒಬ್ಬನೇ ಒಬ್ಬ.. ಅದು ನಾನೇ.. 'ಜಗ್ಗೇಶ್'. ಹಿಂದೂ, ಮುಸ್ಲಿಂ, ಕ್ರೈಸ್ತರು ಅಂತಾ ಎಲ್ಲರೂ ಬಂದು ಚಪ್ಪಾಳೆ ಹೊಡೆದು ನನ್ನನ್ನು ಬೆಳೆಸಿದ್ರು. ಹೀಗಾಗಿ ನಾನೊಬ್ಬನೇ ಜಾತ್ಯತೀತ ವ್ಯಕ್ತಿ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗ್ತದೆ.

"ಇದೆಲ್ಲ ನನ್ನ ಆನ್ ರೆಕಾರ್ಡ್ ಭಾಷಣ. ನನ್ನ ಭಾಷಣ ಕೇಳಿ ಇಡೀ ಸಭೆ ಬೆಚ್ಚಿಬಿತ್ತು..."

– ಹೀಗೆ ಥೇಟ್ ಸಿನಿಮಾ ಡೈಲಾಗ್‌ಗಿಂತ ಜೋರಾಗಿ ಜಗ್ಗೇಶ್ ಅಂದು ಬೇಕಾಬಿಟ್ಟಿ ಮಾತಾಡುತ್ತಲೇ ಇದ್ದರು. ಜಗ್ಗೇಶ್ ಮಾತಾಡುತ್ತಿದ್ದುದನ್ನು ನೋಡಿದವರು ಸಿನಿಮಾಕ್ಕೂ, ರಾಜಕಾರಣಕ್ಕೂ ಇರುವ ವ್ಯತ್ಯಾಸವನ್ನು ಆತ ಇನ್ನೂ ತಿಳಿದಂತೆ ಕಾಣುತ್ತಿಲ್ಲ ಎಂದುಕೊಂಡರು. ಸ್ವತಃ ತಾನೇ ರಾಜಕಾರಣಿಯಾಗಿದ್ದರೂ, ಮಾತಿನಮಲ್ಲನಾಗಿದ್ದರೂ 'ಬಾಲ ವಿಧವೆ' ಎಂಬ ಮಾತನ್ನು ಉಪಯೋಗಿಸುವ ಜಗ್ಗೇಶ್ ಬುದ್ಧಿ ಕಲಿಯುವುದು ಈ ಶತಮಾನದಲ್ಲಿ ಸಾಧ್ಯವಿದ್ದಂತಿಲ್ಲ.



● ಅರುಣೋದಯ

ದಯೆಯಿಲ್ಲದ ಗಣೇಶ!



ಇತ್ತೀಚೆಗಷ್ಟೇ ಗಣೇಶ್ ಅಭಿನಯದ 'ಉಲ್ಲಾಸ ಉತ್ಸಾಹ' ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ದೇವರಾಜ್ ಪಾಲನ್ ಹೃದಯಾಘಾತಕ್ಕೊಳಗಾಗಿ ಆಸ್ಪತ್ರೆ ಸೇರಿದ್ದಾರೆ.

ಬಹಳಷ್ಟು ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿಯೇ ಉದ್ಯಮದಲ್ಲಿ ದುಡಿದಿದ್ದ ದೇವರಾಜ್ ಈಗಷ್ಟೇ ಸ್ವತಂತ್ರವಾಗಿ ಮೊದಲ ಚಿತ್ರವನ್ನು ನಿರ್ದೇಶಿಸಿದ್ದ ಖುಷಿಯಲ್ಲಿದ್ದರು. ಇದೇ ಸಮಯದಲ್ಲಿ ಆರೋಗ್ಯ ಕೈಕೊಟ್ಟು, ವೆನಿಸಿಯಾ ಆಸ್ಪತ್ರೆಯ ತೀವ್ರ ನಿಗಾಘಟಕದಲ್ಲಿ ಸಾವುಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.



ಆರ್ಥಿಕವಾಗಿಯೂ ಸಂಕಷ್ಟದಲ್ಲಿರುವ ದೇವರಾಜ್ ಪಾಲನ್ ಅವರಿಗೆ ನಿರ್ದೇಶಕರ ಸಂಘ ಸೇರಿದಂತೆ ಹಲವಾರು ಕಲಾವಿದರು ಸಹಾಯಹಸ್ತ ಚಾಚಿದ್ದಾರೆ. ಎಂ.ಎಸ್. ರಮೇಶ್, ನಾಗೇಂದ್ರ ಪ್ರಸಾದ್, ಶಶಾಂಕ್, ಪ್ರಿಯಾ ಹಾಸನ್, ಕಿರಣ್ ಗೋವಿ, ಟಿ.ಎನ್. ನಾಗೇಶ್‌ರಂಥ ಬಹಳಷ್ಟು ನಿರ್ದೇಶಕರು ಕೈಲಾದಷ್ಟು ಹಣ ಹೊಂದಿಸಿಕೊಟ್ಟಿದ್ದಾರೆ. ನಿರ್ಮಾಪಕ ಸೂರಪ್ಪ ಬಾಬು ಕೂಡಾ ಒಂದಷ್ಟು ಜನರಿಂದ ಹಣ ಸಂಗ್ರಹಿಸಿಕೊಟ್ಟಿದ್ದಾರೆ.

ವಿಪರ್ಯಾಸವೆಂದರೆ, ಎಲ್ಲಿ ತನ್ನಿಂದ ದುಡ್ಡು ಕೇಳಿಬಿಡುತ್ತಾರೋ ಎಂಬ ಹೆದರಿಕೆಯಿಂದ ಗೋಲ್ಡನ್ ಸ್ಟಾರ್ ಗಣೇಶ್ ದೇವರಾಜ್ ಪಾಲನ್‌ರನ್ನು ನೋಡಲೂ ಸಹ ಹೋಗಿಲ್ಲವಂತೆ. ಫೋನ್ ಮಾಡಿದರೆ ಗಣೇಶ್ ಮೊಬೈಲಿನಿಂದ 'ನಾಟ್ ಆನ್ಸರಿಂಗ್ ಯುವರ್ ಕಾಲ್' ಎಂದಷ್ಟೇ ಬರುತ್ತಿದೆಯಂತೆ.

ದೇವರಾಜ್ ತನ್ನ ಚಿತ್ರವನ್ನು ನಿರ್ದೇಶಿಸಿದ್ದರು ಎಂಬ ಸಣ್ಣ ದಯೆ, ದಾಕ್ಷಿಣ್ಯವೂ ಗಣೇಶನಿಗೆ ಇಲ್ಲವೆಂದರೆ, ಏನನ್ನಬೇಕು?

ಡಾಲರ್ಸ್ ಕಾಲೋನಿಗೆ ಗೋಲ್ಡನ್ ಸ್ಟಾರ್!

ಚಿತ್ರರಂಗದಲ್ಲಿ ಅನೇಕ ನಟನಟಿಯರ ಬರ್ತ್‌ಡೇ ಒಂದೇ ದಿನ ಬರುವುದುಂಟು. ಉದಾಹರಣೆಗೆ ಸೆಪ್ಟೆಂಬರ್ 18ರಂದು ವಿಷ್ಣು ಉಪ್ಪಿ ಮತ್ತು ಶ್ರುತಿಯ ಹುಟ್ಟುಹಬ್ಬ. ಆದರೆ ಮಾಧ್ಯಮದವರು ಮತ್ತು ಉದ್ಯಮದವರು ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದುದು ವಿಷ್ಣು ಹುಟ್ಟುಹಬ್ಬಕ್ಕೆ.

ಈಗ ಜುಲೈ 12 ಶಿವರಾಜ್‌ಕುಮಾರ್ ಹುಟ್ಟಿದ ಹಬ್ಬದಂದೇ ಗೋಲ್ಡನ್ ಗಣೇಶ್ ಅವರ ಪತ್ನಿ ಶಿಲ್ಪಾ ಅವರ ಹುಟ್ಟಿದ ಹಬ್ಬ, ಜುಲೈ 13ರಂದು ಸಾ.ರಾ.ಗೋವಿಂದು ಅವರ ಜನ್ಮದಿನ. ಬಹುಶಃ ಶಿವಣ್ಣ ಹುಟ್ಟಿದ ಹಬ್ಬದ ಸಂಭ್ರಮ ಇಲ್ಲದಿದ್ದರೆ ಇವರಿಬ್ಬರೂ ಭಾರೀ ಅದ್ದೂರಿಯಾಗಿ ತಮ್ಮ ಹುಟ್ಟಿದ ಹಬ್ಬವನ್ನು ಆಚರಿಸುತ್ತಿದ್ದರೋ ಏನೋ?

ಅಂದಹಾಗೆ, ಗೋಲ್ಡನ್ ಸ್ಟಾರ್ ತನ್ನ ಮುದ್ದಿನ ಮಡದಿ ಶಿಲ್ಪಾಗೆ ಬರ್ತ್‌ಡೇ ಗಿಫ್ಟ್ ಆಗಿ ಏನನ್ನು ನೀಡಿದ್ದಾರೆ ಗೊತ್ತೇ? ಬೆಂಗಳೂರಿನ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲಿ 50x80 ಅಳತೆಯ ನಿವೇಶನವೊಂದನ್ನು ಖರೀದಿಸಿದ ಗಣೇಶ್ ಶಿಲ್ಪಾ ಅವರ ಜನ್ಮದಿನದಂದೇ ಅದನ್ನು ರಿಜಿಸ್ಟ್ರೇಷನ್ ಮಾಡಿಸಿ ತನ್ನ ಪತ್ನಿಗೆ ಸರ್‌ಪ್ರೈಸ್ ನೀಡಿದ್ದಾರೆ. ಅಂದಹಾಗೆ ಈ ನಿವೇಶನದ ಬೆಲೆ ಕೇವಲ 5 ಕೋಟಿ ರೂಪಾಯಿ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44